ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಬುಧವಾರ, ಜನವರಿ 18, 2023

ಸಂಪುಟ : 49 ಸಂಚಿಕೆ : 246 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com

ರಾಜ್ಯಾಧ್ಯಕ್ಷರ ಬದಲಾವಣೆ: ಬಿಎಸ್‌ವೈ -ಮೋದಿ ಚರ್ಚೆ

ಬೆಂಗಳೂರು, ಜ. 17 - ವಿಧಾನಸಭಾ ಚುನಾವಣಾ ಹೊಸ್ತಿಲಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಹಾಗೂ ಸರ್ಕಾರದಲ್ಲಿ ಕೆಲವು ಮಾರ್ಪಾಟು ಮಾಡುವ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಂದ ಮಾಹಿತಿ ಪಡೆದಿದ್ದಾರೆ.

ದೆಹಲಿಯಲ್ಲಿ ನಡೆಯುತ್ತಿರುವ ಬಿಜೆಪಿಯ ರಾಷ್ಟ್ರೀಯ ಕಾರ್ಯಕಾರಿಣಿಯ ನಡುವೆಯೇ ಯಡಿಯೂರಪ್ಪ ಅವರನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡ ಪ್ರಧಾನಿಯವರು, ಮುಂಬರುವ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಸುಮಾರು 20 ನಿಮಿಷಗಳ ಕಾಲ ಚರ್ಚೆ ಮಾಡಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಯಡಿಯೂರಪ್ಪ ಅವರನ್ನು ಮೂಲೆಗುಂಪು ಮಾಡಲಾಗುತ್ತಿದೆ ಎಂಬ ಮಾಹಿತಿ ಎಲ್ಲೆಡೆ ಹರಿದಾಡುತ್ತಿರುವ ಬೆನ್ನಲ್ಲೇ ಪ್ರಧಾನಿಯವರು ಬಿಡುವಿಲ್ಲದ ಸಮಯದಲ್ಲೂ ಯಡಿಯೂರಪ್ಪ ಅವರನ್ನು ಕರೆಸಿಕೊಂಡು ಸಮಾಲೋಚನೆ ಮಾಡುವುದರ ಮೂಲಕ ಪಕ್ಷ ಅವರನ್ನು ಕಡೆಗಣಿಸಿಲ್ಲ ಎಂಬ ಸಂದೇಶವನ್ನು ನೀಡಿದ್ದಾರೆ.

ವಿಧಾನಸಭಾ ಚುನಾವಣೆಗೆ ಇನ್ನು ಅಲ್ಪಸಮಯ ಉಳಿದಿದ್ದು, ಈ ಸಂದರ್ಭದಲ್ಲಿ ಪಕ್ಷ ಸಂಘಟನೆ ಜೊತೆಗೆ ಮತದಾರರನ್ನು ಸೆಳೆಯಲು ವರ್ಚಸ್ವಿ ನಾಯಕರೊಬ್ಬರನ್ನು ಮುಂಚೂಣಿಗೆ ತರಲು ರಾಷ್ಟ್ರೀಯ ನಾಯಕರು ನಿರ್ಧರಿಸಿದ್ದಾರೆ.

ರಾಜ್ಯಾಧ್ಯಕ್ಷರ ಬದಲಾವಣೆ ಯಾವುದೇ ಕ್ಷಣದಲ್ಲಾಗಲಿದೆ. ಈಗಾಗಲೇ ವರಿಷ್ಠರಿಗೆ ಎರಡು ಮೂರು ಹೆಸರುಗಳನ್ನು ಮುಂದಿಟ್ಟುಕೊಂಡಿದ್ದಾರೆ. ಅದರಲ್ಲಿ ಯಾರಿಗೆ ಪಟ್ಟ ನೀಡಿದರೆ, ಪಕ್ಷಕ್ಕೆ ಲಾಭ ಎಂಬುದರ ಬಗ್ಗೆ ಯಡಿಯೂರಪ್ಪ (2ನೇ ಪುಟಕ್ಕೆ)

ನಗರಕ್ಕೆ ನಾಳೆ 'ಪ್ರಜಾಧ್ವನಿ' ಬಸ್ ಯಾತ್ರೆ

ಹೈಸ್ಕೂಲ್ ಮೈದಾನದಲ್ಲಿ ಬಹಿರಂಗ ಸಭೆ: ಎಸ್.ಎಸ್. ಮಲ್ಲಿಕಾರ್ಜುನ್

ದಾವಣಗೆರೆ, ಜ. 17 – ಬೆಳಗಾವಿಯಿಂದ ಆರಂಭವಾಗಿರುವ ಕಾಂಗ್ರೆಸ್ ಪಕ್ಷದ ಪ್ರಜಾಧ್ವನಿ ಬಸ್ ಯಾತ್ರೆ ಜ.19ರ ಗುರುವಾರದಂದು ನಗರಕ್ಕೆ ಆಗಮಿಸಲಿದೆ. ಹೈಸ್ಕೂಲ್ ಮೈದಾನದಲ್ಲಿ ಮಧ್ಯಾಹ್ನ 3 ಗಂಟೆಗೆ ಬಹಿರಂಗ ಸಭೆ ಆಯೋಜಿಸಲಾಗಿದೆ ಎಂದು ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಮಾವೇಶಕ್ಕೆ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಪರಿಷತ್ ಪ್ರತಿಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ್, ಕೆಪಿಸಿಸಿ ಕಾರ್ಯಾಧ್ಯಕ್ಷ ರಾದ ಸಲೀಂ ಅಹಮದ್, ಸತೀಶ್ ಜಾರಕಿಹೊಳಿ, ಈಶ್ವರ್ ಖಂಡ್ರೆ, ಧ್ರುವನಾರಾಯಣ, ರಾಮಲಿಂಗಾ ರೆಡ್ಡಿ ಮತ್ತಿತರೆ ನಾಯಕರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಆಪರೇಷನ್ ಕಮಲದ ಮೂಲಕ ಸರ್ಕಾರ ರಚಿಸಿರುವ ಬಿಜೆಪಿ ಸಾಲು ಸಾಲು ಅಕ್ರಮಗಳನ್ನು ನಡೆಸಿದೆ. ಬಿಜೆಪಿಯದು 40 (2ನೇ ಪುಟಕ್ಕೆ)

ಗುಟ್ಕಾ ಮಾರೋದು ಬಿಟ್ಟು...

ವನ್ಯಜೀವಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ವಿರುದ್ಧ ಆರೋಪ ಮಾಡುತ್ತಿರುವ ಬಿಜೆಪಿ ಮುಖಂಡರ ವಿರುದ್ಧ ಶಾಸಕ ಶಾಮನೂರು ಶಿವಶಂಕರಪ್ಪ ವಾಗ್ದಾಳಿ ನಡೆಸಿದ್ದಾರೆ. ಅವರು ಗುಟ್ಕಾ, ಕಳ್ಳಭಟ್ಟಿ, ಹೆಂಡ ಮಾರುತ್ತಾರೆ. ನಾವು ಆಕಳು, ಕುರಿ ಸಾಕಿದ್ದೇವೆ. ಅವರೂ ನಾಲ್ಕು ಹಸು ಸಾಕಿದರೆ ಗೊತ್ತಾಗುತ್ತದೆ ಎಂದರು. ಈ ಪ್ರಕರಣ ನ್ಯಾಯಾ ಲಯದಲ್ಲಿದೆ. ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಮಾಜಿ ಸಚಿವ ಮಲ್ಲಿಕಾರ್ಜುನ್ ಹೇಳಿದರು. ವನ್ಯಜೀವಿಗಳು ಪತ್ತೆಯಾಗಿರುವ ಫಾರಂ ಹೌಸ್ ಮಲ್ಲಿಕಾರ್ಜುನ್ ಅವರಿಗೆ ಸೇರಿದ್ದು ಎಂದು ಬಿಜೆಪಿ ಮುಖಂಡರು ಆರೋಪಿಸಿದ್ದರು.

ಎಸ್ಸೆಸ್ - ಎಸ್ಸೆಸ್ಸೆಂಗೆ ಟಿಕೆಟ್

ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಶಾಮನೂರು ಶಿವಶಂಕರಪ್ಪ ಹಾಗೂ ದಾವಣಗೆರೆ ಉತ್ತರ ಕ್ಷೇತ್ರದಿಂದ ಎಸ್.ಎಸ್. ಮಲ್ಲಿಕಾರ್ಜುನ್ ಸ್ಪರ್ಧಿಸಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ತಿಳಿಸಿದರು. ಕರ್ನಾಟಕದಲ್ಲೇ ಅತಿ ಹೆಚ್ಚಿನ ಮತ ಗಳಿಸಿ ಗೆದ್ದು ಬರುವ ವಿಶ್ವಾಸ ಇದೆ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

ಮಠಾಧೀಶರ ಕಣಕ್ಕೆ ಬಿಜೆಪಿ ಪರಿಶೀಲನೆ

ಹಳೆ ಮೈಸೂರು, ಉತ್ತರ ಕರ್ನಾಟಕ, ಕರಾವಳಿ ಭಾಗದ ಕೆಲ ಮಠಾಧಿಪತಿಗಳ ಜತೆ ಈಗಾಗಲೇ ಚರ್ಚೆ ಮಾಡಿದ್ದು, ಅದರಲ್ಲಿ ಕೆಲವರು ಕಣಕ್ಕಿಳಿಯಲು ಮುಂದಾಗಿದ್ದಾರೆ ಎಂಬ ಮಾಹಿತಿ ಯನ್ನು ರಾಜ್ಯ ನಾಯಕರು ವರಿಷ್ಠರಿಗೆ ತಿಳಿಸಿದ್ದಾರೆ ಎನ್ನಲಾಗಿದೆ.

ಬೆಂಗಳೂರು, ಜ. 17 - ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೆಲ ಮಠಾಧೀಶರನ್ನು ಪಕ್ಷದ ಅಭ್ಯರ್ಥಿಗಳನ್ನಾಗಿ ಕಣಕ್ಕಿಳಿಸಲು ಬಿಜೆಪಿ ಪರಿಶೀಲಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ದೆಹಲಿಯಲ್ಲಿ ನಡೆಯುತ್ತಿರುವ ಬಿಜೆಪಿಯ ಎರಡು ದಿನಗಳ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಕರ್ನಾಟಕ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ನಡೆದು, ಮುಂಬರುವ ಚುನಾವಣೆಯಲ್ಲಿ ಹಿಂದುತ್ವ ಪ್ರಮುಖವಾಗಿ ಬಿಂಬಿಸಲು ನಿರ್ಧರಿಸಲಾಗಿದೆ. ಇದರ ಅಂಗವಾಗಿ ಕೆಲವು ಪ್ರಭಾವಿ ಮಠಾಧಿಪತಿಗಳಿಗೆ ಟಿಕೆಟ್ ನೀಡಲು ಈಗಾಗಲೇ ಕೆಲವರು ಪಕ್ಷದ ಚಿಹ್ನೆಯಡಿ ಸ್ಪರ್ಧಿಸಲು ಅವಕಾಶ ಕೋರಿದ್ದಾರೆ. ಇವರ ಜೊತೆಗೆ ಮತ್ತಷ್ಟು (2ನೇ ಪುಟಕ್ಕೆ)

ದಾವಣಗೆರೆಗೆ ನೀರಾವರಿ ನಿಗಮದ ಕೇಂದ್ರ ಕಚೇರಿ: ಸರ್ಕಾರ ಆದೇಶ

ಬೆಂಗಳೂರು, ಜ. 17 - ಕರ್ನಾಟಕ ನೀರಾವರಿ ನಿಗಮದ ಕೇಂದ್ರ ಕಚೇರಿಯನ್ನು ರಾಜಧಾನಿಯಿಂದ ರಾಜ್ಯದ ಕೇಂದ್ರ ಸ್ಥಾನವಾದ ದಾವಣಗೆರೆಗೆ ಸ್ಥಳಾಂತರಿಸಲು ಸರ್ಕಾರ ಆದೇಶ ಹೊರಡಿಸಿದೆ.

ನಿಗಮದಡಿ ತುಂಗ ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳು, ತುಂಗಭದ್ರಾ ಅಣೆಕಟ್ಟು, ಕಳಸಾಬಂಡೂರಿ ಯೋಜನೆ ಘಟಪ್ರಭಾ, ಮಲಪ್ರಭಾ ಹಾಗೂ ಕಾರಂಜ ಯೋಜನೆಗಳು ಅಲ್ಲದೆ (2ನೇ ಪುಟಕ್ಕೆ)

ಜೀವನದ ಅಗ್ನಿ ಪರೀಕ್ಷೆಯಲ್ಲಿ ಮೌಲ್ಯಗಳನ್ನು ಕಳೆದುಕೊಳ್ಳದಿರಲು ತರಳಬಾಳು ಶ್ರೀ ಹಿತನುಡಿ

ಶ್ರೀ ತರಳಬಾಳು ಜಗದ್ಗುರು ರೆಸಿಡೆನ್ಷಿಯಲ್ ಸ್ಕೂಲ್ ವಾರ್ಷಿಕೋತ್ಸವ ಸಮಾರಂಭದಲ್ಲಿ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ

ದಾವಣಗೆರೆ, ಜ. 17- ಜೀವನದ ಅಗ್ನಿ ಪರೀಕ್ಷೆಯಲ್ಲಿ ಆದರ್ಶ, ಮೌಲ್ಯಗಳನ್ನು ಎಂದಿಗೂ ಕಳೆದುಕೊಳ್ಳಬೇಡಿ ಎಂದು ಸಿರಿಗೆರೆ ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ನಗರದಲ್ಲಿ ಮಂಗಳವಾರ ಸಂಜೆ ಹಮ್ಮಿಕೊಳ್ಳಲಾಗಿದ್ದ ಶ್ರೀ ತರಳಬಾಳು ಜಗದ್ಗುರು ರೆಸಿಡೆನ್ಷಿಯಲ್ ಸ್ಕೂಲ್ ವಾರ್ಷಿಕೋತ್ಸವ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ವಿದ್ಯಾರ್ಥಿ ಜೀವನದಲ್ಲಿ ಆದರ್ಶಗಳು ಹೆಚ್ಚಾಗಿರುತ್ತವೆ. ಇಂದು 'ವೈದ್ಯರಾಗಿ ಬಡವರ ಸೇವೆ ಮಾಡುತ್ತೇನೆ' ಎಂದು ಹೇಳುವ ನೀವು ಭವಿಷ್ಯದಲ್ಲಿ ಇಂತಹ ಆದರ್ಶಗಳನ್ನು ಮೈಗೂಡಿಸಿಕೊಳ್ಳುವುದು ಸುಲಭವಲ್ಲ ಎಂದು ಎಚ್ಚರಿಸಿದರು.

ಜೀವನದಲ್ಲಿ ಅನೇಕ ಅಗ್ನಿ ಪರೀಕ್ಷೆಗಳು ಎದುರಾಗುತ್ತವೆ. ಅನೇಕರನ್ನು ನಂಬಿ ಮೋಸ ಹೋಗಿ ಪಾಠ ಕಲಿಯುವಂತಹ ಘಟನೆಗಳೂ ನಡೆಯುತ್ತವೆ. ಹಾಗೆಂದ ಮಾತ್ರಕ್ಕೆ ಮೌಲ್ಯಗಳನ್ನು ಕಳೆದುಕೊಳ್ಳಬಾರದು. ವಿಶಾಲ ಅಂತಃಕರಣ, ತ್ಯಾಗ ಬುದ್ಧಿಯನ್ನು ಭವಿಷ್ಯದ ಜೀವನದಲ್ಲಿ ರೂಢಿಸಿಕೊಂಡವರ ಜೀವನ ಸಾರ್ಥಕವಾಗುತ್ತದೆ ಎಂದು ಹೇಳಿದರು.

ವಿದ್ಯಾರ್ಥಿಗಳಾಗಿ ಶಾಲೆಯಲ್ಲಿ ಪಾಠ ಓದಿ ಪರೀಕ್ಷೆ ಬರೆದು ಅಂಕ ಗಳಿಸುತ್ತೀರಿ. ಆದರೆ ಜೀವನದಲ್ಲಿ ಪರೀಕ್ಷೆ ಬರೆದು ಪಾಠ ಕಲಿಯ ಬೇಕಾಗುತ್ತದೆ. ನಿಮ್ಮ ಬದುಕಿನಲ್ಲಿ ಏನೇ ಸವಾ ಲುಗಳು ಎದುರಾದರೂ ನಿಮ್ಮ ಅಂತರಂಗದ ದನಿ ಯನ್ನು ಆಲಿಸಬೇಕು ಎಂದು ಶ್ರೀಗಳು ಹೇಳಿದರು.

ಅನುಭವ ಮಂಟಪ ಶಾಲೆಯಲ್ಲಿ ಓದಿದ ಮಕ್ಕಳು ಜಗತ್ತಿನ ಎಲ್ಲಾ ಕಡೆಯೂ ಸಿಗುತ್ತಾರೆ. ಬೆಂಗಳೂರಿನ ಯಾವುದೇ (2ನೇ ಪುಟಕ್ಕೆ)

ಹಳೆ ಪಿಂಚಣಿಯಿಂದ ಹಣಕಾಸು ಅಪಾಯ : ಆರ್.ಬಿ.ಐ. ಎಚ್ಚರಿಕೆ

ಮುಂಬೈ, ಜ. 17 – ರಾಜ್ಯಗಳು ಹಳೆಯ ಪಿಂಚಣಿ ಪದ್ಧತಿಗೆ ಮರಳುವುದರಿಂದ ಹಣಕಾಸು ಅಪಾಯವಿದೆ. ಇದರಿಂದಾಗಿ ಮುಂಬರುವ ವರ್ಷಗಳಲ್ಲಿ ಸಾಲದ ಹೊರೆ ಹೆಚ್ಚಾಗಲಿದೆ ಎಂದು ಎಚ್ಚರಿಸಿದರು.

ಹಿಮಾಚಲ ಪ್ರದೇಶದಲ್ಲಿ ಹಳೆಯ ಪಿಂಚಣಿ ಪದ್ಧತಿ ಜಾರಿಗೆ ತರಲಾಗಿದೆ. ಇದಕ್ಕೂ ಮುಂಚೆ ರಾಜಸ್ಥಾನ, ಛತ್ತೀಸ್‌ಘಡ ಹಾಗೂ ಜಾರ್ಖಂಡ್‌ಗಳು ಹಳೆಯ ಪಿಂಚಣಿಗೆ ಮರಳುವುದಾಗಿ ತಿಳಿಸಿದ್ದವು.

ರಾಜ್ಯಗಳ ಹಣಕಾಸು ಕುರಿತ ವರದಿಯೊಂದನ್ನು ಪ್ರಕಟಿಸಿರುವ ರಿಸರ್ವ್ ಬ್ಯಾಂಕ್, ಹಳೆಯ ಪಿಂಚಣಿ ಯೋಜನೆಯ ಜಾರಿಯಿಂದ ರಾಜ್ಯಗಳಿಗೆ ಆಗುವ ಉಳಿತಾಯ ತಾತ್ಕಾಲಿಕ ಎಂದು ಹೇಳಿದೆ.

ಈಗಿನ ವೆಚ್ಚವನ್ನು ಭವಿಷ್ಯದ ಮೇಲೆ ಹೇರುವುದರಿಂದ ಮುಂದಿನ ದಿನಗಳಲ್ಲಿ ಪಿಂಚಣಿಗೆ ಯಾವುದೇ ಹಣ ಉಳಿಯುವುದಿಲ್ಲ ಎಂದು ವರದಿ ಹೇಳಿದೆ.

ಮಕ್ಕಿ ಜಾಗತಿಕ ಉಗ್ರ ಎಂದು ಘೋಷಣೆ

ನವದೆಹಲಿ, ಜ. 17 – ಅಬ್ದುಲ್ ರೆಹಮಾನ್ ಮಕ್ಕಿ ಜಾಗತಿಕ ಉಗ್ರವಾದಿ ಎಂದು ವಿಶ್ವ ಸಂಸ್ಥೆ ಘೋಷಿಸಿದೆ. ಈತ ಪಾಕಿಸ್ತಾನದ ಲಷ್ಕರ್ ಎ ತೊಯ್ಬಾ ಸಂಘಟನೆಯ ಉಪಾಧ್ಯಕ್ಷನಾಗಿದ್ದಾನೆ. ಸೋಮವಾರದಂದು ಮಕ್ಕಿಯನ್ನು ವಿಶ್ವಸಂಸ್ಥೆಯ ಘೋಷಿತ ಉಗ್ರರ ಪಟ್ಟಿಗೆ ಸೇರಿಸಲಾಗಿದೆ. ಆತನ ಆಸ್ತಿ ಮುಟ್ಟುಗೋಲು, ಪ್ರಯಾಣ ನಿರ್ಬಂಧ ವಿಶ್ವಸಂಸ್ಥೆ ಕ್ರಮ ತೆಗೆದುಕೊಳ್ಳಲಿದೆ.

2022 ಮಾರ್ಚ್ ನಂತರ ಕಡಿಮೆ ಕೊರೊನಾ

ನವದೆಹಲಿ, ಜ. 17 – ಭಾರತದಲ್ಲಿ ಮಂಗಳವಾರದಂದು 89 ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಇದು ಮಾರ್ಚ್ 27, 2022ರ ನಂತರ ಅತಿ ಕಡಿಮೆ ಪ್ರಕರಣವಾಗಿವೆ. ದೇಶದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 2,035ಕ್ಕೆ ಇಳಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಮುಂದಿನ ವರ್ಷದ ಜೂನ್‌ವರೆಗೆ ನಡ್ಡಾ ಮುಂದುವರಿಕೆ

ನವದೆಹಲಿ, ಜ. 17 – ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಅವಧಿಯನ್ನು ಮುಂದಿನ ವರ್ಷದ ಜೂನ್‌ವರೆಗೆ ಮುಂದುವರೆಸಲು ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಯಲ್ಲಿ ನಿರ್ಧರಿಸಲಾಗಿದೆ. ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಹಾಲಿ ಇರುವ ಅಧ್ಯಕ್ಷರನ್ನೇ ಮುಂದುವರೆಸಲಾಗಿದೆ.

JAIN GROUP OF INSTITUTIONS
BANGALORE.-SINCE 1991
85 INSTUTIONS-80000+ STUDENTS-5000+FACULTY

JAIN PUBLIC SCHOOL,
CHALGERI, RANEBENNUR, HAVERI DIST
CBSE AFFILIATION NO:830788

LOOKING FOR PASSIONATE & EXPERIENCE GRADUATE & POST GRADUATE WITH RELEVANT PROFESSIONAL QUALIFICATION FOR THE FOLLOWING POSTS

PRIMARY TEACHERS (PRT)
SECONDARY TEACHERS(TGT)
SENIOR SECONDARY TEACHERS(PGT)

SUBJECTS – ENGLISH, KANNADA, HINDI, SOCIAL SCIENCE, MATHEMATICS, SCIENCE (BIOLOGY, CHEMISTRY, PHYSICS) COMMERCE(ACCOUNTS/BUSINESS STUDIES/ECONOMICS)

OTHER VACANCY

COMPUTER TEACHER (BCA) – LIBRARIAN (B LIB) – PE TEACHERS (B.PED) – ACCOUNTANT/ADMIN (BCOM/BBA)

HOW TO APPLY

WALK IN INTERVIEW EVERY MONDAY & WEDNESDAY BETWEEN 10.00 AM TO 3.00 PM
OR
CANDIDATES CAN SEND DETAILED RESUME WITH RELEVANT CERTIFICATES TO
jpsrnrcareers@gmail.com & MOB/WHATSAPP : 9620480713

CANDIDATES WITH FLUENCY IN ENGLISH WILL BE GIVEN PREFERANCE

॥ ಶಿವ ॥

ಶಿವಗಣಾರಾಧನೆ ಆಹ್ವಾನ

ಶ್ರೀಮತಿ ಸುಶೀಲಮ್ಮ

ಶಿವಣ್ಣ (ಮೇಷ್ಟ್ರು) ಗಡ್ಡದಗೂಳಿ

ಜನನ : 11.11.1945, ಮರಣ : 14.01.2023

ಇವರು ತಮ್ಮ 78ನೇ ವಯಸ್ಸಿನಲ್ಲಿ ಶನಿವಾರ ದಿನಾಂಕ : 14.01.2023 ರಂದು ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತನ್ನಿಮಿತ್ಯ ಮೃತರ "ಶಿವಗಣಾರಾಧನೆ" ಯನ್ನು ದಿನಾಂಕ : 18.01.2023 ರ ಬುಧವಾರ ಮಧ್ಯಾಹ್ನ 12.30ಕ್ಕೆ ನೆರವೇರಿಸಲಾಗುವುದು. ತಾವುಗಳು ಆಗಮಿಸಿ ದಿವಂಗತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖಿತಪ್ತರು :

ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮರಿಮೊಮ್ಮಕ್ಕಳು, ಹಾಗೂ ಗಡ್ಡದಗೂಳಿ ವಂಶಸ್ಥರು

ರಾಣೇಬೆನ್ನೂರು. ಫೋನ್ : 95914 29220

ವಿ.ಸೂ. : ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

॥ ಶ್ರೀ ಉಚ್ಚಂಗೆಮ್ಮ ದೇವಿ ಪ್ರಸನ್ನ ॥

ಪ್ರಥಮ ವರ್ಷದ ಚಿರಸ್ಮರಣೆ

ನಮ್ಮ ಪೂಜ್ಯ ತಾಯಿಯವರಾದ

ದಿ॥ ಶ್ರೀಮತಿ ಬಿ.ಜಿ. ಮೀನಾಕ್ಷಮ್ಮನವರು

(ದಿ॥ ಶ್ರೀ ಗೌಡ್ರ ನಾಗೇಂದ್ರಪ್ಪ ಬಿ.ಜಿ. ಇವರ ಧರ್ಮಪತ್ನಿ)

ಜನನ : 12.01.1936

ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ.
ನಿಮ್ಮ ನೆನಪು ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ.

ಮರಣ : 31.01.2022

ನೀವು ನಮ್ಮನ್ನಗಲಿ ಒಂದು ವರ್ಷವಾಯಿತು...
ನೀವು ತೋರಿದ ಮಾರ್ಗದಲ್ಲೇ ಮುನ್ನಡೆಯುತ್ತಾ.... ಸದಾ ನಿಮ್ಮ ನೆನಪಿನಲ್ಲೇ ಇರುವ...

ನಿಮ್ಮ ಕುಟುಂಬದವರು :

ಬಿ.ಜಿ. ನಾಗರಾಜ್ ಮತ್ತು ಬಿ.ಜಿ. ಶಂಕರ್‌ಪಾಟೀಲ್,
ಸಹೋದರಿಯರು, ಅಳಿಯಂದಿರು, ಸೊಸೆಯಂದಿರು,
ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ
ಗೌಡ್ರ ವಂಶಸ್ಥರು, ದೊಡ್ಡಬಾತಿ ಮತ್ತು ಬಂಧು-ಮಿತ್ರರು.

ಹೆಚ್ಚಾದ ಚಳಿ : ಮಕ್ಕಳಲ್ಲಿ ವ್ಯಾಪಿಸುತ್ತಿರುವ ಶೀತ, ಕೆಮ್ಮು, ಜ್ವರ

ಮಲೇಬೆನ್ನೂರು, ಜ.17- ಹವಾಮಾನ ಬದಲಾವಣೆಯಿಂದಾಗಿ ಬಹುತೇಕ ಎಲ್ಲಾ ಕಡೆಗಳಲ್ಲಿ ಶೀತ, ಕೆಮ್ಮು, ಜ್ವರ ಕಾಣಿಸಿಕೊಳ್ಳುತ್ತಿದ್ದು, ಮಕ್ಕಳಲ್ಲಿ ಈ ಲಕ್ಷಣಗಳು ಹೆಚ್ಚಾಗಿ ಕಂಡುಬರುತ್ತಿವೆ. ಆಸ್ಪತ್ರೆಗಳಲ್ಲಿ ಈ ಲಕ್ಷಣಗಳಿರುವ ಮಕ್ಕಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಸಮಯದಲ್ಲಿ ಈ ಲಕ್ಷಣಗಳ ಕಾಯಿಲೆ ಬರುವುದು ಸಹಜವಾಗಿದ್ದರೂ ಒಬ್ಬರಿಂದ ಮತ್ತೊಬ್ಬರಿಗೆ ಬೇಗ ಹರಡುವುದರಿಂದ ಅಂತರ ಕಾಯ್ದುಕೊಳ್ಳುವುದು ಒಳಿತು ಎಂದ ಮಲೇಬೆನ್ನೂರಿನ ಆದಿತ್ಯ ಮಕ್ಕಳ ಆಸ್ಪತ್ರೆಯ ಮಕ್ಕಳ ವೈದ್ಯ ಡಾ. ಶ್ರೀನಿವಾಸ್ ಸಲಹೆ ನೀಡಿದ್ದಾರೆ.

ಮಕ್ಕಳಲ್ಲಿ ಶೀತ, ಕೆಮ್ಮು, ಜ್ವರ ಬಾಧೆ ಹೆಚ್ಚಾಗುತ್ತಿರುವ ಕುರಿತು 'ಜನತಾವಾಣಿ'ಯೊಂದಿಗೆ ಮಾತನಾಡಿದ ಡಾ. ಶ್ರೀನಿವಾಸ್ ಅವರು, ಈಗಿನ ಯಾವುದೇ ಕಾಯಿಲೆಗಳಿಗೆ ಸ್ವಯಂ ಚಿಕಿತ್ಸೆಗಿಂತ ವೈದ್ಯರ ಸಲಹೆ ಪಡೆಯುವುದು ಸೂಕ್ತ.

ಹವಾಮಾನ ಬದಲಾವಣೆಯಿಂದಾಗಿ ಚಳಿ, ಇಬ್ಬನಿ ಹೆಚ್ಚಾಗುತ್ತಿರುವುದರಿಂದ ದೊಡ್ಡವರಿಗಿಂತ ಮಕ್ಕಳಲ್ಲಿ ಶೀತ, ಕೆಮ್ಮು, ಜ್ವರ, ಕಫ, ಸುಸ್ತು ಕಂಡುಬರುತ್ತಿದೆ. ಚಿಕಿತ್ಸೆ ತೆಗೆದುಕೊಂಡರೆ 3-4 ದಿನಗಳಲ್ಲಿ ಕಡಿಮೆ ಆಗುತ್ತದೆ. ಔಷಧ ತೆಗೆದುಕೊಂಡ 3-4 ದಿನಗಳ ನಂತರವೂ ಕಡಿಮೆ ಆಗದಿದ್ದರೆ ರಕ್ತ ಪರೀಕ್ಷೆ ಮಾಡಿಸಿಕೊಳ್ಳಬೇಕು. ಮನೆಯಲ್ಲಿ ದೊಡ್ಡವರಿಗೆ ಈ ಲಕ್ಷಣಗಳು ಕಂಡುಬಂದರೆ ಮಕ್ಕಳಿಂದ ದೂರವಿರಬೇಕು. ಮಾಸ್ಕ್ ಧರಿಸುವುದು ತುಂಬಾ ಒಳ್ಳೆಯದು. ಶೀತ, ಕೆಮ್ಮು, ಜ್ವರ ಬಂದಿರುವ ಮಕ್ಕಳು ಸಂಪೂರ್ಣವಾಗಿ ಗುಣಮುಖವಾಗುವವರೆಗೂ ಶಾಲೆಗೆ ಕಳುಹಿಸಬೇಡಿ. ಈ ವಾತಾವರಣದಲ್ಲಿ ಮಕ್ಕಳನ್ನು ಹಾಗೂ ವಯಸ್ಸಾದ ವೃದ್ಧರನ್ನು ಹೊರಗಡೆ ಕರೆದುಕೊಂಡು ಹೋಗದಿರುವುದು ಸೂಕ್ತ ಎಂದು ಡಾ. ಶ್ರೀನಿವಾಸ್ ತಿಳಿಸಿದರು.

ಮಲೇಬೆನ್ನೂರು

ಹೊರಗಡೆ ಪದಾರ್ಥಗಳನ್ನು ಮಕ್ಕಳಿಗೆ ತಿನ್ನಲು ಕೊಡಿಸಬೇಡಿ, ಮಕ್ಕಳಿಗೆ ಬಿಸಿ ನೀರು ಕುಡಿಸಿ, ಪೋಷಕರೂ ಕುಡಿಯುವುದು ಒಳ್ಳೆಯದು ಹಾಗೂ ದೇಹವನ್ನು ಆದಷ್ಟು ಬೆಚ್ಚಗಿರಿಸಿಕೊಳ್ಳಬೇಕು. ಈ ಲಕ್ಷಣಗಳು ಇರುವ ಕಾಯಿಲೆ ಕೋವಿಡ್ ಅಲ್ಲ ಎಂದು ಡಾ. ಶ್ರೀನಿವಾಸ್ ಸ್ಪಷ್ಟಪಡಿಸಿದರು.

ಅಲ್ಲಲ್ಲಿ ಚಿಕನ್ ಪಾಕ್ಸ್ ಕಾಯಿಲೆ ಮಕ್ಕಳಲ್ಲಿ ಕಂಡುಬರುತ್ತಿದ್ದು, ಈ ಬಗ್ಗೆಯೂ ಪೋಷಕರು ಆತಂಕ ಪಡಬೇಕಾಗಿಲ್ಲ. ಚಿಕಿತ್ಸೆ ನಂತರ ವಾರದೊಳಗೆ ಗುಣಮುಖರಾಗುತ್ತಾರೆ. ಈ ಕಾಯಿಲೆ ಬಂದ ಮಕ್ಕಳನ್ನು ಶಾಲೆ ಕಳುಹಿಸಬೇಡಿ ಮತ್ತು ಈ ಕಾಯಿಲೆ ಬಂದಾಗ ಮೂಢನಂಬಿಕೆಗೆ ಒಳಗಾಗದೆ ಸೂಕ್ತ ಚಿಕಿತ್ಸೆ ಕೊಡಿಸಿ ಎಂದು ಡಾ. ಶ್ರೀನಿವಾಸ್ ಮನವಿ ಮಾಡಿದ್ದಾರೆ.

ಶೀತ, ಕೆಮ್ಮು, ಕಫ, ಜ್ವರ, ಕೈ-ಕೈ ನೋವು ದೊಡ್ಡವರಲ್ಲೂ ಕಂಡುಬರುತ್ತಿದ್ದು, ಚಿಕಿತ್ಸೆ ನಂತರ 2-3 ದಿನಗಳಲ್ಲಿ ವಾಸಿಯಾಗುತ್ತಿದ್ದಾರೆಂದು ಭಾರತೀಯ ವೈದ್ಯಕೀಯ ಸಂಘದ ಮಲೇಬೆನ್ನೂರು ಶಾಖೆಯ ಅಧ್ಯಕ್ಷ ಡಾ. ಬಿ. ಚಂದ್ರಶೇಖರ್ ತಿಳಿಸಿದರು.

ವಾತಾವರಣ ಬದಲಾಗುತ್ತಿದ್ದಂತೆಯೇ ಸಹಜವಾಗಿ ಈ ಲಕ್ಷಣಗಳ ಕಾಯಿಲೆ ಕಡಿಮೆ ಆಗಲಿದೆ. ಈ ಬಗ್ಗೆ ಯಾರಿಗೂ ಆತಂಕ ಬೇಡ ಎಂದರು.

ಗರ್ಭಿಣಿ ಮಹಿಳೆಯರು ಮತ್ತು ಹೆರಿಗೆ ಆದ ಮಹಿಳೆಯರೂ ಕೂಡಾ ಚಳಿ ವಾತಾವರಣದ ಬಗ್ಗೆ ಎಚ್ಚರಿಕೆ ವಹಿಸಿ, ಬೆಚ್ಚಗಿರಬೇಕು. ನವಜಾತ ಶಿಶುಗಳನ್ನು ಬಹಳ ಜಾಗ್ರತೆಯಿಂದ ನೋಡಿಕೊಳ್ಳಬೇಕೆಂದು ಸ್ತ್ರೀ ರೋಗ ಹಾಗೂ ಹೆರಿಗೆ ತಜ್ಞ ಡಾ. ಅಪೂರ್ವ ಸಲಹೆ ನೀಡಿದ್ದಾರೆ.

ರಜೆ : ಕೆಲವು ಹಾಸ್ಟೆಲ್ ಮತ್ತು ಶಾಲೆಗಳಲ್ಲಿ ಶೀತ, ಕೆಮ್ಮು, ಜ್ವರ ಲಕ್ಷಣ ಇರುವ ಮಕ್ಕಳು ಹೆಚ್ಚಾಗಿ ಕಂಡುಬಂದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ರಜೆಯನ್ನೂ ನೀಡಿರುವ ಬಗ್ಗೆ ವರದಿಯಾಗಿದೆ.

ಕೊಟ್ಟೂರೇಶ್ವರ ಮಹಾವಿದ್ಯಾಲಯಕ್ಕೆ 55ರ ಸುವರ್ಣ ಸಂಭ್ರಮೋತ್ಸವ

ಕೊಟ್ಟೂರು, ಜ.17- ಪ್ರತಿಷ್ಠಿತ ಬಳ್ಳಾರಿ ವೀ.ವಿ. ಸಂಘ ಕೊಟ್ಟೂರು ಪಟ್ಟಣದಲ್ಲಿ 1967ರಲ್ಲಿ ಆರಂಭಿಸಿದ ಕೊಟ್ಟೂರೇಶ್ವರ ಮಹಾವಿದ್ಯಾಲಯಕ್ಕೆ ಇದೀಗ 55ರ ಸಂಭ್ರಮ. ಈ ಕಾರಣಕ್ಕಾಗಿ ಮಹಾವಿದ್ಯಾಲಯದ ಸುವರ್ಣ ಮಹೋತ್ಸವವನ್ನು ನಾಳೆ ದಿನಾಂಕ 18ರ ಬುಧವಾರ ಮತ್ತು 19ರ ಗುರುವಾರ ಎರಡು ದಿನಗಳ ಕಾಲ ಹಮ್ಮಿಕೊಂಡಿದ್ದೇವೆ ಎಂದು ಕೊಟ್ಟೂರೇಶ್ವರ ಮಹಾವಿದ್ಯಾಲಯದ ಆಡಳಿತ ಮಂಡಳಿ ಅಧ್ಯಕ್ಷ ಸಿದ್ದರಾಮ ಕಲ್ಮಠ ಹೇಳಿದರು.

ಭಾನುವಾರ ಮಹಾವಿದ್ಯಾಲಯದ ತಮ್ಮ ಕಛೇರಿಯಲ್ಲಿ ಈ ಸಂಬಂಧ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು.

1960ರ ದಶಕದಲ್ಲಿ ಈ ಭಾಗದಲ್ಲಿ ಹೆಚ್ಚಾಗಿ ಬಡ ಹಾಗೂ ಮಧ್ಯಮ ವರ್ಗದವರು ಕಾಲೇಜು ಶಿಕ್ಷಣಕ್ಕೆ ದೂರದ ನಗರಗಳಿಗೆ ತೆರಳುವುದು ಅನಿವಾರ್ಯದ ಜೊತೆಗೆ, ಪೋಷಕರಿಗೆ ಆರ್ಥಿಕ ಹೊರೆಯಾಗಿತ್ತು. ಇದನ್ನು ಮನಗಂಡು ಇಲ್ಲಿನ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುವುದನ್ನು ತಡೆಯಲು ಪಟ್ಟಣದ ಮುಖಂಡರಾಗಿದ್ದ ದಿ|| ಎಂಎಂಜೆ ಸದ್ಯೋಜಾತ, ದಿ|| ಬಿ.ಎಸ್ ವೀರಭದ್ರಪ್ಪ, ದಿ|| ಅ.ನಂಜಪ್ಪ, ದಿ|| ಗೊರ್ಲಿ ಶರಣಪ್ಪ ಸೇರಿ ಅನೇಕರು ಶ್ರಮ ವಹಿಸಿ, ವೀವಿ ಸಂಘದವರಲ್ಲಿ ಕಾಲೇಜು ಸ್ಥಾಪನೆಗೆ ಒತ್ತಾಯಿಸಿದ್ದ ಪರಿಣಾಮ ಸಂಘದ ಅಂದಿನ ಅಧ್ಯಕ್ಷ ಅಲ್ಲಂ ಕರಿಬಸಪ್ಪ, ಕಾರ್ಯದರ್ಶಿ ಎನ್.ತಿಪ್ಪಣ್ಣ ಇತರರು ಸ್ಪಂದಿಸಿ 1967ರಲ್ಲಿ ಕೊಟ್ಟೂರೇಶ್ವರ ಕಾಲೇಜು ಸ್ಥಾಪಿಸಿದ್ದರು. ಕಾಲೇಜು 50 ವರ್ಷ ಪೂರೈಸಿದ ಸಂದರ್ಭದಲ್ಲಿ ಮಹೋತ್ಸವಕ್ಕೆ ಸಿದ್ಧತೆ ಮಾಡಲಾಗಿತ್ತು. ಆದರೆ ಕೊರೊನಾ ಹಿನ್ನೆಲೆಯಲ್ಲಿ 2 ವರ್ಷಗಳವರೆಗೆ ಈ ಕಾರ್ಯಕ್ರಮವನ್ನು ಮುಂದೂಡಲಾಗಿತ್ತು. ಇದೀಗ ಈ ಮಹೋನ್ನತ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಂಡು ಎಲ್ಲಾ ಬಗೆಯ ಸಿದ್ಧತೆ ಕೈಗೊಂಡಿದ್ದೇವೆ ಎಂದರು.

ನಾಳೆ ದಿನಾಂಕ 18ರ ಬುಧವಾರ ಸುವರ್ಣ ಮಹೋತ್ಸವದ ಉದ್ಘಾಟನಾ ಸಮಾರಂಭವನ್ನು ಸರ್ಕಾರಿ ಪದವಿ ಪೂರ್ವ ಕಾಲೇಜ್ ಮೈದಾನದಲ್ಲಿ ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವೆ ಶಶಿಕಲಾ ಜೊಲ್ಲೆ ಉದ್ಘಾಟಿಸುವರು. ಸಂಘದ ಅಧ್ಯಕ್ಷ ಎಚ್.ಎಂ. ಗುರುಸಿದ್ದಸ್ವಾಮಿ ಅಧ್ಯಕ್ಷತೆ ವಹಿಸುವರು. ಇದೇ ಸಂದರ್ಭದಲ್ಲಿ ಜ್ಞಾನ ದೇಗುಲ ಸ್ಮರಣ ಸಂಚಿಕೆ, ಚರಿತ್ರೆಯ ಜಾಡಿನಲ್ಲಿ, 'ಪ್ರತಿಭೆಯ ಸಿರಿ' ಪುಸ್ತಕ ಬಿಡುಗಡೆ ಮಾಡಲಾಗುವುದು. ಪುಸ್ತಕ ಮಳಿಗೆ, ವಿಜ್ಞಾನ ವಸ್ತು ಪ್ರದರ್ಶನ ಆಯೋಜಿಸಿದೆ. ಅದೇ ದಿನ ಸಂಜೆ ಜಾನಪದ ವೈಭವ, ಜನಪದ ಜೀವನ ಮೌಲ್ಯಗಳು ಕುರಿತು ಉಪನ್ಯಾಸ, ಸಂಗೀತ ರಸ ಸಂಜೆ, ಆಲ್‌ದಿ ಬೆಸ್ಟ್ ನಾಟಕ ಪ್ರದರ್ಶನವಿರುತ್ತದೆ.

ಜ.19 ರಂದು ಸ್ತ್ರೀ ಸಂವೇದನೆ, ವರ್ತಮಾನ ಸ್ತ್ರೀ ಸಬಲೀಕರಣ ಕುರಿತು ನಡೆಯುವ ಮಹಿಳಾ ಗೋಷ್ಠಿ, ಹಳೆ ವಿದ್ಯಾರ್ಥಿಗಳಿಂದ ವಿವಿಧ ಕಾರ್ಯಕ್ರಮ, ಬಳ್ಳಾರಿ, ಹೊಸಪೇಟೆ, ಹಡಗಲಿ ಕಲಾವಿದರಿಂದ ನೃತ್ಯ ವೈಭವ, ಪ್ರಕಾಶ್ ಹೆಮ್ಮಾಡಿ ಅವರಿಂದ ಜಾದೂ ಪ್ರದರ್ಶನ ನಡೆಯಲಿದೆ. ಸಂಜೆ ಜಗದ್ಗುರು ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯುವ ಸಮಾರೋಪ ಸಮಾರಂಭದಲ್ಲಿ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಶಂಕರ ಮಹಾದೇವ ಬಿದರಿ ಸಮಾರೋಪ ನುಡಿಗಳನ್ನಾಡುವರು. ನಂತರದಲ್ಲಿ ಹಾಸ್ಯ ಕಾರ್ಯಕ್ರಮ, ಗೆಣಕಿಹಾಳ ಕಲಾವಿದರಿಂದ 'ರಕ್ತರಾತ್ರಿ' ನಾಟಕದ ಆಯ್ದ ದೃಶ್ಯಗಳ ಪ್ರದರ್ಶನ ಇರುತ್ತದೆ.

ಮಹಾವಿದ್ಯಾಲಯದ ಆಡಳಿತ ಮಂಡಳಿಯ ಸದಸ್ಯರುಗಳಾದ ಬಿ. ಕೊಟ್ರೇಶ್, ಅಡಿಕೆ ಮಂಜುನಾಥ್, ಎಸ್.ಎಂ.ಗುರುಪ್ರಸಾದ್, ಪ್ರಾಂಶುಪಾಲ ಶಾಂತಮೂರ್ತಿ ಬಿ.ಕುಲಕರ್ಣಿ ಇದ್ದರು.

ನಗರಕ್ಕೆ ಪ್ರಜಾಧ್ವನಿ ಬಸ್ ಯಾತ್ರೆ

(1ನೇ ಪುಟದಿಂದ) ಪರ್ಸೆಂಟ್ ಸರ್ಕಾರ ಎಂದು ಮಲ್ಲಿಕಾರ್ಜುನ್ ಆರೋಪಿಸಿದರು. ನಮ್ಮ ಅವಧಿಯಲ್ಲಿ ಪಾಲಿಕೆಯಲ್ಲಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಈಗ ನಗರ ಪಾಲಿಕೆಯಲ್ಲಿ 40 ಪರ್ಸೆಂಟ್ ಕಮೀಷನ್ ನಡೆದಿದೆ ಎಂದವರು ಆರೋಪಿಸಿದರು.

ಶಾಸಕ ಶಾಮನೂರು ಶಿವಶಂಕರಪ್ಪ ಮಾತನಾಡಿ, ಜನರ ಒಲವು ಕಾಂಗ್ರೆಸ್ ಕಡೆ ಇದೆ. ನಾಳೆಯೇ ಚುನಾವಣೆ ನಡೆದರೂ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದರು. ನಿನ್ನೆ ಚಿತ್ರದುರ್ಗದ ಶಾಸಕ ತಿಪ್ಪಾರೆಡ್ಡಿ ವಿರುದ್ಧ ಆರೋಪ ಕೇಳಿ ಬಂದಿದೆ. ಪಿಎಸ್‌ಐ ಹಗರಣ ಹಳೆಯದಾಗಿ ಈಗ ಸ್ಯಾಂಟ್ರೋ ರವಿ ಹಗರಣ ಹುಟ್ಟಿಕೊಂಡಿದೆ. ಪ್ರತಿನಿತ್ಯ ಈಗ ಒಳ್ಳೊಳ್ಳೆ ಹಗರಣಗಳು ಬೆಳಕಿಗೆ ಬರುತ್ತಿವೆ ಎಂದರು. ಶಾಸಕ ಎಸ್.ರಾಮಪ್ಪ ಮಾತನಾಡಿ, ಹರಿಹರದಿಂದ ಹತ್ತು ಸಾವಿರಕ್ಕೂ ಹೆಚ್ಚು ಜನರು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಮಾಜಿ ಶಾಸಕರಾದ ಡಿ.ಜಿ. ಶಾಂತನಗೌಡ, ಹೆಚ್.ಪಿ. ರಾಜೇಶ್, ಮುಖಂಡರಾದ ಅಯೂಬ್ ಪೈಲ್ವಾನ್, ತೇಜಸ್ವಿ ಪಟೇಲ್, ಕೆ.ಎಸ್. ಬಸವಂತಪ್ಪ, ಕೆ.ಪಿ. ಪಾಲಯ್ಯ, ದಿನೇಶ್ ಕೆ. ಶೆಟ್ಟಿ, ಬಸವರಾಜ್, ಆನಂದಪ್ಪ, ಎ. ನಾಗರಾಜ್, ಕೆ.ಜಿ. ಶಿವಕುಮಾರ್, ಬಿ.ಹೆಚ್. ವೀರಭದ್ರಪ್ಪ, ಎಸ್. ಮಲ್ಲಿಕಾರ್ಜುನ್ ಉಪಸ್ಥಿತರಿದ್ದರು.

ದಾವಣಗೆರೆಗೆ ನೀರಾವರಿ ನಿಗಮದ ಕಚೇರಿ

(1ನೇ ಪುಟದಿಂದ) ಇತರೆ ಏತ ನೀರಾವರಿ ಯೋಜನೆಗಳು ಇದರ ವ್ಯಾಪ್ತಿಯಲ್ಲಿ ಬರಲಿದೆ. ರಾಜ್ಯ ಸರ್ಕಾರ ಒಂಭತ್ತು ಪ್ರಮುಖ ಸರ್ಕಾರಿ ಕಚೇರಿ ಮತ್ತು ನಿಗಮಗಳನ್ನು ಕೇಂದ್ರ ಸ್ಥಾನದಿಂದ ಮಧ್ಯೆ ಹಾಗೂ ಉತ್ತರ ಕರ್ನಾಟಕ ಭಾಗಕ್ಕೆ ಸ್ಥಳಾಂತರಿಸಲು ತೀರ್ಮಾನಿಸಿದೆ. ಇದರ ಮೊದಲ ಭಾಗವಾಗಿ ಕರ್ನಾಟಕ ನೀರಾವರಿ ನಿಗಮಗಳನ್ನು ದಾವಣಗೆರೆಗೆ ಸ್ಥಳಾಂತರಿಸುವುದರಿಂದ ಯೋಜನೆಗಳು ಮತ್ತಷ್ಟು ಪ್ರಗತಿಗೆ ಸಹಕಾರಿಯಾಗಲಿದೆ ಎಂದು ಅಂದಾಜಿಸಿದೆ.

ಬದಲಾವಣೆ: ಬಿಎಸ್‌ವೈ -ಮೋದಿ ಚರ್ಚೆ

(1ನೇ ಪುಟದಿಂದ) ಅವರಿಂದ ಮಾಹಿತಿ ಪಡೆದಿದ್ದಾರೆ ಎನ್ನಲಾಗಿದೆ. ಅಷ್ಟೇ ಅಲ್ಲ ಸರ್ಕಾರದಲ್ಲೂ ಕೆಲವು ಮಾರ್ಪಾಟು ಮಾಡಲು ತೀರ್ಮಾನಿಸಿದ್ದಾರೆ. ಆ ಬಗ್ಗೆಯು ಸಲಹೆ ಪಡೆದಿದ್ದಾರೆ. ಚುನಾವಣಾ ಸಿದ್ಧತೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಪ್ರಧಾನಿಯವರು ಯಡಿಯೂರಪ್ಪ ಅವರ ಬಳಿ ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. ಇದೇ ಸಮಯದಲ್ಲಿ ಯಡಿಯೂರಪ್ಪನವರು ಶಿವಮೊಗ್ಗದಲ್ಲಿನ ಹೊಸ ವಿಮಾನ ನಿಲ್ದಾಣ ಉದ್ಘಾಟನೆಗೆ ಪ್ರಧಾನಿಯವರನ್ನು ಆಹ್ವಾನಿಸಿದ್ದಾರೆ.

ಶಿಕ್ಷಣದ ಜೊತೆಗೆ ಸಂಸ್ಕಾರ, ಸಂಸ್ಕೃತಿಗೆ ಒತ್ತು ನೀಡಿದ ತರಳಬಾಳು ವಿದ್ಯಾಸಂಸ್ಥೆ

ದಾವಣಗೆರೆ, ಜ. 17- ತರಳಬಾಳು ವಿದ್ಯಾಸಂಸ್ಥೆ ಶಿಕ್ಷಣದ ಜೊತೆಗೆ ಸಂಸ್ಕಾರ, ಸಂಸ್ಕೃತಿ ಗೆ ಒತ್ತು ನೀಡುವುದರ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಮಕ್ಕಳ ಶೈಕ್ಷಣಿಕ ಉನ್ನತಿಗೆ ಪ್ರೋತ್ಸಾಹ ನೀಡಿದೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದರು.

ಎಲೆಬೇತೂರು ಗ್ರಾಮದ ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ ಹಾಗೂ ಶ್ರೀ ತರಳಬಾಳು ಆಂಗ್ಲ ಮಾಧ್ಯಮ ನರ್ಸರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ಆವರಣದಲ್ಲಿ ವಿದ್ಯಾರ್ಥಿ ಸಂಘದ ಸಮಾರೋಪ ಸಮಾರಂಭ ಹಾಗೂ ಶಾಲಾ ವಾರ್ಷಿಕೋತ್ಸವ ಮತ್ತು ಕಾಂಕ್ರೀಟ್ ರಸ್ತೆ ಉದ್ಘಾಟನೆ, ಶಾಲಾ ಕಾಂಪೌಂಡ್ ಉದ್ಘಾಟನೆ ಹಾಗೂ ತರಳಬಾಳು ಸಿರಿ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ

ಎಲೆಬೇತೂರು ಶಾಲಾ ವಾರ್ಷಿಕೋತ್ಸವದಲ್ಲಿ ಬಿ. ವಾಮದೇವಪ್ಪ

ಅವರು ಮಾತನಾಡಿದರು.

ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ ಅಧ್ಯಕ್ಷ ಎಂ. ಬಸವರಾಜಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಶ್ರೀ ತರಳಬಾಳು ಆಂಗ್ಲ ಮಾಧ್ಯಮ ನರ್ಸರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ಅಧ್ಯಕ್ಷರಾದ ಹೆಚ್. ಬಸವರಾಜಪ್ಪ ಅವರು ಪುಟಗನಾಳು ರಸ್ತೆಯಲ್ಲಿನ ನೀರಿನ ಟ್ಯಾಂಕ್ ರಸ್ತೆ ಉದ್ಘಾಟಿಸಿದರು.

ಶಾಲಾ ಕಾಂಪೌಂಡನ್ನು ಎಂಎಲ್ಸಿ ಮೋಹನ್ ಕೊಂಡಜ್ಜಿ ಅವರ ಸೋದರ ಪುತ್ರ ನಿಖಿಲ್ ಕೊಂಡಜ್ಜಿ, ಉದ್ಘಾಟಿಸಿದರು. ಎ.ಕೆ. ಫೌಂಡೇಷನ್ ಅಧ್ಯಕ್ಷ ಬಿ. ಕೊಟ್ರೇಶ್, ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ಶಾಂತಮ್ಮ ಕೆ.ಎಂ. ಬಸವನಗೌಡ್ರು ಕಲಪನಹಳ್ಳಿ, ತರಳಬಾಳು ಆಂಗ್ಲ ಮಾಧ್ಯಮ ಶಾಲೆಯ ಕಾರ್ಯದರ್ಶಿ ಬಿ. ವಿರೂಪಾಕ್ಷಪ್ಪ, ಎಪಿ ಎಂಸಿ ಮಾಜಿ ಅಧ್ಯಕ್ಷ ಬಿ. ಪ್ರಭು, ಜಿ.ಪಂ. ಮಾಜಿ ಸದಸ್ಯ ಬಿ. ಕರಿಬಸಪ್ಪ, ಗ್ರಾ.ಪಂ. ಉಪಾಧ್ಯಕ್ಷರಾದ ಶ್ರೀಮತಿ ಅಂಜಮ್ಮ ಹನುಮಂತಪ್ಪ, ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢ ಶಾಲೆ ಮುಖ್ಯೋಪಾಧ್ಯಾಯ ಎಸ್.ಕೆ. ಹಲಗಣ್ಣನವರ, ತರಳಬಾಳು ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕಿ ಬಿ.ಎಂ. ಶಶಿಕಲಾ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತ ರಿದ್ದರು.

ವಿಜಯನಗರ ಜಿಲ್ಲಾ ವಕ್ಫ್ ಕಛೇರಿಯನ್ನು ಹೊಸಪೇಟೆಯಲ್ಲೇ ಪ್ರಾರಂಭಿಸಲು ಒತ್ತಾಯ

ಹರಪನಹಳ್ಳಿ, ಜ. 17 - ನೂತನ ವಿಜಯನಗರ ಜಿಲ್ಲೆಯ ಜಿಲ್ಲಾ ವಕ್ಫ್ ಅಧಿಕಾರಿಗಳ ಕಛೇರಿಯನ್ನು ಹೊಸಪೇಟೆ ಕೇಂದ್ರ ಸ್ಥಾನದಲ್ಲಿಯೇ ಪ್ರಾರಂಭಿಸುವಂತೆ ಪುರಸಭೆ ಸದಸ್ಯ ಜಾಕೀರ್ ಹುಸೇನ್ ಸರ್ಖಾವಾಸ್ ಮನವಿ ಮಾಡಿದ್ದಾರೆ.

ವಿಜಯನಗರ ಜಿಲ್ಲೆಯ ಜಿಲ್ಲಾ ವಕ್ಫ್ ಕಛೇರಿಯು ಹೊಸಪೇಟೆ ಕೇಂದ್ರ ಸ್ಥಾನ ಬಿಟ್ಟು ಕಮಲಾಪುರದಲ್ಲಿ ಆರಂಭ ಮಾಡಲಾಗುತ್ತಿದೆ ಎಂಬ ಮಾಹಿತಿಯು ಸಾರ್ವಜನಿಕರಲ್ಲಿ ಚರ್ಚೆಯಾಗುತ್ತಿದೆ. ಹೊಸಪೇಟೆ ನಗರ ಹೊರತುಪಡಿಸಿ ಬೇರೆ ಯಾವುದೇ ಕಡೆ ಜಿಲ್ಲಾ ವಕ್ಫ್ ಕಛೇರಿಯನ್ನು ಆರಂಭಿಸಿದರೆ ಸುತ್ತಮುತ್ತಲಿನ ತಾಲ್ಲೂಕಿನ ಸಾರ್ವಜನಿಕರ ಕೆಲಸಗಳಿಗೆ ತುಂಬಾ ಅನಾನುಕೂಲವಾಗುತ್ತದೆ ಎಂದು ತಿಳಿಸಿದ್ದಾರೆ.

6 ದಶಕಗಳ ಬಳಿಕ ಚೀನಾ ಜನಸಂಖ್ಯೆ ಇಳಿಕೆ

ಭಾರತಕ್ಕೂ ಜನಸಂಖ್ಯೆ ಕುಸಿತದ ಎಚ್ಚರಿಕೆ

ನವದೆಹಲಿ, ಜ. 17 – ಕಳೆದ ಆರು ದಶಕಗಳಲ್ಲಿ ಚೀನಾದ ಜನಸಂಖ್ಯೆ ಮೊದಲ ಬಾರಿಗೆ ಇಳಿಕೆಯಾಗಿದೆ. ವಿಶ್ವದ ಅತಿ ಹೆಚ್ಚಿನ ಜನಸಂಖ್ಯೆ ಹೊಂದಿರುವ ದೇಶವಾದ ಚೀನಾದಲ್ಲಿ ಜನಸಂಖ್ಯೆ ಕುಸಿತ ಆರಂಭವಾಗಿದೆ.

140 ಕೋಟಿ ಜನಸಂಖ್ಯೆಯ ದೇಶದಲ್ಲೀಗ ಜನನ ದರ ಕುಸಿತವಾಗುತ್ತಿದೆ. 2022ರ ಅಂತ್ಯದಲ್ಲಿ ಚೀನಾದ ಜನಸಂಖ್ಯೆ 141.17 ಕೋಟಿ ಆಗಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಜನಸಂಖ್ಯೆ 8.50 ಲಕ್ಷ ಕಡಿಮೆಯಾಗಿದೆ ಎಂದು ಚೀನಾದ ನ್ಯಾಷನಲ್ ಬ್ಯೂರೋ ಆಫ್ ಸ್ಟ್ಯಾಟಿಸ್ಟಿಕ್ಸ್ ವರದಿ ತಿಳಿಸಿದೆ.

ಈ ಅವಧಿಯಲ್ಲಿ 95.6 ಲಕ್ಷ ಶಿಶುಗಳು ಜನಿಸಿವೆ ಹಾಗೂ 1.04 ಕೋಟಿ ಜನರು ಸಾವನ್ನಪ್ಪಿದ್ದಾರೆ.

ಈ ಹಿಂದೆ 1960ರಲ್ಲಿ ಚೀನಾ ಭೀಕರ ಕ್ಷಾಮ ಎದುರಿಸಿದ ಸಂದರ್ಭದಲ್ಲಿ ಚೀನಾದ ಜನಸಂಖ್ಯೆ ಕುಸಿದಿತ್ತು. ಮಾವೋ ಜೆಡಾಂಗ್ ಅವರ ವಿನಾಶಕಾರಿ ಕೃಷಿ ನೀತಿ ಕ್ಷಾಮಕ್ಕೆ ಕಾರಣವಾಗಿತ್ತು.

ಈಗ ಚೀನಾದ ಒಂದು ಮಗುವಿನ ನೀತಿ ಜನಸಂಖ್ಯೆ ಕುಸಿತಕ್ಕೆ ಕಾರಣವಾಗಿದೆ. 1980ರಲ್ಲಿ ಒಂದು ಮಗುವಿನ ನೀತಿ ಜಾರಿಗೆ ತರಲಾಗಿತ್ತು.

ದಶಕಗಳ ಕಾಲ ಚೀನಾ ಜನಸಂಖ್ಯೆ ಇಳಿಕೆಯಾಗುವ ಕನಸು ಕಾಣುತ್ತಿತ್ತು. ಆದರೆ, ಆ ಕನಸು ಈಡೇರಿರುವುದು ಈಗ ದೊಡ್ಡ ಸಮಸ್ಯೆಯನ್ನೇ ಹೊತ್ತು ತಂದಿದೆ.

ಮುಂಬರುವ ವರ್ಷಗಳಲ್ಲಿ ಚೀನಾದ ಜನಸಂಖ್ಯೆ ಇನ್ನಷ್ಟು ಇಳಿಮುಖವಾಗಲಿದೆ. ವೃದ್ಧರ ಸಂಖ್ಯೆ ಹೆಚ್ಚಾಗಲಿದ್ದರೆ, ಯುವಕರು ಹಾಗೂ ಮಕ್ಕಳ ಸಂಖ್ಯೆ ಇಳಿಮುಖವಾಗಲಿದೆ.

ಚೀನಾದಲ್ಲಿ ಒಂದು ಮಗುವಿನ ನೀತಿ ಬದಲಿಸಿ, ಮೂರು ಮಕ್ಕಳನ್ನು ಹೊಂದಲು ಅವಕಾಶ ಕಲ್ಪಿಸಲಾಗಿದೆ. ಆದರೆ, ಆಧುನಿಕ ಪೀಳಿಗೆಯ ಜನರು ಹೆಚ್ಚು ಮಕ್ಕಳನ್ನು ಹೊಂದಲು ಬಯಸುತ್ತಿಲ್ಲ.

ಚೀನಾದ ಈ ಪರಿಸ್ಥಿತಿ ಭಾರತಕ್ಕೂ ಎಚ್ಚರಿಕೆ ಗಂಟೆಯಾಗಿದೆ ಎಂದು ಪರಿಣಿತರು ಹೇಳುತ್ತಿದ್ದಾರೆ. ಈ ವರ್ಷದ ಏಪ್ರಿಲ್ ವೇಳೆಗೆ ಚೀನಾ ಹಿಂದೆ ಹಾಕಿ ಭಾರತ ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶವಾಗಲಿದೆ.

ಚೀನಾ ಬಲವಂತದಿಂದ ಒಂದು ಮಗುವಿನ ನೀತಿ ಜಾರಿಗೆ ತಂದಿತ್ತು. ಇದರಿಂದ ಭಾರತ ಪಾಠ ಕಲಿಯಬೇಕಿದೆ. ಕಡಿಮೆ ಮಕ್ಕಳನ್ನು ಹೊಂದುವಂತೆ ಬಲವಂತ ಪಡಿಸಬಾರದು ಎಂಬ ಅಭಿಪ್ರಾಯಗಳು ಕೇಳಿ ಬಂದಿವೆ.

ಸಿಕ್ಕಿಂ, ಗೋವಾ, ಜಮ್ಮು ಮತ್ತು ಕಾಶ್ಮೀರ, ಕೇರಳ, ಪುದುಚೇರಿ, ಪಂಜಾಬ್, ಲಡಾಖ್, ಪಶ್ಚಿಮ ಬಂಗಾಳ ಹಾಗೂ ಲಕ್ಷದ್ವೀಪಗಳಲ್ಲಿ ಈಗಾಗಲೇ ವೃದ್ಧರ ಸಂಖ್ಯೆ ಹೆಚ್ಚಾಗುತ್ತಿದೆ. ದುಡಿಯುವ ವಯೋಮಾನದವರ ಸಂಖ್ಯೆ ಕಡಿಮೆಯಾಗಿದೆ.

ಈ ಪ್ರದೇಶಗಳಲ್ಲಿ ಜನನ ದರ ಕಳವಳಕಾರಿಯಾಗಿ ಕಡಿ ಮೆಯಾಗಿದೆ ಎಂದು ಸರ್ಕಾರೇತರ ಸಂಘಟನೆಯಾದ ಪಾಪ್ಯುಲೇಷನ್ ಫೌಂಡೇಷನ್ ಆಫ್ ಇಂಡಿಯಾ ತಿಳಿಸಿದೆ.

ಅಗ್ನಿ ಪರೀಕ್ಷೆಯಲ್ಲಿ ಮೌಲ್ಯಗಳನ್ನು ಕಳೆದುಕೊಳ್ಳದಿರಲು ತರಳಬಾಳು ಶ್ರೀ ಹಿತನುಡಿ

(1ನೇ ಪುಟದಿಂದ) ಹೈಟೆಕ್ ಆಸ್ಪತ್ರೆಯಲ್ಲಿ ಇಲ್ಲಿ ಕಲಿತು ಹೋದ ವೈದ್ಯರೇ ಸಿಗುತ್ತಾರೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ. ಮುಂದಿನ ದಿನಗಳಲ್ಲಿ ಚಂದ್ರ ಲೋಕಕ್ಕೆ ಹೋಗುವ ವ್ಯವಸ್ಥೆಯಾದರೂ ಅಲ್ಲಿಯೂ ನಮ್ಮ ಮಕ್ಕಳೇ ಮೊದಲಿಗರಾಗಿರುತ್ತಾರೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಮಾತನಾಡುತ್ತಾ, ಎಲ್ಲಾ ಮಕ್ಕಳೂ ಒಂದೇ ರೀತಿ ಇರುವುದಿಲ್ಲ. ಪ್ರತಿ ಮಗುವಿನಲ್ಲೂ ಒಂದೊಂದು ಬಗೆಯ ಸುಪ್ತ ಪ್ರತಿಭೆ ಅಡಗಿರುತ್ತದೆ. ಯಾವ ಅಭಿರುಚಿ ಮಗುವಿನಲ್ಲಿರುತ್ತದೋ ಅದನ್ನು ಗುರುತಿಸಿ ಪ್ರೋತ್ಸಾಹಿಸಬೇಕು ಎಂದು ಪೋಷಕರಿಗೆ ಸಲಹೆ ನೀಡಿದರು.

ಬ್ರಿಟೀಷರು ದೇಶ ಬಿಟ್ಟು ಹೋದಾಗ ಶೈಕ್ಷಣಿಕ ಸ್ಥಿತಿ ಕೆಳಮಟ್ಟದಲ್ಲಿತ್ತು. ಈ ಸಂದರ್ಭದಲ್ಲಿ ಸರ್ಕಾರದಿಂದ ಮಾಡಲು ಕಷ್ಟವಾದ ಕೆಲಸವನ್ನು ಮಠಮಾನ್ಯಗಳು ಮಾಡಿದವು. ಅನೇಕ ವಿದ್ಯಾಸಂಸ್ಥೆಗಳನ್ನು ತೆರೆದು ಬಡವರಿಗೆ ಊಟ, ವಸತಿ, ವಿದ್ಯೆ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಅಂತಹ ಒಂದು ಮಠದಲ್ಲಿಯೇ ನಾನೂ ಸಹ ಓದಿ ಇಂದು ಜಿಲ್ಲಾಧಿಕಾರಿಯಾಗಿದ್ದೇನೆ. ಈ ರಾಜ್ಯದ ಮಠಗಳ ಮೇಲೆ ನನಗೆ ಅಪಾರ ಗೌರವವಿದೆ ಎಂದು ಹೇಳಿದರು.

ತರಳಬಾಳು ಜಗದ್ಗುರುಗಳು ಮೆಡಿಕಲ್ ಅಥವಾ ಇಂಜಿನಿಯರಿಂಗ್ ಕಾಲೇಜು ತೆರೆಯದೇ, ಗ್ರಾಮೀಣ ಪ್ರದೇಶಗಳ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಗ್ರಾಮಾಂತರ ಪ್ರದೇಶದಲ್ಲಿ ಶಾಲಾ-ಕಾಲೇಜು ತೆರೆದು ಶಿಕ್ಷಣ ನೀಡುವ ಕೆಲಸ ಮಾಡುತ್ತಿದ್ದಾರೆ. ಅವರ ಸೇವೆಯಲ್ಲಿ ನಾವೆಲ್ಲರೂ ಸಕ್ರಿಯವಾಗಿ ಭಾಗವಹಿಸಿ ನಾಡನ್ನು ಉಜ್ವಲವಾಗಿಸಲು ಶ್ರಮಿಸೋಣ ಎಂದರು.

ಶ್ರೀ ತರಳಬಾಳು ಸೆಂಟ್ರಲ್ ಸ್ಕೂಲ್ ಪ್ರಾಂಶುಪಾಲ ಕೆ.ಸೋಮಸೇಖರಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಾಂಶುಪಾಲರುಗಳಾದ ಹೆಚ್.ಎನ್. ಪ್ರದೀಪ್, ರವಿಕುಮಾರ್ ಹೆಚ್.ಎಸ್., ಮಂಜುಳಾ ಕೆಬಿ. ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕು.ಲಲಿತಾ ಎಂ., ಕು.ಸಹನಾ ಕೆ.ಎಸ್. ಸ್ವಾಗತಿಸಿದರು. ಕು.ನಂದಿನಿ ಪಿ., ಕು.ರೇಷ್ಮಾ ಜಿ. ಶಾಲಾ ವಾರ್ಷಿಕ ವರದಿ ವಾಚಿಸಿದರು.

ಕು.ಅನಘ ವಿ. ಉಪಾಧ್ಯಾಯ, ಕು.ಜಯಲಕ್ಷ್ಮಿ ಸಿ. ಕಾರ್ಯಕ್ರಮ ನಿರೂಪಿಸಿದರೆ, ಕು.ಗಂಗಾ ಟಿ.ಡಿ., ಕು.ಹಂಸಾ ಎಸ್. ಮಹಡಿ ವಂದಿಸಿದರು.

ವಿಮಾನದ ತುರ್ತು ಬಾಗಿಲು ತೆರೆದ ಪ್ರಯಾಣಿಕ ತೇಜಸ್ವಿ ಸೂರ್ಯ ವಿರುದ್ಧ ಕಾಂಗ್ರೆಸ್ ಆರೋಪ

ನವದೆಹಲಿ, ಜ. 17 – ಕಳೆದ ತಿಂಗಳು ಚೆನ್ನೈ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರೊಬ್ಬರು ಇಂಡಿಗೋ ವಿಮಾನದ ತುರ್ತು ಬಾಗಿಲನ್ನು ಆಕಸ್ಮಿಕವಾಗಿ ತೆರೆದ ಘಟನೆ ನಡೆದಿದೆ. ಇದರಿಂದಾಗಿ ವಿಮಾನವನ್ನು ಕಡ್ಡಾಯ ತಪಾಸಣೆಗೆ ಒಳಪಡಿಸಲಾಗಿತ್ತು.

ತುರ್ತು ನಿರ್ಗಮನದ ಬಾಗಿಲನ್ನು ತೆರೆದಿದ್ದು ಸಂಸದ ತೇಜಸ್ವಿ ಸೂರ್ಯ ಎಂದು ಕಾಂಗ್ರೆಸ್ ಆರೋಪಿಸಿದೆ. ಸರ್ಕಾರ ಈ ಘಟನೆಯನ್ನು ಮುಚ್ಚಿಟ್ಟಿತ್ತು ಎಂದು ಕಾಂಗ್ರೆಸ್ ಆರೋಪಿಸಿದೆ. ಈ ಬಗ್ಗೆ ಸೂರ್ಯ ಯಾವುದೇ ಹೇಳಿಕೆ ನೀಡಿಲ್ಲ.

ಮಂಗಳವಾರ ಹೇಳಿಕೆ ಬಿಡುಗಡೆ ಮಾಡಿ ರುವ ಇಂಡಿಗೋ, ಡಿಸೆಂಬರ್ 10, 2022 ರಂದು ಚೆನ್ನೈನಿಂದ ತಿರುಚಿರಾಪಳ್ಳಿಗೆ ತೆರಳಬೇಕಿದ್ದ ವಿಮಾನದ ತುರ್ತು ಬಾಗಿಲನ್ನು ಪ್ರಯಾಣಿಕ ರೊಬ್ಬರು ಆಕಸ್ಮಿಕವಾಗಿ ತೆರೆದಿದ್ದರು ಎಂದು ಹೇಳಿದೆ. ಪ್ರಯಾಣಿಕರ ಗುರುತಿನ ಬಗ್ಗೆ ಇಂಡಿಗೋ ಯಾವುದೇ ಹೇಳಿಕೆ ನೀಡಿಲ್ಲ.

ಘಟನೆಯ ಬಗ್ಗೆ ವರದಿ ಸಲ್ಲಿಸಲಾಗಿದೆ. ವಿಮಾನದ ರಕ್ಷಣೆಯಲ್ಲಿ ಹೊಂದಾಣಿಕೆ ಆಗಿಲ್ಲ. ವಿಮಾನ ನೆಲದ ಮೇಲಿದ್ದಾಗ ಪ್ರಯಾಣಿಕರೊಬ್ಬರು ಆಕಸ್ಮಿಕವಾಗಿ ತುರ್ತು ನಿರ್ಗಮನ ಬಾಗಿಲು ತೆರೆದಂತೆ ಕಾಣುತ್ತಿದೆ ಎಂದು ವೈಮಾನಿಕ ನಿಯಂತ್ರಕ ಡಿ.ಜಿ.ಸಿ.ಎ. ಅಧಿಕಾರಿಯೊಬ್ಬರು ಹೇಳಿದ್ದಾರೆ.

ನಗರದಲ್ಲಿ ರಸ್ತೆ ಅಪಘಾತದಲ್ಲಿ ಇಂಜಿನಿಯರ್ ಮಿಥುನ್ ಸಾವು

ದಾವಣಗೆರೆ,ಜ.17- ನಗರದ ರಾಷ್ಟ್ರೀಯ ಹೆದ್ದಾರಿ - 4ರಲ್ಲಿನ ಆನಂದ ಅಕಾಡೆಮಿ ಕಾಲೇಜು ಬಳಿ ಇಂದು ರಾತ್ರಿ 11.30ರ ಸಮಯದಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಜಿಲ್ಲಾ ಪಂಚಾ ಯ್ತಿಯ ಜಗಳೂರು ತಾಲ್ಲೂಕಿನ ಅಭಿಯಂತರ ಹೆಚ್.ಎಂ. ಮಿಥುನ್ ಮೃತಪಟ್ಟಿದ್ದಾರೆ.

ಮಿಥುನ್ ಮದುವೆ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ, ಮೋಟಾರ್ ಬೈಕ್‌ನಲ್ಲಿ ವಾಪಸ್ ಮನೆಗೆ ಹೋಗುತ್ತಿದ್ದ ಸಂದರ್ಭದಲ್ಲಿ ಈ ಅಪಘಾತ ನಡೆದಿದೆ.

ದಾವಣಗೆರೆ ತಾಲ್ಲೂಕಿನ ಹದಡಿ ಸಮೀಪದ ಹೊಸನಾಯ್ಕನಹಳ್ಳಿ ಗ್ರಾಮ ದವರಾದ ಮಿಥುನ್ ಪ್ರಯಾಣಿಸುತ್ತಿದ್ದ ಮೋಟಾರ್ ಬೈಕ್ ಮತ್ತು ಲಾರಿ ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ಈ ದುರಂತ ನಡೆದಿದೆ ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ.

ಸುಮಾರು 35 ವರ್ಷ ವಯಸ್ಸಿನ ಮಿಥುನ್, ಪತ್ನಿ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ನಾಳೆ ದಿನಾಂಕ 18ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಹೊಸನಾಯ್ಕನಹಳ್ಳಿಯಲ್ಲಿ ಮೃತರ ಪಾರ್ಥಿವ ಶರೀರದ ಅಂತ್ಯಕ್ರಿಯೆ ನಡೆಯಲಿದೆ.

ಮಠಾಧೀಶರ ಕಣಕ್ಕೆ ಪರಿಶೀಲನೆ

(1ನೇ ಪುಟದಿಂದ) ಪ್ರಭಾವಿಗಳನ್ನು ಮನವೊಲಿ ಸಿ, ಕಣಕ್ಕಿಳಿಸಲು ಪಕ್ಷ ಮುಂದಾಗಿದೆ ಎಂದು ಮೂಲಗಳು ಹೇಳಿವೆ.

ಉತ್ತರ ಪ್ರದೇಶ, ಮಧ್ಯಪ್ರದೇಶ ಸೇರಿ ದಂತೆ ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಕೆಲವು ಮಠಾಧಿಪತಿಗಳು ಚುನಾವಣಾ ಕಣಕ್ಕಿಳಿದು ಸಚಿವರು ಹಾಗೂ ಮುಖ್ಯಮಂತ್ರಿಗಳಾಗಿದ್ದಾರೆ.

ಚುನಾವಣಾ ಕಣಕ್ಕೆ ಯಾರನ್ನು ಇಳಿಸಬಹುದು ಎಂಬುದರ ಬಗ್ಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಒಂದಷ್ಟು ಮಾಹಿತಿಯನ್ನು ದೆಹಲಿ ನಾಯಕರು ಪಡೆದುಕೊಂಡಿದ್ದಾರೆ.

ಭಾವಪೂರ್ಣ ಶ್ರದ್ಧಾಂಜಲಿ

ದಾವಣಗೆರೆ ಬಾಡಾ ಕ್ರಾಸ್ ಜೈನ್ ಸ್ಕೂಲ್ ಹತ್ತಿರದ ವಾಸಿ, ದಾವಣಗೆರೆ ಗ್ರಾಮಾಂತರ ಠಾಣೆಯ ಪೊಲೀಸ್ ಹೆಡ್‌ಕಾನ್‌ಸ್ಟೇಬಲ್‌ರಾದ **ಶ್ರೀ ಪರಶುರಾಮ್** ಅವರು ದಿನಾಂಕ 17-01-2023ರ ಮಂಗಳವಾರ ನಿಧನರಾಗಿದ್ದು, ಶ್ರೀಯುತರ ನಿಧನಕ್ಕೆ ಸಂತಾಪ ವ್ಯಕ್ತಪಡಿಸುತ್ತಾ, ಮೃತರ ಆತ್ಮಕ್ಕೆ ಶಾಂತಿ ಕೋರಿ, ಮೃತರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಹ್ಯಾಪಿ ಗ್ರೂಪ್ಸ್, ದಾವಣಗೆರೆ.

ಎನ್.ವಿ. ಬಸವರಾಜ ಪಲ್ಲೇದ್ ನಿಧನ



ದಾವಣಗೆರೆ ಎಸ್.ಪಿ.ಎಸ್ ನಗರ 2ನೇ ಮೇನ್, 2ನೇ ಕ್ರಾಸ್ ಡೋರ್ ನಂ.873ರ ವಾಸಿ ದಿ. ನಾಗೂರ ವೀರಪ್ಪ ಪಲ್ಲೇದ್ ಇವರ ಮಗನಾದ ಎನ್.ವಿ . ಬಸವರಾಜ ಪಲ್ಲೇದ್ (69) ಇವರು ದಿನಾಂಕ 17.1.2023ರ ಮಂಗಳವಾರ ಸಂಜೆ 6ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೂವರು ಸಹೋದರರು, ಮೂವರು ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18.1.2023ರ ಬುಧವಾರ ಮಧ್ಯಾಹ್ನ 2 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

ಶ್ರೀಮತಿ ಮಹಾದೇವಮ್ಮ ನಿಧನ



ದಾವಣಗೆರೆ ಚಿಕ್ಕಮ್ಮಣಿ ದೇವರಾಜ ಅರಸ್ ಬಡಾವಣೆ ವಾಸಿ ಎ.ಡಿ ಜಯಪ್ಪ ಇವರ ಧರ್ಮಪತ್ನಿ ಶ್ರೀಮತಿ ಮಹಾದೇವಮ್ಮ (68) ಇವರು, ದಿನಾಂಕ 17.1.2023ರ ಮಂಗಳವಾರ ರಾತ್ರಿ 9.10ಕ್ಕೆ ನಿಧನರಾದರು. ಪತಿ, ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಸಹೋದರರು, ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18.1.2023ರ ಬುಧವಾರ ಸಂಜೆ 4 ಗಂಟೆಗೆ ನಗರದ ಶ್ರೀರಾಮ ಬಡಾವಣೆಯ ರುದ್ರಭೂಮಿಯಲ್ಲಿ ನೆರವೇರಲಿದೆ.

ಕಡು ಬಡವರಿಗೆ ಬೈಸಿಕಲ್ ವಿತರಣೆ

ದಾವಣಗೆರೆ, ಜ.17 - ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಕಡು ಬಡವರು ಸೈಕಲ್ ಸವಾರಿ ಮಾಡಲು ಪ್ರೋತ್ಸಾಹಿಸಲಾಗುವುದು. ಕೆಲವು ದಶಕಗಳ ಹಿಂದೆ ಸೈಕಲ್ ಹಲವು ವಿಧಗಳಲ್ಲಿ ಜೀವನದ ಅವಿಭಾಜ್ಯ ಅಂಗವಾಗಿತ್ತು. ಈಗ ಅದು ಅಳಿವಿನಂಚಿಗೆ ಬಂದಿದೆ.

ಪೆಟ್ರೋಲ್ ದರ ರೂ.104 ಆಗಿ, ಬಡವರಿಗೆ ನಿಲುಕದ ವಸ್ತುವಾಗಿದೆ. ಅಲ್ಲದೆ ಪೆಟ್ರೋಲ್ ವಾಹನಗಳಲ್ಲಿ ದೈಹಿಕ ಶ್ರಮವಿಲ್ಲದೆ ಆರೋಗ್ಯದ ಮೇಲೆ ದುಷ್ಪರಿಣಾಮಗಳಾಗುತ್ತಿವೆ. ಪರಿಸರ ಮಾಲಿನ್ಯ ಕಡಿಮೆ ಮಾಡಲು ಹಾಗೂ ಸಾರ್ವಜನಿಕರ ಆರೋಗ್ಯ ದೃಷ್ಟಿ ಹಾಗೂ ಬಡವರ ಸಣ್ಣ ಆರ್ಥಿಕ ಉಳಿತಾಯಕ್ಕಾಗಿ ಬೆಂಬಲ ನೀಡಲು ಕರುಣಾ ಟ್ರಸ್ಟ್ ಸೈಕಲ್ ಕೊಡಿಸಲು ಬಯಸುತ್ತಿದೆ.

ಬಡವರ ಆರ್ಥಿಕ ಪರಿಸ್ಥಿತಿಗೆ ಅನುಸಾರವಾಗಿ ಸೈಕಲ್ ಖರೀದಿಸಲು ಹಣಕಾಸಿನ ನೆರವು ನೀಡಲಾಗುವುದು. ಸಂಪರ್ಕಿಸಿ: 9110455199 /8310520002. ಅಲ್ಲದೇ ಈ ಕಾರ್ಯಕ್ರಮಕ್ಕೆ ಮನೆಯಲ್ಲಿ ಉಪಯೋಗಿಸದೇ ಇರುವ ಸೈಕಲ್ಲುಗಳನ್ನು ಟ್ರಸ್ಟಿಗೆ ನೀಡಿದರೆ ಅವುಗಳನ್ನು ರಿಪೇರಿ ಮಾಡಿಸಿ ಬಡವರಿಗೆ ನೀಡಲಾಗುವುದು. ಎಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ತಿಳಿಸಿದ್ದಾರೆ.

ಮೈ-ಮನ ನವಿರೇಳಿಸಿದ ಕುಸ್ತಿ

ಹೊನ್ನಾಳಿ

ಹೊನ್ನಾಳಿ, ಜ.17- ಕುಸ್ತಿ ಪಟುಗಳು ದೇಹಕ್ಕೆ ದೈವೀದತ್ತವಾದ ಮಣ್ಣನ್ನು ಹಚ್ಚಿಕೊಂಡು ಎದುರಾಳಿ ಪೈಲ್ವಾನರನ್ನು ಮಣ್ಣು ಮುಕ್ಕಿಸುತ್ತಿದ್ದರೆ ಕುಸ್ತಿ ನೋಡಲು ನೆರೆದಿದ್ದವರ ಶಿಳ್ಳೆ, ಕೇಕೆ ಹಾಕಿ ನೆಚ್ಚಿನ ಕುಸ್ತಿ ಪಟುಗಳನ್ನು ಹುರಿದುಂಬಿಸುತ್ತಿದ್ದ ದೃಶ್ಯ ಮೈ ರೋಮಾಂಚನಗೊಳಿಸುತ್ತಿದ್ದು ಗ್ರಾಮೀಣ ಕ್ರೀಡೆ ಎಂದೆಂದಿಗೂ ಪ್ರಶಕ್ತವಾದ ಜೀವಂತ ಕ್ರೀಡೆ.

ಪಟ್ಟಣದ ಶ್ರೀ ದುರ್ಗಮ್ಮ, ಮರಿಯಮ್ಮ ದೇವಿ ಜಾತ್ರೆ ಪ್ರಯುಕ್ತ ಮೂರು ದಿನಗಳ ಕಾಲ ಬಯಲು ಖಾಟಾ ಜಂಗೀ ಕುಸ್ತಿಯನ್ನು ಖಾಸಗಿ ಬಸ್ ನಿಲ್ದಾಣದ ಬಳಿ ಶ್ರೀ ಆಂಜನೇಯ ಟ್ರಸ್ಟ್ ಕಮಿಟಿಯವರು ಆಯೋಜಿಸಿದ್ದರು.

ಪ್ರೇಕ್ಷಕರ ಕೇಕೆ, ಚಪ್ಪಾಳೆ : ಕುಸ್ತಿ ಅಖಾಡದಲ್ಲಿ ಮೂರು ದಿನಗಳ ಕಾಲ ಪ್ರೇಕ್ಷಕರು ಪೈಲ್ವಾನರು ಎದುರಾಳಿ ಮಣಿಸಲು ಪಟ್ಟು ಹಾಕುತ್ತಿದ್ದರೆ, ಸುತ್ತಲೂ ಸೇರಿದ್ದ ಪ್ರೇಕ್ಷಕರು ಕೇಕೆ ಹಾಕಿ, ಚಪ್ಪಾಳೆ ತಟ್ಟುತ್ತಾ ಪೈಲ್ವಾನರನ್ನು ಹುರಿದುಂಬಿಸುತ್ತಿದ್ದರು. ನೆಚ್ಚಿನ ಪೈಲ್ವಾನರು ನೆಲಕ್ಕುರುಳಿದಾಗ 'ಅಯ್ಯೋ...' ಎಂಬ ಉದ್ಗಾರದ ಶಬ್ದ ಕೇಳಿಬರುತ್ತಿದ್ದರೆ, ಗೆದ್ದ ಪೈಲ್ವಾನರಿಗೆ ನೆರೆದಿದ್ದ ಜನತೆ ತಮ್ಮ ಕೈಯಲ್ಲಿದ್ದ ಹಣವನ್ನು ನೀಡಿ ಪ್ರೋತ್ಸಾಹಿಸಿದರು.

ಒಂದೊಂದು ಪಂದ್ಯವು ವಿಭಿನ್ನ : ಒಂದೊಂದು ಪಂದ್ಯವು ವಿಭಿನ್ನವಾಗಿದ್ದು ಕುಸ್ತಿ ಆಟದ ದೃಶ್ಯ ಮೈನವಿರೇಳಿಸುತ್ತಿತ್ತು. ಕುಸ್ತಿ ಪ್ರದರ್ಶನದಲ್ಲಿ ಆಕರ್ಷಕವಾಗಿ ಪ್ರದರ್ಶನ ನೀಡಿದ ಪೈಲ್ವಾನರಿಗೆ ಕುಸ್ತಿ ಆಯೋಜಕರು ವಿವಿಧ ದೇವರ ಫೋಟೋ, ಚಲನ ಚಿತ್ರ ನಟ ಪುನೀತ್ ರಾಜಕುಮಾರ್ (ಅಪ್ಪು) ಅವರ ಫೋಟೋ, ಬೆಳ್ಳಿ ದೀಪಗಳು, ಜೊತೆಗೆ ವಿಭಿನ್ನ ರೀತಿಯ ನೆನಪಿನ ಕಾಣಿಕೆ ಟ್ರೋಫಿಗಳನ್ನು ಬಹುಮಾನ ನೀಡಲಾಯಿತು.

ಮೂರು ದಿನಗಳ ಕಾಲ ಕುಸ್ತಿಯಲ್ಲಿ ನೂರಾರು ಕುಸ್ತಿ ಪಟುಗಳು 1 ಸಾವಿರದಿಂದ 30 ಸಾವಿರ ರೂ. ವರೆಗೆ ನಗದು ಹಣ ಬಹುಮಾನ ಪಡೆದರು. ಬಹುಮಾನ ವಿಜೇತರಾದ ಶಿವಮೊಗ್ಗ ಕಿರಣ್ 20 ಸಾವಿರ, ಗುಲ್ಬರ್ಗ ಸಿದ್ದಪ್ಪ 15 ಸಾವಿರ, ಬಿಜಾಪುರ ರಾಮಚಂದ್ರ 15 ಸಾವಿರ, ಕೊಲ್ಲಾಪುರ ಅಬ್ಬಾಸ್ 12 ಸಾವಿರ, ಮೈಸೂರು ಸುನೀಲ್ 8 ಸಾವಿರ, ಹರಪನಹಳ್ಳಿ ಕುಸ್ತಿಪಟು 10 ಸಾವಿರ, ಹೊಳೆಹೊನ್ನೂರು ಭಟ್ಟಿ 10 ಸಾವಿರ, ಹಿತ್ತಲಕಲ್ಮನಿ ಪಂಕಜ 10 ಸಾವಿರ, ಜೊತೆಗೆ ವಿಶೇಷವಾಗಿ ದಾವಣಗೆರೆ ರೂಪಾ ಉಷಾ ಸೇರಿದಂತೆ 2 ತಂಡಗಳು ಕುಸ್ತಿ ಅಖಾಡಕ್ಕಿಳಿದು ಕುಸ್ತಿ ಪ್ರದರ್ಶನ ನಡೆಸಿ ನೋಡುಗರ ಮನ ಸೆಳೆದರು. ಎರಡೂ ತಂಡಗಳಿಗೆ ಕಮಿಟಿಯಿಂದ ತಲಾ 4 ಸಾವಿರ ನಗದು ಹಣ ನೀಡಲಾಯಿತು.

ನಗದು 30 ಸಾವಿರ ಮತ್ತು 50 ಸಾವಿರ ಬೆಲೆ ಬಾಳುವ ಬೆಳ್ಳಿ ಗದೆಗೆ ಶಿವಮೊಗ್ಗ ಕಿರಣ್, ಉತ್ತರಪ್ರದೇಶದ ಬಂಟಿ, ಬಿಜಾಪುರದ ರಾಮಚಂದ್ರ ಕುಸ್ತಿ ಸ್ಪರ್ದಾಳುಗಳಿದ್ದು ಇವರಿಗೆ ಎದುರಾಳಿ ಯಾರೂ ಸರಿಸಾಟಿ ಇಲ್ಲದ ಕಾರಣ ಶ್ರೀ ಆಂಜನೇಯ ಟ್ರಸ್ಟ್ ಕಮಿಟಿಗೆ ಉಳಿಸಿಕೊಳ್ಳಲಾಯಿತು ಎಂದು ಟ್ರಸ್ಟ್ ಕಮಿಟಿ ಖಜಾಂಚಿ ವೊಡ್ಡಿ ಚನ್ನಪ್ಪ ತಿಳಿಸಿದರು.

ಶ್ರೀ ಆಂಜನೇಯ ಟ್ರಸ್ಟ್ ಕಮಿಟಿ ಅಧ್ಯಕ್ಷ ನರಸಿಂಹಪ್ಪ, ಮಾಜಿ ಅಧ್ಯಕ್ಷ ಬಾಬು ಹೋಬಳದರ್, ಖಜಾಂಚಿ ವೊಡ್ಡಿ ಚನ್ನಪ್ಪ, ಟಾಕೀಸ್ ಹೆಚ್.ಬಿ. ಶಿವಯೋಗಿ, ಹೆಚ್.ಎ.ರಾಜಪ್ಪ, ಎಂ.ಎಸ್. ಪಾಲಾಕ್ಷಪ್ಪ, ಮಹೇಶಣ್ಣ, ಹೆಚ್.ಎ.ಉಮಾಪತಿ, ಧರ್ಮಪ್ಪ, ಇಂಚರ ಮಂಜು, ಹೆಚ್.ಎಸ್.ರಂಜಿತ, ಇಂಚರ ನವೀನ್, ಎಂ.ಪಿ.ರಾಜಣ್ಣ, ಜಿಪಂ ಮಾಜಿ ಸದಸ್ಯ ಎಂ. ಆರ್.ಮಹೇಶ್, ಯೋಗೀಶ್, ಕಾಯಿಬುರುಡೆ ಚನ್ನಪ್ಪ, ಮೇಘರಾಜ, ದೈಹಿಕ ಶಿಕ್ಷಕ ಸಣ್ಣಸಿದ್ದಪ್ಪ ಸೇರಿದಂತೆ ಮುಖಂಡರು ಇದ್ದರು.

ಅರ್ಥಪೂರ್ಣ ಗಣರಾಜ್ಯೋತ್ಸವ ಆಚರಣೆಗೆ ನಿರ್ಧಾರ

ದಾವಣಗೆರೆ ಜ.17- ಕೋವಿಡ್ ಮಾರ್ಗಸೂಚಿ ಪಾಲನೆಯೊಂದಿಗೆ ಜಿಲ್ಲಾಡಳಿತ ದಿಂದ ಇದೇ ದಿನಾಂಕ 26 ರಂದು 74 ನೇ ಗಣ ರಾಜ್ಯೋತ್ಸವವನ್ನು ಅರ್ಥಪೂರ್ಣ ಆಚರಣೆಗೆ ಎಲ್ಲ ಅಧಿಕಾರಿಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಸೂಚನೆ ನೀಡಿದರು.

ಗಣರಾಜ್ಯೋತ್ಸವ ಆಚರಣೆ ಕುರಿತಂತೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ಜರುಗಿದ ಪೂರ್ವಸಿದ್ದತಾ ಸಭೆಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಹಬ್ಬವಾಗಿರುವ ಗಣರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುವುದು. ದೇಶದ ಗಣರಾಜ್ಯಕ್ಕಾಗಿ ಶ್ರಮಿಸಿದ ಎಲ್ಲಾ ಮಹನೀಯರನ್ನು ನೆನೆಯುವ ದಿನ ಇದಾಗಿದೆ. ಅವರ ಶ್ರಮ, ತ್ಯಾಗ, ಬಲಿದಾನಗಳಿಗೆ ನಾವು ಆದರ ಪೂರ್ವಕವಾಗಿ ಗೌರವ ಸಮರ್ಪಿಸೋಣ ಎಂದರು.

ಜನವರಿ 26 ರ ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಧ್ವಜಾರೋಹಣ ನೆರವೇರಲಿದೆ. ಎಲ್ಲಾ ಇಲಾಖಾ ಮುಖ್ಯಸ್ಥರು ತಮ್ಮ ತಮ್ಮ ಕಚೇರಿಗಳಲ್ಲಿ ನಿಯಮಾನುಸಾರ ಧ್ವಜಾರೋಹಣ ನೆರವೇರಿಸಿ ಬೆಳಿಗ್ಗೆ 8.30 ರೊಳಗಾಗಿ ಕ್ರೀಡಾಂಗಣದಲ್ಲಿ ಹಾಜರಿರಬೇಕು. ಸಮಾರಂಭದಲ್ಲಿ ಶಾಲಾ ಮಕ್ಕಳು ಮತ್ತು ಸಾರ್ವಜನಿಕರು ಪಾಲ್ಗೊಳ್ಳಬೇಕು. ಸರ್ಕಾರದ ಎಲ್ಲ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಡ್ಡಾಯವಾಗಿ ಸಮಾರಂಭದಲ್ಲಿ ಹಾಜರಿರಬೇಕು.

ಪಥ ಸಂಚಲನದಲ್ಲಿ ಶಾಲಾ ಮಕ್ಕಳು, ಪೊಲೀಸ್, ಅರಣ್ಯ, ಅಗ್ನಿಶಾಮಕ ಇಲಾಖೆಗಳ ಜೊತೆಗೆ ಗೃಹರಕ್ಷಕ ದಳದ ತಂಡಗಳೂ ಪಾಲ್ಗೊಳ್ಳಲಿವೆ. ಕಾರ್ಯಕ್ರಮದ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಇಲಾಖೆಯಿಂದ ಅಸಾಧಾರಣ ಸಾಧನೆ ಮಾಡಿದ ಜಿಲ್ಲೆಯ ಮಕ್ಕಳಿಗೆ ಸರ್ಕಾರದಿಂದ ನೀಡಲಾಗುವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು ಎಂದರು.

ಅತಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ಶಿಕ್ಷಣ ಇಲಾಖೆ ನೋಡಿಕೊಳ್ಳಬೇಕು ಹಾಗೂ ಕಾರ್ಯಕ್ರಮದಲ್ಲಿ ಭಾಗವಹಿಸುವ ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಸಾಂಸ್ಕೃತಿಕ ಕಾರ್ಯಕ್ರಮ ನೀಡುವ ಮತ್ತು ಪರೇಡ್‌ನಲ್ಲಿ ಭಾಗವಹಿಸುವ ಮಕ್ಕಳಿಗೆ ಅಗತ್ಯ ಸೌಲಭ್ಯಗಳನ್ನು ಸಂಬಂಧಿಸಿದ ಇಲಾಖೆಗಳು ಒದಗಿಸಬೇಕು ಎಂದು ಸೂಚಿಸಿದರು.

ಪ್ಲಾಸ್ಟಿಕ್ ನಿಷೇಧ : ಕಾರ್ಯಕ್ರಮದಲ್ಲಿ ಪ್ಲಾಸ್ಟಿಕ್ ಧ್ವಜ ಮತ್ತು ಪ್ಲಾಸ್ಟಿಕ್ ಹೂಗುಚ್ಛಗಳನ್ನು ಯಾವುದೇ ಕಾರಣಕ್ಕೂ ಬಳಸುವಂತಿಲ್ಲ. ಇಡೀ ಕಾರ್ಯಕ್ರಮದ ಮೇಲುಸ್ತುವಾರಿಯನ್ನು ಅಪರ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರರು, ಪೊಲೀಸ್ ಉಪ ಅಧೀಕ್ಷಕರು, ಮಹಾನಗರಪಾಲಿಕೆ ಆಯುಕ್ತರು ನೋಡಿಕೊಂಡು ಕಾರ್ಯಕ್ರಮ ಅರ್ಥಪೂರ್ಣ ಗೊಳಿಸಲು ಸಹಕರಿಸಬೇಕು ಎಂದರು.

ದೀಪಾಲಂಕಾರ : ಎಲ್ಲಾ ಸರ್ಕಾರಿ ಕಚೇರಿ ಕಟ್ಟಡಗಳಿಗೆ, ಪ್ರಮುಖ ವೃತ್ತಗಳಿಗೆ ಸಂಬಂಧಪಟ್ಟ ಇಲಾಖೆಗಳು ದೀಪಾಲಂಕಾರ ಮಾಡಿಸಬೇಕು. ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ ಧ್ವಜ ಸಂಹಿತೆ ಕಾಪಾಡಬೇಕು. ಸಾರ್ವಜನಿಕ ಶಿಕ್ಷಣ ಇಲಾಖೆಯವರು ಎಲ್ಲಾ ಶಾಲೆಗಳಲ್ಲಿ 7.30 ಕ್ಕೆ ಧ್ವಜಾರೋಹಣ ನೆರವೇರಿಸಬೇಕು ಎಂದರು.

ಎಲ್ಲಾ ಸರ್ಕಾರಿ, ಅರೆ ಸರ್ಕಾರಿ ಹಾಗೂ ಪ್ರಮುಖ ಖಾಸಗಿ ಕಚೇರಿಗಳ ಮೇಲೆ ಜ.25 ಮತ್ತು 26 ರಂದು ವಿದ್ಯುತ್ ದೀಪಾಲಂಕಾರ ಮಾಡಿಸಬೇಕು ಎಂದು ಕರೆ ನೀಡಿದ ಅವರು, ಅಂದಿನ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮವು ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ ಎಂದು ವಿವರಿಸಿದರು.

ಸಭೆಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ ರಿಷ್ಯಂತ್, ಡಿಡಿಪಿಐ ತಿಪ್ಪೇಶಪ್ಪ, ಮಹಾನಗರ ಪಾಲಿಕೆ ಆಯುಕ್ತ ರೇಣುಕಾ, ಡಿಹೆಚ್‌ಓ ಡಾ.ನಟರಾಜ, ಆಹಾರ ಮತ್ತು ನಾಗರಿಕ ಸರಬರಾಜು ಉಪ ನಿರ್ದೇಶಕಿ ನಜ್ಮಾ ಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ, ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕೊರೊನಾ ಲಸಿಕೆ ಅಡ್ಡ ಪರಿಣಾಮ ವರದಿ ತಪ್ಪು ಕಲ್ಪನೆ : ಕೇಂದ್ರ

ನವದೆಹಲಿ, ಜ. 17 – ಕೊರೊನಾ ಲಸಿಕೆಯಿಂದ ಹಲವಾರು ಅಡ್ಡ ಪರಿಣಾಮಗಳಾಗುತ್ತವೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐ.ಸಿ.ಎಂ.ಆರ್.) ಹಾಗೂ ಕೇಂದ್ರೀಯ ಔಷಧ ನಿಯಂತ್ರಣ ಸಂಘಟನೆ (ಸಿ.ಡಿ.ಎಸ್.ಸಿ.ಓ.) ಒಪ್ಪಿಕೊಂಡಿವೆ ಎಂಬ ವರದಿಗಳು ತಪ್ಪು ಕಲ್ಪನೆಯವು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಸ್ಪಷ್ಟನೆ ನೀಡಿದೆ.

ಮಾಹಿತಿ ಹಕ್ಕು ಅರ್ಜಿಯೊಂದಕ್ಕೆ ನೀಡಲಾದ ಉತ್ತರವನ್ನು ಆಧರಿಸಿ ಹಲವಾರು ಮಾಧ್ಯಮಗಳು ಅಡ್ಡ ಪರಿಣಾಮಗಳ ಕುರಿತು ವರದಿ ಮಾಡಿದ್ದವು. ಈಗಾಗಲೇ ಸಾರ್ವಜನಿಕ ವಲಯದದಲ್ಲಿ ಲಭ್ಯವಿರುವ ಜಾಗತಿಕ ವೈಜ್ಞಾನಿಕ ಮಾಹಿತಿಯನ್ನೇ ಮಾಹಿತಿ ಹಕ್ಕು ಅರ್ಜಿಗೆ ತಿಳಿಸಲಾಗಿದೆ ಎಂದು ಸಚಿವಾಲಯ ಸ್ಪಷ್ಟನೆ ನೀಡಿದೆ.

ಇತರೆ ಲಸಿಕೆಗಳ ರೀತಿಯಲ್ಲೇ ಕೊವಿಡ್ ಲಸಿಕೆ ಪಡೆದಾಗಲೂ ಅಪರೂಪಕ್ಕೆ ಲಘು ಪರಿಣಾಮಗಳು ಕಾಣಿಸಿಕೊಳ್ಳುತ್ತವೆ. ಕೆಲವೇ ಪ್ರಕರಣಗಳಲ್ಲಿ ತೀವ್ರ ಅಡ್ಡ ಪರಿಣಾಮಗಳು ಕಂಡು ಬರುತ್ತವೆ ಎಂದು ತಿಳಿಸಲಾಗಿದೆ.

ಸಡಗರದಿಂದ ಗಣರಾಜ್ಯೋತ್ಸವ ಆಚರಣೆ

ಹರಿಹರ

ಹರಿಹರ, ಜ. 17 - ನಗರದಲ್ಲಿ ತಾಲ್ಲೂಕು ಆಡಳಿತದದಿಂದ ಜನವರಿ 26 ರಂದು ಗಣರಾಜ್ಯೋ ತ್ಸವ ಸಮಾರಂಭವನ್ನು ಸಂಭ್ರಮದಿಂದ ಅರ್ಥಪೂರ್ಣವಾಗಿ ಆಚರಣೆ ಮಾಡ ಲಾಗುವುದು ಎಂದು ತಹಶೀಲ್ದಾರ್ ಎಂ. ಬಿ. ಅಶ್ವತ್ಥ್ ತಿಳಿಸಿದ್ದಾರೆ.

ನಗರದ ತಹಶೀಲ್ದಾರ್ ಕಚೇರಿಯಲ್ಲಿ ಗಣರಾಜ್ಯೋತ್ಸವ ಸಮಾರಂಭದ ನಿಮಿತ್ತವಾಗಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಬೆಳಗ್ಗೆ 9 ಕ್ಕೆ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಗಣ್ಯರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ, ರಾಷ್ಟ್ರ ಧ್ವಜಾರೋಹಣ ಪಥಸಂಚಲನ ಹಾಗೂ ಶಾಲಾ ಮಕ್ಕಳ ಮನರಂಜನೆ ಕಾರ್ಯ ಕ್ರಮಗಳನ್ನು ಹಮ್ಮಿಕೊಳ್ಳ ಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಇಓ ಹನುಮಂತಪ್ಪ, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್, ಪೌರಾಯುಕ್ತ ಐಗೂರು ಬಸವ ರಾಜ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎ.ಕೆ. ಭೂಮೇಶ್, ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಡಿ.ಎಂ. ಮಂಜು ನಾಥಯ್ಯ, ಪಶುಪಾಲನೆ ಇಲಾಖೆ ಸಿದ್ದೇಶ್, ಕೃಷಿ ಇಲಾಖೆ ನಾರನಗೌಡ, ತೋಟಗಾರಿಕೆ ಇಲಾಖೆ ರೇಖಾ, ಕಾರ್ಮಿಕ ಇಲಾಖೆ ಕವಿತಾ, ಆರ್.ಐ. ಹೇಮಂತ್ ಕುಮಾರ್, ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಹರಿಹರ ಕ್ಷೇತ್ರದಲ್ಲಿ ಇಂದು ಸಂಸದ ಸಿದ್ದೇಶ್ವರ ಪ್ರವಾಸ

ಹರಿಹರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇಂದು ಏರ್ಪಾಡಾಗಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಭೂಮಿ ಪೂಜೆ ಹಾಗೂ ಉದ್ಘಾಟನಾ ಕಾರ್ಯಕ್ರಮದಲ್ಲಿ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಪಾಲ್ಗೊಳ್ಳಲಿದ್ದಾರೆ.

ಬೆಳಿಗ್ಗೆ 11:30 ಕ್ಕೆ ಅಮರಾವತಿ ಕ್ರಾಸ್ ಬಳಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ಕಾರ್ಯಕ್ರಮ, 12 ಗಂಟೆಗೆ ನಂದಿತಾವರೆ ಬಳಿ ರಸ್ತೆ ಅಭಿವೃದ್ಧಿ ಕಾಮಗಾರಿಯ ಭೂಮಿ ಪೂಜೆಯಲ್ಲಿ ಭಾಗವಹಿಸುವರು.

ಮಧ್ಯಾಹ್ನ 1 ಗಂಟೆಗೆ ಬ್ಯಾಲದಹಳ್ಳಿ ಗ್ರಾಮದಲ್ಲಿ ಸಂಸದರ ಅನುದಾನದಡಿ ನಿರ್ಮಿಸಲಾದ ಶಾಲಾ ಕೊಠಡಿ ಉದ್ಘಾಟನೆ ಕಾರ್ಯಕ್ರಮ, ಮಧ್ಯಾಹ್ನ 1:15 ಗಂಟೆಗೆ ಎಕ್ಕೆಗೊಂದಿ ಗ್ರಾಮದಲ್ಲಿ ಸಂಸದರ ಅನುದಾನದಡಿ ನಿರ್ಮಿಸಲಾದ ಶಾಲಾ ಕೊಠಡಿ ಉದ್ಘಾಟನೆ ಕಾರ್ಯಕ್ರಮ. ಮಧ್ಯಾಹ್ನ 1.30 ಗಂಟೆಗೆ ಯಲವಟ್ಟಿ ಗ್ರಾಮದ ಡಿಜಿಟಲ್ ಗ್ರಂಥಾಲಯ ಹಾಗೂ ಅಂಗನವಾಡಿ ಕಟ್ಟಡಗಳ ಉದ್ಘಾಟನೆ ಕಾರ್ಯಕ್ರಮ. ಮಧ್ಯಾಹ್ನ 2.30 ಗಂಟೆಗೆ ಹರಳಹಳ್ಳಿ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಸೇತುವೆ ನಿರ್ಮಾಣ ಮತ್ತು ಶಾಲಾ ಕೊಠಡಿ ನಿರ್ಮಾಣಗಳ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಸಮ್ಮೇಳನದಲ್ಲಿ ಸ್ಥಳೀಯ ಸಾಹಿತಿಗಳಿಗೆ ಅವಮಾನ

ರಾಣೇಬೆನ್ನೂರು, ಜ.17- ಹಾವೇರಿ ಸಾಹಿತ್ಯ ಸಮ್ಮೇಳನದಲ್ಲಿ, ಈ ನಾಡು ಕಂಡ ಖ್ಯಾತ ಸಾಹಿತಿ, ಪತ್ರಕರ್ತ ನಾಡೋಜ ಡಾ. ಪಾಟೀಲ ಪುಟ್ಟಪ್ಪನವರಿಗೆ ಮತ್ತು ಸ್ಥಳೀಯ ಸಾಹಿತಿಗಳಿಗೆ ರಾಜ್ಯಾಧ್ಯಕ್ಷ ಮಹೇಶ ಜೋಶಿ ಮತ್ತು ಅವರ ಪಟಾಲಂ ಹಾಗೂ ಜಿಲ್ಲಾಡಳಿತ ಮಾಡಿದ ಅವಮಾನ, ಪಕ್ಷಪಾತ, ಜಾತೀಯತೆಯನ್ನು ಎಂದಿಗೂ ಸಹಿಸಲಿಕ್ಕಾಗದು ಎಂದು ರೈತ ಹೋರಾಟಗಾರ, ಪ್ರಗತಿಪರ ಚಿಂತಕ ರವೀಂದ್ರಗೌಡ ಪಾಟೀಲ ಎಚ್ಚರಿಸಿದರು.

ಇಲ್ಲಿನ ಎಸ್.ಎಚ್. ನಲವಾಗಲ ಸ್ಪರ್ಧಾ ವಿಕಾಸ ಕರಿಯರ್ ಅಕಾಡೆಮಿಯ ಸಭಾ ಭವನದಲ್ಲಿ ರೈತ ಹೋರಾಟಗಾರರು, ಪ್ರಗತಿಪರ ಚಿಂತಕರು, ಸಾಹಿತಿಗಳು ಸೇರಿ ಏರ್ಪಡಿಸಿದ್ದ ಪಾಟೀಲ ಪುಟ್ಟಪ್ಪನವರ 103 ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಪಾಟೀಲರು, ಜಿಲ್ಲೆಯ ಹಿರಿಯ ಸಾಹಿತಿ ಪಾಟೀಲ ಪುಟ್ಟಪ್ಪನವರ ತವರು ಜಿಲ್ಲೆಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಪಾಟೀಲರಿಗೆ ಅವಮಾನಿಸಲಾಗಿದೆ ಎಂದರು.

ಪಾಪು ಹೆಸರಿನಲ್ಲಿ ನೆನಪು ಉಳಿಯುವಂತಹ ಕಾರ್ಯಕ್ರಮದ ಬಗ್ಗೆ ಸರ್ಕಾರಕ್ಕೆ ಒತ್ತಾಯಿಸುವ ನಿರ್ಣಯ ಮಂಡನೆಯಲ್ಲಿ ಯಾವುದೇ ವಿಷಯವನ್ನು ತೆಗೆದುಕೊಳ್ಳದೆ ಮತ್ತು ಸ್ಥಳೀಯ ಸಾಹಿತಿಗಳಿಗೆ ಆದ್ಯತೆ ನೀಡದೆ, ಸಾಹಿತಿಗಳೇ ಅಲ್ಲದವರ ದಂಡನ್ನು ಕಟ್ಟಿಕೊಂಡು ಪವಿತ್ರವಾದ ಸಾಹಿತ್ಯ ಕ್ಷೇತ್ರದಲ್ಲಿ ಜಾತಿ ಮತ್ತು ಪಕ್ಷಪಾತ ಮಾಡಿ ಆಡಳಿತ ಪಕ್ಷದವರೊಂದಿಗೆ ಸೇರಿ ಮಾಡಬಾರದ್ದನ್ನು ಮಾಡಿ, ಈ ಸಾಹಿತ್ಯ ಕ್ಷೇತ್ರವನ್ನೇ ರಾಜಕೀಯ ಕ್ಷೇತ್ರವನ್ನಾಗಿ ಮಾಡಿ ಅಪವಿತ್ರಗೊಳಿಸಿದ ಕೀರ್ತಿ ಮಹೇಶ ಜೋಶಿ ಮತ್ತು ಜಿಲ್ಲಾಧಿಕಾರಿ ನಂದನಮೂರ್ತಿ ಅವರಿಗೆ ಸಲ್ಲುತ್ತದೆ. ಸಾಹಿತ್ಯದ ಗಂಧ ಗಾಳಿ ಇಲ್ಲದವರು ತಾಲೂಕಾಧ್ಯಕ್ಷ, ಜಿಲ್ಲಾಧ್ಯಕ್ಷ, ರಾಜ್ಯಾಧ್ಯಕ್ಷರಾಗಿ ಸಾಹಿತ್ಯದ ಮರ್ಯಾದೆಯನ್ನು ತೆಗೆದಿದ್ದಾರೆ ಎಂದು ಆರೋಪಿಸಿದರು.

ಸಾಹಿತ್ಯ ಸಮ್ಮೇಳನವನ್ನು ಈ ಹಿಂದೆ ಹಾವೇರಿಯಲ್ಲಿ ನಡೆಸುವ ಬಗ್ಗೆ ಗೊಂದಲವಾಗಿ ಹಾಸನ ಜಿಲ್ಲೆಗೆ ವರ್ಗವಾಗಿ ಮತ್ತೆ ಎರಡನೇ ಬಾರಿ ಒದಗಿದ ಅವಕಾಶ ಕೈತಪ್ಪಿ, ನಮ್ಮ ಹಾವೇರಿಯ ಮರ್ಯಾದೆ ಹರಾಜು ಆಗಬಾರದೆಂಬ ಉದ್ದೇಶದಿಂದ ಸುಮ್ಮನಿದ್ದೇವೆಯೇ ಹೊರತು, ಬೇರೆ ಯಾವುದಕ್ಕೂ ಅಲ್ಲ, ಪರಿಷತ್ ಮತ್ತು ಜಿಲ್ಲಾಡಳಿತ ಸೇರಿ ಸಾಕಷ್ಟು ಹಣದ ಅವ್ಯವಹಾರ ಮಾಡಿದ್ದು, ಸಾರ್ವಜನಿಕರಿಗೆ ಹಣಕಾಸಿನ ಮಾಹಿತಿ ನೀಡಬೇಕು.

ಸಾಕಷ್ಟು ಜನಸಮೂಹ ಸೇರಿತ್ತು ಎನ್ನುವ ಅಹಂಕಾರ ಬೇಡ, ಜನ ಸೇರಿರುವ ಸಮ್ಮೇಳನದಲ್ಲಿ ಸರಿಯಾದ ರೀತಿಯಲ್ಲಿ ಸಾಹಿತ್ಯದ ಬಗ್ಗೆ ಕಾರ್ಯಕ್ರಮಗಳು ನಡೆಯಲಿಲ್ಲ. ಚಿಂತನ ಮಂಥನಗಳು ನಡೆಯಲಿಲ್ಲ. ನಿಜವಾದ ಸಾಹಿತಿಗಳಿಗೆ, ಜಿಲ್ಲೆ ಹೋರಾಟಗಾರರಿಗೆ, ಸಾಧಕರಿಗೆ ಗೌರವ ಸಿಗಲಿಲ್ಲ. ಊಟ ಉಪಚಾರದ ಕಡೆ ಜನತೆಯ ಗಮನ ಹೋಗಿತ್ತೇ ಹೊರತು ಸಾಹಿತ್ಯದ ಕಡೆಯಲ್ಲ ಎಂದು ಆರೋಪಿಸಿದರು.

ವೇದಿಕೆ ಮೇಲೆ ಸಾಹಿತಿ ಅಶೋಕ ಹಳ್ಳಿಯವರ, ಎಸ್.ಎಂ. ರಾಜಶೇಖರ, ಡಿ.ಕೆ. ಆಂಜನೇಯ, ಸಂಸ್ಥೆಯ ಕಾರ್ಯದರ್ಶಿ ಶ್ರೀನಿವಾಸ ನಲವಾಗಲ, ರೈತ ಹೋರಾಟಗಾರ ಹರಿಹರಗೌಡ ಎಸ್. ಪಾಟೀಲ ಉಪಸ್ಥಿತರಿದ್ದರು. ಇಂದುಮತಿ ಸಂಶಿ ಕಾರ್ಯಕ್ರಮ ನಿರೂಪಿಸಿದರು. ಹಾಲೇಶ ರಟ್ಟಿಹಳ್ಳಿ ವಂದಿಸಿದರು.

ಹರಿಹರ : ಇಂದು ಆಪ್ ಚುನಾವಣಾ ಸಭೆ

ಹರಿಹರ, ಜ. 17- ವಿಧಾನಸಭಾ ಚುನಾವಣೆಗೆ ಆಮ್ ಆದ್ಮಿ ಪಕ್ಷದ ಪೂರ್ವ ಜಾಗೃತಿ ಸಿದ್ಧತಾ ಸಭೆಯನ್ನು ನಾಳೆ ಬುಧವಾರ 18 ರಂದು ಸಂಜೆ 5 ಗಂಟೆಗೆ ನಗರದ ರಚನಾ ಕ್ರೀಡಾ ಟ್ರಸ್ಟ್‌ನಲ್ಲಿ ಆಯೋಜನೆ ಮಾಡಲಾಗಿದೆ. ಸಭೆಗೆ ಕೇಂದ್ರ ಹಾಗೂ ರಾಜ್ಯದ ಆಮ್ ಆದ್ಮಿ ಪಕ್ಷದ ನಾಯಕರು ಆಗಮಿಸಲಿದ್ದಾರೆ ಎಂದು ಆಮ್ ಆದ್ಮಿ ಪಕ್ಷದ ಮುಖಂಡ ಗಣೇಶ ದುರ್ಗದ್ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಸಭೆಯ ಮುನ್ನಾ ನಗರದ ಹಳೆ ಪಿ.ಬಿ. ರಸ್ತೆಯ ಅಮರಾವತಿ ಫ್ಲೈಓವರ್ ಮುಂಭಾಗದಿಂದ ಬೈಕ್ ರ್‍ಯಾಲಿ ನೆರವೇರಲಿದೆ ಎಂದು ಹೇಳಿದರು.

ಆಮ್ ಆದ್ಮಿ ಪಕ್ಷದ ತಾಲ್ಲೂಕು ಅಧ್ಯಕ್ಷ ವೈ.ಎನ್. ಮಲ್ಲಿನಾಥ್ ಮಾತನಾಡಿ, ದೇಶದಲ್ಲಿ ರಾಷ್ಟ್ರೀಯ ಪಕ್ಷದ ಮಾನ್ಯತೆಯನ್ನು ಪಡೆಯಲು ಕನಿಷ್ಠ ಪಕ್ಷ ಇಪ್ಪತ್ತು ವರ್ಷಗಳ ಕಾಲ ಬೇಕಾಗುತ್ತದೆ. ಆದರೆ ಆಮ್ ಆದ್ಮಿ ಪಕ್ಷ ಕೇವಲ ಹತ್ತು ವರ್ಷಗಳಲ್ಲಿ ರಾಷ್ಟ್ರೀಯ ಪಕ್ಷದ ಮಾನ್ಯತೆಯನ್ನು ಪಡೆದಿದೆ ಎಂದರು.

ಈ ಸಂದರ್ಭದಲ್ಲಿ ಮಹಮ್ಮದ್ ರಫಿಕ್, ಸಾಗರ ಮಿಸ್ಕಿನ್, ಜಿ.ಹೆಚ್. ಬಸವರಾಜ್, ಮಹಮ್ಮದ್ ಯೂಸುಫ್, ಜುಬೇರ್ ಆಹ್ಮದ್, ವೈ.ಎನ್. ಪ್ರಶಾಂತ್, ಸೈಯದ್ ಯೂಸುಫ್, ಆದಿಲ್ ಖಾನ್, ಜಿಯಾವುಲ್ಲಾ ಇತರರು ಹಾಜರಿದ್ದರು.

ಭದ್ರಾ ಕಾಲೇಜಿನಲ್ಲಿ ಸಂಕ್ರಾಂತಿ ಸಂಭ್ರಮ

ದಾವಣಗೆರೆ, ಜ.17- ನಗರದ ಭದ್ರಾ ಪದವಿ ಕಾಲೇಜ್ ಮತ್ತು ಸ್ನಾತಕೋತ್ತರ ಕೇಂದ್ರದಲ್ಲಿ ಮಕರ ಸಂಕ್ರಾಂತಿ ಹಬ್ಬವನ್ನು 'ಭದ್ರಾ ಸುಗ್ಗಿ ಹಬ್ಬ'ವನ್ನಾಗಿ ವಿಶೇಷವಾಗಿ ಆಚರಿಸಲಾಯಿತು.

ಸಾಂಸ್ಕೃತಿಕ ಉಡುಪುಗಳನ್ನು ತೊಟ್ಟ ವಿದ್ಯಾರ್ಥಿಗಳು ಎಳ್ಳು-ಬೆಲ್ಲವನ್ನು ಹಂಚುವ ಮೂಲಕ ಹಸನ್ಮುಖಿರಾಗಿ ನೃತ್ಯ ಮಾಡುತ್ತಾ, ಗುಂಪು-ಗುಂಪಾಗಿ ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

ರಾಜ್ಯ ವಿವಿ ಮತ್ತು ಕಾಲೇಜು ಅಧ್ಯಾಪಕರ ಒಕ್ಕೂಟದ ಅಧ್ಯಕ್ಷ ಪ್ರೊ.ಸಿ. ಎಚ್. ಮುರುಗೇಂದ್ರಪ್ಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇಂತಹ ಕಾರ್ಯಕ್ರಮಗಳು ಉತ್ತಮ ಕಲಾ ಮತ್ತು ಸಂಸ್ಕೃತಿ ಮನೋಭಾವ ಬೆಳೆಸಲು ಸಹಕಾರಿಯಾಗಿವೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಭದ್ರಾ ಎಜುಕೇಷನ್ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಎಂ.ಸಂಕೇತ್ ಮತ್ತು ಪಿಯು ಕಾಲೇಜ್ ಪ್ರಾಂಶುಪಾಲ ಡಿ.ಚಂದ್ರಪ್ಪ ಉಪಸ್ಥಿತರಿದ್ದರು. ಪದವಿ ಮತ್ತು ಸ್ನಾತಕೋತ್ತರ ಕಾಲೇಜ್ ಪ್ರಾಂಶುಪಾಲ ಪ್ರೊ.ಟಿ.ಮುರುಗೇಶ್ ಅಧ್ಯಕ್ಷತೆ ವಹಿಸಿದ್ದರು.

ಕಂಚಿಕೇರಿಯಲ್ಲಿ ಸಾಮೂಹಿಕ ವಿವಾಹ

ಹರಪನಹಳ್ಳಿ, ಜ. 17- ತಾಲ್ಲೂಕಿನ ಕಂಚಿಕೇರಿ ಗ್ರಾಮದ ಕೋಡಿ ಸಿದ್ದೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಫೆಬ್ರವರಿ 12ರಂದು ಸಾಮೂಹಿಕ ವಿವಾಹ ಕಾರ್ಯಕ್ರಮ ಜರುಗಲಿದೆ ಎಂದು ಸಂಘಟಕ ಡಾ. ಬಿದ್ರಿ ಕೊಟ್ರೇಶ್ ತಿಳಿಸಿದ್ದಾರೆ.ಲಿಂ. ಬಿದ್ರಿ ರೇವಣಸಿದ್ದಪ್ಪನವರ ನೆನಪಿಗಾಗಿ ಮೀನಾಕ್ಷಮ್ಮ ಪುತ್ರ ಸುನಿಲ್‌ಕುಮಾರ್ ಬಿದ್ರಿ ಹಾಗೂ ಅನುರಾಧ ಕೊಟ್ರೇಶ್ ಅವರು 23ನೇ ವರ್ಷದ ಉಚಿತ ಸಾಮೂಹಿಕ ವಿವಾಹ ನಡೆಸಿಕೊಡಲಿದ್ದಾರೆ ಎಂದು ತಿಳಿಸಿದರು. ಆಸಕ್ತರು ಡಾ.ಬಿದ್ರಿ ಕೊಟ್ರೇಶ್, ಅಶ್ವಿನಿ ಕ್ಲಿನಿಕ್, ಕಂಚಿಕೇರಿ, (94486 54884, 97412 88330, 97412 11440)ಇವರನ್ನು ಸಂಪರ್ಕಿಸಿ ಫೆ. 4ರೊಳಗೆ ಹೆಸರು ನೋಂದಾಯಿಸಬಹುದಾಗಿದೆ

ಯುವಕರನ್ನು ಕುಡುಕರನ್ನಾಗಿ ಮಾಡಲು ಹೊರಟ ಬಿಜೆಪಿ ಸರ್ಕಾರ

ಹರಪನಹಳ್ಳಿ, ಜ. 17- ರಾಜ್ಯ ಬಿಜೆಪಿ ಯುವಕರನ್ನು ಕುಡುಕರನ್ನಾಗಿ ಮಾಡಲು ಹೊರಟಿದೆ ಎಂದು ಹರಪನಹಳ್ಳಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಶಶಿಧರ್ ಪೂಜಾರ್ ರಾಜ್ಯ ಬಿಜೆಪಿ ಸರ್ಕಾರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಿದ ಅವರು, ಮುಖ್ಯಮಂತ್ರಿಗಳು ಮದ್ಯಪಾನ ಮಾಡುವವರ ವಯಸ್ಸಿನ ಮಿತಿಯನ್ನು 21 ವರ್ಷದಿಂದ 18 ವರ್ಷಕ್ಕೆ ಇಳಿಸಿದ್ದಾರೆ. ರಾಮ ರಾಜ್ಯದ ಹೆಸರಿನ ಮೇಲೆ ಅಧಿಕಾರ ಹಿಡಿದ ಬಿಜೆಪಿ ಪಕ್ಷ, ಇವತ್ತು ಯುವಕರನ್ನು ಕುಡುಕರನ್ನಾಗಿ ಮಾಡಲು ಹೊರಟಿದೆ. ಇದನ್ನು ರಾಮರಾಜ್ಯ ಎನ್ನಬೇಕೋ ಅಥವಾ ಮದ್ಯಪಾನ ರಾಜ್ಯ ಎನ್ನಬೇಕೋ ತಿಳಿಯದಾಗಿದೆ ಎಂದರು. ಈಗಾಗಲೇ ರಾಜ್ಯ, ದೇಶದಲ್ಲಿ ನಿರುದ್ಯೋಗದ ಸಮಸ್ಯೆ ತಾಂಡವವಾಡುತ್ತಿದೆ. ಹೀಗಿರುವಾಗ ಜಾತಿ, ಜಾತಿಗಳ ನಡುವೆ ಗಲಭೆಗಳನ್ನು ಸೃಷ್ಟಿ ಮಾಡುತ್ತಿರುವ ಈ ಬಿಜೆಪಿ ಸರ್ಕಾರ ಯುವಕರನ್ನು ಇನ್ನೂ ಹೆಚ್ಚು ತಪ್ಪುದಾರಿಗೆ ತರುವ ವ್ಯವಸ್ಥಿತವಾದ ಹುನ್ನಾರ ಮಾಡುತ್ತಿದೆ. ಮದ್ಯಪಾನ ಮಾರಾಟ ಮಾಡುತ್ತಿರುವ ಅಂಗಡಿಗಳಿಗೆ ಸರ್ಕಾರ ಟಾರ್ಗೆಟ್ ಕೊಡುತ್ತಿದೆ. ಹಾಗಾದರೆ ಹೆಚ್ಚು ಕುಡುಕರು ಆಗಲಿ ಎನ್ನುವುದು ಈ ಬಿಜೆಪಿ ಸರ್ಕಾರದ ಉದ್ದೇಶನಾ ಎಂಬುದು ತಿಳಿಯದಾಗಿದೆ. ಸರ್ಕಾರದ ಈ ಧೋರಣೆಯನ್ನು ಖಂಡಿಸುತ್ತೇನೆ ಎಂದು ಹೇಳಿದ್ದಾರೆ

ಮಲೇಬೆನ್ನೂರಿನಲ್ಲಿ ಇಂದು ಕಾಂಗ್ರೆಸ್ ಕಾರ್ಯಕರ್ತರ ಸಭೆ

ಬಿ.ಎಸ್. ಪ್ಯಾಲೇಸ್‌ನಲ್ಲಿ ಇಂದು ಸಂಜೆ 5 ಗಂಟೆಗೆ ಮಲೇಬೆನ್ನೂರು ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರ, ಅಭಿ ಮಾನಿಗಳ ಸಭೆಯನ್ನು ಶಾಸಕ ಎಸ್.ರಾಮಪ್ಪ ನೈತೃತ್ವದಲ್ಲಿ ಕರೆಯಲಾಗಿದೆ ಎಂದು ಎಂ.ಬಿ ಅಬೀದ್ ಅಲಿ ತಿಳಿಸಿದ್ದಾರೆ.

ಯಲವಟ್ಟಿ : ಇಂದು ಕಟ್ಟಡಗಳ ಉದ್ಘಾಟನೆ

ಯಲವಟ್ಟಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಉದ್ಯೋಗ ಖಾತರಿ ಯೋಜನೆಯಡಿ ಸಿದ್ಧಗೊಂಡಿರುವ ಸ್ವಚ್ಛ ಸಂಕೀರ್ಣ ಡಿಜಿಟಲ್ ಗ್ರಂಥಾಲಯ ಕಟ್ಟಡ ಮತ್ತು ಲಕ್ಕಶೆಟ್ಟಿಯಲ್ಲಿ ಹೈಟೆಕ್ ಅಂಗನವಾಡಿ ಕೇಂದ್ರದ ಉದ್ಘಾಟನೆಯನ್ನು ಇಂದು ಮಧ್ಯಾಹ್ನ 12 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಸಾನ್ನಿಧ್ಯವನ್ನು ಶ್ರೀ ಯೋಗಾನಂದ ಸ್ವಾಮೀಜಿ, ಸಚಿವ ಭೈರತಿ ಬಸವರಾಜ ಉದ್ಘಾಟಿಸಲಿದ್ದಾರೆ. ಗ್ರಾ.ಪಂ. ಅಧ್ಯಕ್ಷ ಎಲ್.ಎನ್ ನಾಗರಾಜ್ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಜಿ.ಎಂ.ಸಿದ್ದೇಶ್ವರ, ಎಸ್.ರಾಮಪ್ಪ, ವೈ.ಎ. ನಾರಾಯಣಸ್ವಾಮಿ, ಮೋಹನ್ ಕುಮಾರ್ ಕೊಂಡಜ್ಜಿ, ಕೆ.ಎಸ್. ನವೀನ್, ಅಬ್ದುಲ್ ಜಬ್ಬಾರ್, ಚಿದಾನಂದ ಎಂ. ಗೌಡ ಮತ್ತಿತರರು ಇದ್ದರು.

ಅಡಿಕೆ ತೋಟದ ರೈತ ಬಾಂಧವರೇ

ಅಡಿಕೆ ಹಿಂಗಾರು ರೋಗಕ್ಕೆ ಕಾರಣವಾದ ರೋಗಾಣು (ಕೊಲೆಟೋ ಟ್ರಕಿಯಂ ಗ್ಲೋಯಸ್ಪೊರಿಡಿಯಸ್) ಇದರಿಂದ ಅಡಿಕೆ ಹಿಂಗಾರು ಒಣಗುವುದು ಮತ್ತು ಹಿಂಗಾರು ಕೊಳೆ ರೋಗ ಬರುತ್ತದೆ. ವೈಜ್ಞಾನಿಕವಾಗಿ ನಿಯಂತ್ರಿಸುವುದು ಹೇಗೆ ಎಂದು ಮಾಹಿತಿ ಕೊಡಲಾಗುವುದು ಹಾಗೂ ಅಡಿಕೆ ತೋಟದಲ್ಲಿ ಬೆಳೆಯುವ ಕಳೆಗಳಿಗೆ ನಮ್ಮಲ್ಲಿ ಸಾವಯವ ಕಳೆನಾಶಕ ದೊರೆಯುತ್ತದೆ.

ಸಂಪರ್ಕಿಸಿ : 98451 04109

ಮಾನ್ಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಹಿರಿಯ ವಿಭಾಗ, ಎನ್.ಆರ್. ಪುರ.

ಅಪೀಲು ನಂಬರ್ 10/2022

ಅಪೀಲ್ ದಾರರುಗಳು : ಶ್ರೀಮತಿ ಸರ್ವಮಂಗಳ ವಿರುದ್ಧ

ಎದುರುದಾರರು : ಶ್ರೀ ಕೆ.ಪಿ. ಕುಮಾರ್ ಮತ್ತು ಇತರರು.

ದಿವಾಣಿ ಪ್ರಕ್ರಿಯೆ ಸಂಹಿತೆಯ ಆದೇಶ 5, ನಿಯಮ 26ರಡಿಯಲ್ಲಿ ಹೊರಡಿಸಿದ ನೋಟೀಸು.

ಎದುರುದಾರರು : 2(a)(c) ಮಂಜು ತಂದೆ ಯಲ್ಲಪ್ಪ 38 ವರ್ಷ, ಹಾರನಹಳ್ಳಿ, ಶಿವಮೊಗ್ಗ ತಾಲ್ಲೂಕು.

ಅಪೀಲುದಾರಳು ತಮ್ಮ ಹಾಗೂ ಇತರೆ ಎದುರುದಾರರ ವಿರುದ್ಧ **ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ, ಹಿರಿಯ ವಿಭಾಗ, ಎನ್.ಆರ್.ಪುರ** ಅಪೀಲು ಆಸ್ತಿಗೆ ಸಂಬಂಧಪಟ್ಟಂತೆ ಅಪೀಲನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಈಗಲೇ ತಮಗೆ ನ್ಯಾಯಾಲಯದ ಮೂಲಕ ಮತ್ತು ಅಂಚೆಯ ಮೂಲಕ ನೋಟಿಸು ಕಳುಹಿಸಿದರೂ ಸಹ ಜಾರಿಯಾಗಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣವು ದಿನಾಂಕ **06.02.2023**ರಂದು ನಿಮ್ಮ ಹಾಜರಾತಿಗಾಗಿ ಇರುತ್ತದೆ. ಆದ್ದರಿಂದ ಸದರಿ ದಿನಾಂಕದಂದು ನ್ಯಾಯಾಲಯಕ್ಕೆ **ಬೆಳಿಗ್ಗೆ 11.00** ಗಂಟೆಗೆ ನೀವಾಗಲೀ ಅಥವಾ ನಿಮ್ಮ ಪರ ವಕೀಲರ ಮುಖಾಂತರವಾಗಲೀ ಹಾಜರಾಗತಕ್ಕದ್ದು, ಒಂದೊಮ್ಮೆ ಹಾಜರಾಗಲು ತಪ್ಪಿದಲ್ಲಿ ನಿಮ್ಮಗಳ ಗೈರು ಹಾಜರಿಯಲ್ಲಿ ವಿಚಾರಣೆಯನ್ನು ಮುಂದುವರೆಸಲಾಗುತ್ತದೆ.

ಈ ದಿವಸ 16.01.2023ನೇ ಇಸವಿಯಂದು ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ನೀಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ ನ್ಯಾಯಾಲಯ,
ನರಸಿಂಹರಾಜಪುರ -577134.

ಅಪೀಲ್ ದಾರರ ಪರ ವಕೀಲರು
ಎನ್.ಶಿವಲಿಂಗಪ್ಪ, ವಕೀಲರು,
ದಾವಣಗೆರೆ.

JOB Opportunity TATA

Age limit - 35 to 60 Years. Work from anywhere in India

ಹಿರಿಯ ನಾಗರಿಕರಿಗೆ ಮತ್ತು ನಿವೃತ್ತಿ ಹೊಂದಿದವರಿಗೆ ಹಾಗೂ ಮಹಿಳೆಯರಿಗೆ ವಿಶೇಷ ಆಹ್ವಾನ

NEW BRANCH OPENED @ DAVANAGERE.



- Enjoy unlimited earning opportunity
- Work from home / Part Time/ Full time or consulting Basis
- Zero intial capital investment
- Travel abroad to our conventions
- with Fixed salary Medical Benefits and incentives

No Registration Fee

Limited Seat Only

Start your Journey from home maker to Business women

Start your second Innings of your life with a unique business opportunity

Now you can earn an income even if you are retired, here is your unique opportunity to be self-reliant

ಸುವರ್ಣಾವಕಾಶ

ಹಿರಿಯ ನಾಗರಿಕರಿಗೆ, ಉದ್ಯಮಿಗಳಿಗೆ/ ಅನಿವಾಸಿ ಭಾರತೀಯರಿಗೆ/ಗೃಹಿಣಿಯರಿಗೆ ನಿವೃತ್ತ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರಿಗೆ, ಖಾಸಗಿ ನೌಕರರು / ಶಿಕ್ಷಕರು / ವೈದ್ಯರು / ವಕೀಲರು / ನಿವೃತ್ತ ಬ್ಯಾಂಕ್ ನೌಕರರು ಮತ್ತು ಮಾಜಿ ರಕ್ಷಣಾಧಿಕಾರಿ ಇದೊಂದು ಸುವರ್ಣಾವಕಾಶ.

99866 67879, 93537 44635

ಸುತ್ತೂರು ಸುಕ್ಷೇತ್ರದಲ್ಲಿ ಇಂದಿನಿಂದ ಜಾತ್ರೆ - ಜನಜಾಗೃತಿ ಯಾತ್ರೆ

ಕಪಿಲಾ ನದಿ ತೀರದಲ್ಲಿರುವ ಶ್ರೀ ಸುತ್ತೂರು ಕ್ಷೇತ್ರವನ್ನು ತಮ್ಮ ತಪಸ್ಸಿದ್ಧಿಯಿಂದ ಜಾಗೃತ ಧರ್ಮಕ್ಷೇತ್ರವನ್ನಾಗಿ ನೆಲೆಗೊಳಿಸಿದ ಮಹಾಮಹಿಮರು, ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು. ಪೂಜ್ಯರು ಸಂಸ್ಥಾಪಿಸಿದ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವು ಸಹಸ್ರಾರು ವರ್ಷಗಳಿಂದ ಜನತೆಯ ಸಮಗ್ರ ಉನ್ನತಿಗಾಗಿ ಜ್ಞಾನಾನ್ನದಾಸೋಹಗಳ ಕೈಂಕರ್ಯವನ್ನು ನಡೆಸುತ್ತಾ ಬಂದಿದೆ.

ಶ್ರೀಮಠದ ಬಹುಮುಖ ಚಟುವಟಿಕೆಗಳ ನಿರ್ವಹಣೆಗಾಗಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಸ್ಥಾಪಿತವಾದ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಇದರ ಅಂಗಸಂಸ್ಥೆಗಳ ಮೂಲಕ ದೇಶ-ವಿದೇಶಗಳಲ್ಲಿ ಧರ್ಮ, ಸಂಸ್ಕೃತಿ, ಶಿಕ್ಷಣ, ಆರೋಗ್ಯ, ಕೃಷಿ, ಗ್ರಾಮೀಣಾಭಿವೃದ್ಧಿ, ಸಮಾಜ ಸುಧಾರಣೆ ಮುಂತಾದ ಕ್ಷೇತ್ರಗಳಲ್ಲಿ ನಿರಂತರವಾಗಿ ಸೇವಾ ಕಾರ್ಯಗಳು ನಡೆಯುತ್ತಿವೆ.

ಆದಿ ಜಗದ್ಗುರುಗಳವರ ಜಾತ್ರಾ ಮಹೋತ್ಸವವು ಪ್ರತಿ ವರ್ಷ ಪುಷ್ಯ ಬಹುಳ ದ್ವಾದಶಿಯಂದು ಪ್ರಾರಂಭವಾಗುತ್ತದೆ. ಮಾಸ ಶಿವರಾತ್ರಿಯಂದು ರಥೋತ್ಸವ ಹಾಗೂ ಮಾಘ ಶುದ್ಧ ಪಾಡ್ಯಮಿಯಂದು ತೆಪ್ಪೋತ್ಸವ ಜರುಗುತ್ತವೆ. ಆರು ದಿನಗಳ ಕಾಲ ನಡೆಯುವ ಈ ಸಂಭ್ರಮದ ಜಾತ್ರೆಯಲ್ಲಿ ಜನತೆಯ ಸರ್ವಾಂಗೀಣ ಪ್ರಗತಿಗೆ ಪೂರಕವಾದ ಹಲವಾರು ವೈವಿಧ್ಯಪೂರ್ಣ ಕಾರ್ಯಕ್ರಮಗಳು ನಡೆಯುತ್ತವೆ.

2023, ಜನವರಿ 18ರಿಂದ ಜನವರಿ 23ರವರೆಗೆ ಆರು ದಿನಗಳ ಕಾಲ ನಡೆಯುವ ಈ ಜಾತ್ರಾ ಮಹೋತ್ಸವದಲ್ಲಿ ಜನವರಿ 19ರಂದು ಸಾಮೂಹಿಕ ವಿವಾಹ, ಹಾಲರವಿ ಉತ್ಸವ, 20ರಂದು ರಥೋತ್ಸವ, 21ರಂದು ಶ್ರೀ ಮಹದೇಶ್ವರ ಕೊಂಡೋತ್ಸವ ಹಾಗೂ ಲಕ್ಷದೀಪೋತ್ಸವ, 22ರಂದು ತೆಪ್ಪೋತ್ಸವ ಹಾಗೂ ಶ್ರೀ ವೀರಭದ್ರೇಶ್ವರ ಕೊಂಡೋತ್ಸವಗಳ ಜೊತೆಗೆ ಹಲವಾರು ಧಾರ್ಮಿಕ ಕಾರ್ಯಕ್ರಮಗಳು, ವೈವಿಧ್ಯಮಯ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಕ್ರೀಡಾಚಟುವಟಿಕೆಗಳು ಜರುಗಲಿವೆ.

ಭಜನಾ ಮೇಳ : ಈ ವರ್ಷ 29ನೇ ರಾಜ್ಯಮಟ್ಟದ ಭಜನಾ ಮತ್ತು ಏಕತಾರಿ ಸ್ಪರ್ಧೆಗಳನ್ನು ಏರ್ಪಡಿಸ ಲಾಗಿದೆ. ಒಟ್ಟು ಏಳು ವಿಭಾಗಗಳಲ್ಲಿ ಈ ಸ್ಪರ್ಧೆ ನಡೆಯಲಿದ್ದು, ಪ್ರತಿ ವಿಭಾಗಕ್ಕೂ ಪ್ರತ್ಯೇಕ ಬಹುಮಾನಗಳನ್ನು ನೀಡಲಾಗುತ್ತದೆ. 18ರಂದು ಭಜನಾ ಗೀತೆಗಳನ್ನು ಒಳಗೊಂಡಿರುವ 'ಭಜನಾಂಜಲಿ' ಕೃತಿಯು ಬಿಡುಗಡೆಗೊಳ್ಳಲಿದೆ.

ವಸ್ತು ಪ್ರದರ್ಶನ : ಜಾತ್ರೆಯ ಪ್ರಮುಖ ಆಕರ್ಷಣೆಯಾದ ವಸ್ತುಪ್ರದರ್ಶನದಲ್ಲಿ ಕೈಗಾರಿಕೋತ್ಪನ್ನಗಳು, ಕೈಮಗ್ಗ, ಜವಳಿ, ಕರಕುಶಲ ಉತ್ಪನ್ನಗಳು, ಗ್ರಾಮೀಣ ಉತ್ಪನ್ನಗಳು, ಸ್ವಸಹಾಯ ಸಂಘಗಳು, ಸ್ತ್ರೀಶಕ್ತಿ ಸಂಘಗಳು ತಯಾರಿಸಿದ ಗೃಹಬಳಕೆ ಉತ್ಪನ್ನಗಳು ಹಾಗೂ ಗುಡಿ ಕೈಗಾರಿಕೆ ವಸ್ತುಗಳ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆ ಇರುತ್ತದೆ.

ಸಾಮೂಹಿಕ ವಿವಾಹ : 19 ಗುರುವಾರದಂದು ನಡೆಯುವ ಉಚಿತ ಸಾಮೂಹಿಕ ವಿವಾಹ ಮಾಡಿಸ ಲಾಗುತ್ತದೆ. ವಧುವಿಗೆ ಸೀರೆ, ಕುಪ್ಪಸ, ಮಾಂಗಲ್ಯ ಕಾಲುಂಗುರಗಳನ್ನು, ವರನಿಗೆ ಪಂಚೆ, ವಲ್ಲಿ, ಷರ್ಟ್‌ಗಳನ್ನು ನೀಡಲಾಗುತ್ತದೆ. ವಧು-ವರರು ದೃಢೀಕರಣ ಪತ್ರ ಹಾಗೂ ನೋಂದಣಿಪತ್ರಗಳನ್ನು ಸಲ್ಲಿಸಿ, ಸರ್ಕಾರ ನೀಡುವ ಪ್ರೋತ್ಸಾಹ ಧನವನ್ನು ಪಡೆದುಕೊಳ್ಳಬ ಹುದಾಗಿದೆ.

ವಿವಾಹ ಕಟ್ಟಡಗಳ ಉದ್ಘಾಟನೆ : 19 ಮತ್ತು 20ರಂದು ಶ್ರೀಕ್ಷೇತ್ರದಲ್ಲಿ ನೂತನವಾಗಿ ನಿರ್ಮಿಸಿರುವ ರಥದ ಮನೆ, ಶ್ರೀ ಚಿಪ್ಪನ ಶಿವಾಚಾರ್ಯ ಕಾಂಪ್ಲೆಕ್ಸ್, ಶ್ರೀ ಪರ್ವತೇಂದ್ರ ಶಿವಾಚಾರ್ಯ ಕಾಂಪ್ಲೆಕ್ಸ್, ಶ್ರೀ ಭಂಡಾರಿ ಬಸಪ್ಪ ಒಡೆಯರ್ ಕಾಂಪ್ಲೆಕ್ಸ್‌ಗಳು ಉದ್ಘಾಟನೆಗೊಳ್ಳಲಿವೆ.

ಕೃತಿಗಳ ಬಿಡುಗಡೆ : 18 ರ ಬುಧವಾರದಂದು ಭಜನಾ ಗೀತೆಗಳನ್ನು ಒಳಗೊಂಡಿರುವ 'ಭಜನಾಂಜಲಿ' ಕೃತಿ ಹಾಗೂ 21 ಶನಿವಾರದಂದು 'ಸಿರಿಧಾನ್ಯ ಐಸಿರಿ' ಕೃತಿಗಳನ್ನು ಬಿಡುಗಡೆಗೊಳಿಸಲಾಗುವುದು.

ಕೃಷಿ ಮೇಳ : ಕೃಷಿ ಹಾಗೂ ಕೃಷಿಗೆ ಸಂಬಂಧಿಸಿದ ತಾಂತ್ರಿಕತೆ ಬಗ್ಗೆ ರೈತರಿಗೆ ಮಾಹಿತಿ ನೀಡಲು ಪ್ರತಿ ವರ್ಷದಂತೆ ಈ ಬಾರಿಯೂ ಆಧುನಿಕ ತಂತ್ರಜ್ಞಾನಾಧಾರಿತ ಕೃಷಿಮೇಳವನ್ನು ಆಯೋಜಿಸಲಾಗಿದೆ. 1 ಎಕರೆ 'ಕೃಷಿ ಬ್ರಹ್ಮಾಂಡ, ನೆರಳುಮನೆಯಲ್ಲಿ ಬೆಳೆದ ಹಲ ವಾರು ದೇಸಿ ಹಾಗೂ ವಿದೇಶಿ ತರಕಾರಿಗಳು, ಈ ವರ್ಷ ವಿಶೇಷವಾಗಿ ಸಿರಿಧಾನ್ಯ ಬೆಳೆಗಳ ಪ್ರಾತ್ಯಕ್ಷಿಕೆ, ಮಣ್ಣಿನ ಸವ ಕಳಿ ತಪ್ಪಿಸಲು ಹಾಗೂ ಔಷಧಿ ಬೆಳೆಯಾಗಿ ಲಾವಂಚ, ದ್ವಿದಳ ಧಾನ್ಯಗಳ ವಿವಿಧ ತಳಿಗಳ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗುತ್ತದೆ.

ರೈತರ ಅನುಕೂಲಕ್ಕಾಗಿ ನೂತನ ತಂತ್ರಜ್ಞಾನವಾದ ಡ್ರೋನ್ ಬಳಕೆ ಕುರಿತಾದ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸ ಲಾಗುತ್ತದೆ. ಕೃಷಿ ಅಭಿವೃದ್ಧಿ ಇಲಾಖೆ ಗಳು, ವಿಶ್ವವಿದ್ಯಾ ನಿಲಯಗಳು ಹಾಗೂ ಖಾಸಗಿ ಉಪಕರಣಗಳ ಮಾರಾಟಗಾರರು ಈ ವಸ್ತುಪ್ರದರ್ಶನದಲ್ಲಿ ಪಾಲ್ಗೊಳ್ಳಲಿದ್ದಾರೆ. ಸಮಗ್ರ ಬೆಳೆ ನಿರ್ವಹಣೆ, ವೈವಿಧ್ಯಮಯ ಬೆಳೆಗಳ ಪ್ರಾತ್ಯಕ್ಷಿಕೆ ಇರುತ್ತದೆ. ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆ ಮಾಡಲಾಗಿದೆ. ಹಸು, ಕುರಿ, ಮೇಕೆ, ಕೋಳಿಗಳ ದೇಸಿ ತಳಿಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ಸಿರಿಧಾನ್ಯ ಮೇಳ : ಈ ವರ್ಷ 'ವಿಶ್ವ ಸಿರಿಧಾನ್ಯ ವರ್ಷ' ವಾದ ಪ್ರಯುಕ್ತ ವಿಶೇಷವಾಗಿ ಸಿರಿಧಾನ್ಯ ಮೇಳವನ್ನು ಏರ್ಪಡಿಸಿದೆ. ಇದರಲ್ಲಿ ಸಿರಿಧಾನ್ಯ ಬೆಳೆಗಳ ಪ್ರದರ್ಶನ, ಸಿರಿಧಾನ್ಯ ತಿನಿಸುಗಳ ಸ್ಪರ್ಧೆಯನ್ನು ಏರ್ಪಡಿಸಿದ್ದು, ಮನೆಯಲ್ಲಿ ತಯಾರಿಸಿಕೊಂಡು ಬರುವ ಉತ್ತಮ ಖಾದ್ಯಗಳಿಗೆ ಬಹುಮಾನ ನೀಡಲಾಗುವುದು.

ಕೃಷಿ ವಿಚಾರ ಸಂಕಿರಣ : 21 ಶನಿವಾರದಂದು ಸಿರಿಧಾನ್ಯಗಳ ಮಹತ್ವ, ಮೌಲ್ಯವರ್ಧನೆ ಹಾಗೂ ಮಾರುಕಟ್ಟೆ ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿದೆ. ಇದೇ ಸಂದರ್ಭದಲ್ಲಿ 'ಸಿರಿಧಾನ್ಯ ಐಸಿರಿ' ಕೃತಿಯನ್ನು ಬಿಡುಗಡೆಗೊಳಿಸಲಾಗುವುದು.

ಚಿತ್ರ ರಚಿಸುವ ಸ್ಪರ್ಧೆ : 1ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಬೇರೆ ಬೇರೆ ಗುಂಪುಗಳಲ್ಲಿ ಸ್ಥಳದಲ್ಲೇ ಚಿತ್ರ ಬರೆಯುವ ರಾಜ್ಯ ಮಟ್ಟದ ಸ್ಪರ್ಧೆ 21 ಶನಿವಾರ ದಂದು ಬೆಳಗ್ಗೆ 10.00 ಗಂಟೆಗೆ ಪ್ರಾರಂಭ ವಾಗುತ್ತದೆ. ರಾಜ್ಯ ಹಾಗೂ ಹೊರರಾಜ್ಯ ಕಲಾವಿದರುಗಳ ಕಲಾಕೃತಿಗಳ ಪ್ರದರ್ಶನ, ಮಾರಾಟ ಹಾಗೂ ಸ್ಥಳದಲ್ಲೇ ಸಾರ್ವಜನಿಕರ ಭಾವಚಿತ್ರ ರಚನೆ ಮಾಡಿ, ಮಾರಾಟ ಮಾಡುವ ವ್ಯವಸ್ಥೆ ಇರುತ್ತದೆ.

ಸೋಬಾನೆ ಪದ, ರಂಗೋಲಿ, ಗಾಳಿಪಟ ಸ್ಪರ್ಧೆಗಳು: ಗ್ರಾಮೀಣ ಕಲೆಗಳಾದ ಸೋಬಾನೆ ಪದ ಹಾಗೂ ರಂಗೋಲಿ ಸ್ಪರ್ಧೆಗಳನ್ನು 18 ಬುಧವಾರದಂದು, ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಗಾಳಿಪಟ ಸ್ಪರ್ಧೆಯನ್ನು 21 ಶನಿವಾರದಂದು ಏರ್ಪಡಿಸಲಾಗಿದೆ.

ಕುಸ್ತಿ ಪಂದ್ಯಾವಳಿ : 22 ಭಾನುವಾರದಂದು ರಾಷ್ಟ್ರಮಟ್ಟದ ನಾಡ ಕುಸ್ತಿ ಪಂದ್ಯಗಳು ನಡೆಯಲಿವೆ. ರಾಷ್ಟ್ರಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ವಿಜೇತರಿಗೆ 'ಸುತ್ತೂರು ಕೇಸರಿ' ಪ್ರಶಸ್ತಿ ಹಾಗೂ ಸ್ಥಳೀಯ ಉತ್ತಮ ಕುಸ್ತಿ ಸ್ಪರ್ಧೆ ವಿಜೇತರಿಗೆ 'ಸುತ್ತೂರು ಕುಮಾರ' ಪ್ರಶಸ್ತಿಗಳನ್ನು ನೀಡಲಾಗುವುದು.

ಕ್ಯಾನ್ಸರ್ ತಪಾಸಣಾ ಶಿಬಿರ : 18 ರಿಂದ 20ರವರೆಗೆ 3 ದಿನಗಳ ಕಾಲ ಕ್ಯಾನ್ಸರ್ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಕ್ಯಾನ್ಸರ್ ತಡೆಗಟ್ಟುವ ಬಗ್ಗೆ ಸಲಹೆ, ಸೂಚನೆ ಹಾಗೂ ವಿವಿಧ ರೀತಿಯ ಕ್ಯಾನ್ಸರ್‌ಗಳ ಬಗ್ಗೆ ಪರೀಕ್ಷೆಗಳನ್ನು ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಸಹಯೋಗದಲ್ಲಿ ಏರ್ಪಡಿಸಲಾಗಿದೆ. ಜೆಎಸ್.ಎಸ್ ಆಸ್ಪತ್ರೆ ವತಿಯಿಂದ ಆರೋಗ್ಯ ತಪಾಸಣಾ ಶಿಬಿರ.

ದೋಣಿ ವಿಹಾರ, ಗ್ರಾಮೀಣ ಜನರು ಹಾಗೂ ಪ್ರಾಥಮಿಕ ಮತ್ತು ಜೆಎಸ್‌ಎಸ್ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ದೇಸಿ ಆಟಗಳು ಪುರುಷರಿಗೆ 20 ಶುಕ್ರವಾರದಂದು ಮತ್ತು ಮಹಿಳೆಯರಿಗೆ 21 ಶನಿವಾರದಂದು ಹಾಗೂ ವಿದ್ಯಾರ್ಥಿಗಳಿಗೆ 20 ಶುಕ್ರವಾರದಿಂದ 22 ಭಾನುವಾರದವರೆಗೆ ದೇಸಿ ಆಟಗಳು ಇವೆ. ವಿಜೇತರಾದವರಿಗೆ ನಗದು ಬಹುಮಾನ, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರ ನೀಡಲಾಗುವುದು. ದನಗಳ ಪರಿಷೆ ರದ್ದುಪಡಿಸಲಾಗಿದೆ.

ಸಾಂಸ್ಕೃತಿಕ ಮೇಳ : ಜೆಎಸ್‌ಎಸ್ ಅಂತರ ಸಂಸ್ಥೆಗಳ ಸಾಂಸ್ಕೃತಿಕ ಮೇಳದಲ್ಲಿ 3,500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಭರತನಾಟ್ಯ, ಸಾಮೂಹಿಕ ನೃತ್ಯ, ಶಾಸ್ತ್ರೀಯ ಸಂಗೀತ, ಸುಮಾರು 400ಕ್ಕೂ ಹೆಚ್ಚು ಕಾರ್ಯಕ್ರಮಗಳಿರುತ್ತವೆ.

ಸಾಂಸ್ಕೃತಿಕ ಕಾರ್ಯಕ್ರಮಗಳು : ಗದ್ದುಗೆಯ ಆವರಣದಲ್ಲಿ ನಗರ ಪ್ರದೇಶಗಳ ವೃತ್ತಿಪರ ಹಾಗೂ ಹವ್ಯಾಸಿ ಕಲಾವಿದರಿಂದ ಗಾಯನ, ನೃತ್ಯ ಹಾಗೂ ನಾಟಕಗಳಿರುತ್ತದೆ.

ಕಲಾತಂಡಗಳಿಂದ ಪ್ರದರ್ಶನ, ಛಾಯಾಚಿತ್ರ ಸ್ಪರ್ಧೆ : ಜಾತ್ರಾ ಮಹೋತ್ಸವಕ್ಕೆ ಸಂಬಂಧಪಟ್ಟ ಛಾಯಾಚಿತ್ರ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಡಿಎಸ್‌ಎಲ್‌ಆರ್ ಕ್ಯಾಮೆರಾ ಹಾಗೂ ಮೊಬೈಲ್ ಛಾಯಾಚಿತ್ರಗಳ ಎರಡು ವಿಭಾಗಗಳ ಸ್ಪರ್ಧೆ ಇರುತ್ತದೆ. ಸ್ಪರ್ಧೆಗೆ ಯಾವುದೇ ಶುಲ್ಕವಿರುವುದಿಲ್ಲ. ಸ್ಪರ್ಧೆಯಲ್ಲಿ ಪಾಲ್ಗೊಳ್ಳಬಯಸುವವರು 9686677284, 9448609062 ದೂರವಾಣಿಗಳಲ್ಲಿ ಸಂಪರ್ಕಿಸಿ.

ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವ ಸಮಸ್ತ ಭಕ್ತಾದಿಗಳಿಗೆ ಪ್ರತಿನಿತ್ಯವೂ ಪ್ರಸಾದದ ವ್ಯವಸ್ಥೆ ಇರುತ್ತದೆ. ದೂರದಿಂದ ಬರುವವರಿಗೆ ತಾತ್ಕಾಲಿಕ ಕುಟೀರಗಳಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಕಲ್ಪಿಸಲಾಗುತ್ತದೆ.

ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸುವವರ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಖಾಸಗಿ ಸಾರಿಗೆ ಸಂಸ್ಥೆಗಳು ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಿಂದ ಶ್ರೀ ಸುತ್ತೂರು ಕ್ಷೇತ್ರಕ್ಕೆ ವಿಶೇಷ ಬಸ್ಸುಗಳ ವ್ಯವಸ್ಥೆ ಮಾಡಿವೆ.

ಸುತ್ತೂರು ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ಸಭೆಯನ್ನು 22 ಭಾನುವಾರದಂದು ಏರ್ಪಡಿಸಲಾಗಿದೆ.

ಸುತ್ತೂರು ಶ್ರೀ ಕ್ಷೇತ್ರದ ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಜಾತ್ರಾ ಮಹೋತ್ಸವದ ಸಾನ್ನಿಧ್ಯ ವಹಿಸಲಿದ್ದಾರೆ.

ನಾಡಿನ ಮಠಾಧೀಶರು, ಧರ್ಮಗುರುಗಳು, ಮುಖ್ಯಮಂತ್ರಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಚಿವರು, ಸಂಸದರು, ಶಾಸಕರು, ಗಣ್ಯರು, ಸಾಹಿತಿಗಳು, ಕಲಾವಿದರು ಜಾತ್ರಾ ಮಹೋತ್ಸವದ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಶ್ರೀಮಠದ ದಾವಣಗೆರೆ ಭಾಗದ ಅನನ್ಯ ಭಕ್ತರಲ್ಲೊಬ್ಬರಾದ ಅಜ್ಜಂಪುರ ಶೆಟ್ರು ರಾಜಣ್ಣ ವಿವರಿಸಿದ್ದಾರೆ.

ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳನ್ನು ನೇರವಾಗಿ https://www.youtube.com/@JSSMahavidyapeethaonline. **ನಲ್ಲಿ ವೀಕ್ಷಿಸಬಹುದು.**



ಮೌನ ಸಾಧನೆಯ ವ್ಯಕ್ತಿತ್ವದ ಅಥಣಿ ವೀರಣ್ಣ

ಬಹುಮುಖ ಪ್ರತಿಭೆಯ ಅಥಣಿ ವೀರಣ್ಣನವರು 77ರ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ವೀರಣ್ಣನವರು ಹಲವಾರು ಕ್ಷೇತ್ರಗಳಲ್ಲಿ ನಿಷ್ಠೆಯಿಂದ, ಕಾರ್ಯತತ್ಪರತೆಯಿಂದ ದುಡಿಯುತ್ತಾ ಬರುತ್ತಿದ್ದಾರೆ. ಉದಾ.: ಲೆಕ್ಕ ಪರಿಶೋಧನೆ, ಕೈಗಾರಿಕೋದ್ಯಮ, ಆಡಳಿತ ನಿರ್ವಹಣೆ, ಶೈಕ್ಷಣಿಕ ಕಾರ್ಯ, ಕೆಲವು ವಿಷಯಗಳಲ್ಲಿ ವಿಶೇಷ ಅಭಿರುಚಿ, ಆಸಕ್ತಿ, ಸಂಘ-ಸಂಸ್ಥೆಗಳಿಗೆ ಸೇವೆ ಪರಿಣಾಮವಾಗಿ ಸಾಮಾಜಿಕ ಮನ್ನಣೆ, ಸನ್ಮಾನ, ಪ್ರಶಸ್ತಿಗಳು ಲಭಿಸಿವೆ. ಇವುಗಳಲ್ಲಿ ವಾಣಿಜ್ಯ ಮತ್ತು ಶೈಕ್ಷಣಿಕ ಹಾಗೂ ಲೆಕ್ಕ ಪರಿಶೋಧನಾ ಕ್ಷೇತ್ರಕ್ಕೆ ಮಾಡಿದ ಅನುಪಮ ಸೇವೆ ಸ್ತುತ್ಯಾರ್ಹವಾದುದು.

'ವನಸುಮದೊಳೆನ್ನ ಜೀವನವು ವಿಕಸಿಸುವಂತೆ ಮನವನನುಗೊಳಿಸು ಗುರುವೇ ಹೇ ದೇವಾ...'

ಒಬ್ಬ ಸದಭಿರುಚಿಯುಳ್ಳ ವ್ಯಕ್ತಿಯ ಚಿಂತನೆ ಹೇಗಿರಬೇಕೆಂದು ಶ್ರೀ ಡಿ.ವಿ.ಜಿಯವರು ಬಹಳ ಸುಂದರವಾಗಿ ಈ ಗೀತೆಯ ಮೂಲಕ ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ವೀರಣ್ಣನವರ ಕುರಿತು ಬರೆಯುವಾಗ ನನಗೆ ತಕ್ಷಣ ಹೊಳೆಯುವುದು. ಈ ಮೇಲಿನ ಸಾಲುಗಳು. ಖ್ಯಾತ ಲೆಕ್ಕ ಪರಿಶೋಧಕರು, ಕೈಗಾರಿಕೋದ್ಯಮಿಗಳು, ಶಿಕ್ಷಣ ತಜ್ಞರು, ಹಲವಾರು ಭಾಷೆಗಳಲ್ಲಿ ಪ್ರಭುತ್ವ, ಆದರೂ ತಮ್ಮ ಸಾಧನೆಯ ಬಗ್ಗೆ ಎಂದೂ ಹೆಗ್ಗಳಿಕೆಯಿಂದ ಹೇಳಿಕೊಂಡವರಲ್ಲ, ಖಂಡಿತವಾಗಿ ಅವರು ಪ್ರದರ್ಶನ ಪಟುವಲ್ಲ, ವಿದ್ಯೆ ಮತ್ತು ವಿನಯ ಅವರಿಗೆ ಎರಡು ಕಣ್ಣುಗಳಿದ್ದಂತೆ. ಅವರ ಧ್ಯೇಯವೇ Simple Living and High thinking.

ಒಬ್ಬ ವ್ಯಕ್ತಿ ತಾನು ಜೀವನದಲ್ಲಿ ಏನನ್ನು ಸಾಧಿಸಿದೆನೆಂದು ಹೇಳಿಕೊಂಡಾಗ, ಹೆಗ್ಗಳಿಕೆ ಕೊಚ್ಚಿಕೊಂಡಾಗ ಅದಕ್ಕೆ ಅರ್ಥವಿಲ್ಲ. ಆದರೆ ಅವರ ಸಾಧನೆಯನ್ನು ಗುರುತಿಸಿ ಜನ-ಸಮಾಜ ಅವರನ್ನು ಮನತುಂಬಿ ಹೊಗಳಿ ಮನ್ನಣೆ ನೀಡಿದಾಗಲೇ ಅವರ ಸಾಧನೆಗೆ ಅರ್ಥ ಮತ್ತು ಬೆಲೆ.

ಅಥಣಿ ವೀರಣ್ಣನವರನ್ನು ವಿವರಿಸುವುದು ಸ್ವಲ್ಪ ಕಷ್ಟವೆನಿಸಿದರೂ ನಿಜವಾಗಿ ಅವರದ್ದು ಬಿಡಿಸಿಟ್ಟ ವ್ಯಕ್ತಿತ್ವ. ಅವರಲ್ಲೊಬ್ಬ ಕಲಾವಿದನಿದ್ದಾನೆ. ಕತೆಗಾರನಿದ್ದಾನೆ. ಅನೇಕ ತತ್ವ ವಿಚಾರಗಳಿವೆ. ಚಿಂತನಾಶೀಲತೆಯಿದೆ, ಎಲ್ಲದಕ್ಕೂ ಮುಖ್ಯ ಅವರ ಭಾಷಾ ವೈಖರಿ ಹಾಗೂ ಆಸಕ್ತಿ, ವೈವಿಧ್ಯಗಳು ಬೆರಗು ಹುಟ್ಟಿಸುವಂತವು.

ಕಂಡದ್ದನ್ನು ಕಂಡ ಹಾಗೇ ಚಿಕಿತ್ಸಕ ಬುದ್ಧಿಯಿಂದ ಅದನ್ನು ವಿಮರ್ಶಿಸುವ ಬುದ್ಧಿ ಇವರದು. ಮಾನವೀಯತೆಗೆ ಹೆಚ್ಚು ಬೆಲೆ ಕೊಡುವ ಇವರು ಪ್ರತಿಯೊಂದು ವಿಚಾರದಲ್ಲಿಯೂ ವಿಮರ್ಶಾತ್ಮಕ ದೃಷ್ಟಿಯನ್ನು ಬೀರುತ್ತಾರೆ.

ನೇರ-ನುಡಿ, ನೇರ ನಡೆಯ ವ್ಯಕ್ತಿತ್ವ ಇವರದು. ಅಷ್ಟೇ ಅಲ್ಲ ಸಮಾಜದಿಂದಲೂ ಇದನ್ನೇ ಬಯಸುತ್ತಾರೆ.

ಶ್ರೀಯುತರು 'ಮನಸಿನುದ್ವೇಗದಲಿ ಭೋಗದಲಿ ಅತಿ ಬೇಡವಲ್ಲಿಯೂ ಮಂಕುತಿಮ್ಮ" ಎಂಬ ತತ್ವವನ್ನು ಅಕ್ಷರಶಃ ಪಾಲಿಸುವ ವ್ಯಕ್ತಿತ್ವ ಉಳ್ಳವರು. ಶ್ರೀಯುತರದು ಮೌನ ಸಾಧನೆ. "ತೃಪ್ತಿಗಿಂತ ಅಧಿಕ ನಿಧಿಯಿಲ್ಲ! ತಾಳ್ಮೆಗಿಂತ ಅಧಿಕ ಗುಣವಿಲ್ಲ" ಎಂಬುದು ಅವರು ನಂಬಿದ ಸೂಕ್ತಿ.

ತಮ್ಮ ಬಡತನವನ್ನು ಮೆಟ್ಟಿ ಹಲವಾರು ರೀತಿಯ ಕಷ್ಟಗಳನ್ನು ದಾಟಿ, ಇವತ್ತು ಸಾಧಕರ ಪಟ್ಟಿಯಲ್ಲಿರುವ ಕೆಲವು ಅಪರೂಪದ ವ್ಯಕ್ತಿತ್ವ ಹೊಂದಿ ಸಾಧನೆಯ ಹಾದಿಯಲ್ಲಿ ಸಾಗಿರುವ ಅವರದು ಗೌರವಾನ್ವಿತ ವ್ಯಕ್ತಿತ್ವ.

ನಾಡಿನಾದ್ಯಂತ ಚಿರಪರಿಚಿತರಾಗಿರುವ ಅಥಣಿ ವೀರಣ್ಣನವರು ವಿಶಿಷ್ಟ ವ್ಯಕ್ತಿತ್ವದಿಂದ ಇತರರಿಗಿಂತ ವಿಭಿನ್ನರಾಗಿದ್ದಾರೆ. ಹಿರಿ-ಕಿರಿಯರಿಗೆ ಸ್ನೇಹಿತರಾಗುತ್ತಾರೆ. ಮಾರ್ಗದರ್ಶಿಗಳಾಗುತ್ತಾರೆ. ಸಮಸ್ಯೆಗಳ ಪರಿಹಾರಕ್ಕೆ ದಾರಿ ತೋರಿಸುವ ಗುರುಗಳಾಗುತ್ತಾರೆ. ತಮ್ಮ ಜೊತೆ ಇರುವವರಿಗೆ ಕುತೂಹಲ ಮೂಡಿಸುತ್ತಾ, ಮಾನವೀಯ ಪ್ರಜ್ಞೆ, ಆತ್ಮ ವಿಶ್ವಾಸ ಮೂಡಿಸುತ್ತಾರೆ. ಮಹಾನಗರಕ್ಕೆ, ಶಿಕ್ಷಣ ಕ್ಷೇತ್ರಕ್ಕೆ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಿಗೆ ಮುಖ್ಯವಾಗಿ ಮನೆತನಕ್ಕೆ ಗೌರವಯುತ ಸ್ಥಾನವನ್ನು ತಂದುಕೊಟ್ಟ ಪ್ರಮುಖ ವ್ಯಕ್ತಿಗಳಲ್ಲಿ ಅಥಣಿ ವೀರಣ್ಣನವರು ಒಬ್ಬರು. ಇಂಥವರು ನಮ್ಮ ಜೊತೆ ಇದ್ದಾರೆ ಎಂಬುದು ಹೆಮ್ಮೆಪಡುವಂತಹ ವಿಷಯ.

ನಿತ್ಯ ವ್ಯಾಯಾಮ, ನಿಯಮಿತ ಆಹಾರ ಪದ್ಧತಿ, ವ್ಯವಸ್ಥಿತ ಜೀವನ ವಿಧಾನ, ಆದರ್ಶ ವ್ಯಕ್ತಿತ್ವ, ನಾಡಿನ ಅತ್ಯುತ್ತಮ ವ್ಯಕ್ತಿಗಳಲ್ಲಿ ಒಬ್ಬರನ್ನಾಗಿಸಿದೆ. ಸರಳ ಸಜ್ಜನಿಕೆ, ಸ್ನೇಹ, ಸೌಜನ್ಯಗಳಿಗೆ ಪ್ರತಿರೂಪ. ಅಥಣಿ ವೀರಣ್ಣನವರು ಸಕುಟುಂಬ ಆಯುರಾರೋಗ್ಯ ಸಕಲ ಸೌಭಾಗ್ಯಗಳಿಂದ ಆನಂದಮಯ ಜೀವನವನ್ನು ನಡೆಸಲೆಂದು ಹಾರೈಸೋಣ.

- ಜೆಂಬಿಗಿ ಮೃತ್ಯುಂಜಯ
ಕನ್ನಡ ಉಪನ್ಯಾಸಕರು, ದಾವಣಗೆರೆ.

ಬಿಲ್ಡಿಂಗ್ ಬಾಡಿಗೆಗಿದೆ
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

ಸೈಟು, ಮನೆ, ಮಾರಾಟ ಬಾಡಿಗೆ ಬರುವಂತಹ
ಸೈಟು : ಆಂಜನೇಯ 30x40 ದಕ್ಷಿಣ. ವಿವೇಕಾನಂದ ಬಡಾವಣೆ 30x40 ಪಶ್ಚಿಮ. ಮಹಾಲಕ್ಷ್ಮಿ ಲೇಔಟ್ ಹತ್ತಿರ 33x40 ಉತ್ತರ, ಪಾರ್ಕ್ ಪಕ್ಕ. ಮನೆ : ಆಂಜನೇಯ, ಬಾಡಿಗೆ ಬರುವಂತಹ 30x40 ಉತ್ತರ.
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409
(ನೇರವಾಗಿ ಹಳೇ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ)
ಅರ್ಧ (1/2) ಪರ್ಸೆಂಟ್ ಕಮೀಷನ್ ನಮ್ಮದು

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

ಮಳಿಗೆ ಮತ್ತು ಗೋಡೌನ್ (ಅಟ್ಯಾಚ್) ಬಾಡಿಗೆಗೆ
ವಿದ್ಯಾರ್ಥಿ ಭವನ ಹತ್ತಿರ ಕೆಇಬಿ ಆಫೀಸ್ ಎದುರು, ದಾವಣಗೆರೆ.
91418 75151

ಅಡುಗೆ ಕೆಲಸದವರು ಬೇಕಾಗಿದ್ದಾರೆ
SS ಲೇಔಟ್ ಬಿ ಬ್ಲಾಕ್, 3ನೇ ಮುಖ್ಯ ರಸ್ತೆಯಲ್ಲಿರುವ ಮನೆಗೆ, ಮನೆ ಕೆಲಸಕ್ಕೆ ಮತ್ತು ಅಡುಗೆ ಮಾಡುವುದರಲ್ಲಿ ನುರಿತ ಮಹಿಳೆ ಬೇಕಾಗಿದ್ದಾರೆ.
99807 05864

ಕಾರುಗಳು ಮಾರಾಟಕ್ಕಿವೆ
Toyota Innova 2015 (V)
Maruti Baleno Automatic (2018)
Honda Brio 2016 petrol
Daivik Iynahalli Car Agent
99456 43223

ಮನೆಯ ರೀ ಪೇಂಟಿಂಗ್
ಹಳೆಯ ಮತ್ತು ಹೊಸದಾದ ಮನೆ, ಆಫೀಸ್, ಗೋಡೌನ್, ಫ್ಯಾಕ್ಟರಿಗಳಿಗೆ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪೇಂಟಿಂಗ್ ಮಾಡಿಸಿಕೊಡಲಾಗುವುದು.
ಸಂಪರ್ಕಿಸಿ: 72046 33302

ಸೈಟುಗಳು ಮಾರಾಟಕ್ಕಿವೆ
ಎಸ್.ಎಸ್. 'ಬಿ' ಬ್ಲಾಕ್, ಪಶ್ಚಿಮ, 30×40 ಅಕ್ಕ ಪಕ್ಕ, ಉತ್ತರ 40×60, ಬಸವೇಶ್ವರ ಬಡಾವಣೆ ಪೂರ್ವ 40×60, ಸಿದ್ದವೀರಪ್ಪ ಬಡಾವಣೆ ಉತ್ತರ 50×80
ಐಗೂರು ವಿಜಯಕುಮಾರ್
99457 02495

ಬೇಕಾಗಿದ್ದಾರೆ
6 ತಿಂಗಳ ಮಗುವಿಗೆ ಸ್ನಾನ ಮಾಡಿಸಲು ಮಹಿಳೆ ಬೇಕಾಗಿದ್ದಾರೆ.
63641 33480

ಬೇಕಾಗಿದ್ದಾರೆ
ಕಂಪ್ಯೂಟರ್ ಆಪರೇಟರ್
Tally Work : Any degree
ಹೋಲ್‌ಸೇಲ್ ಬಟ್ಟೆ ಅಂಗಡಿ 27 ವಿಜಯಲಕ್ಷ್ಮಿ ರೋಡ್, ಗಡಿಯಾರ ಕಂಬದ ಹತ್ತಿರ.
72043 01412

ಮನೆ ಬಾಡಿಗೆಗಿದೆ
ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ 9ನೇ ಕ್ರಾಸ್‌ನಲ್ಲಿ ಡೋರ್ ನಂ. 144 ನಂಬರಿನ ಮನೆಯ ಒಂದನೇ ಮಹಡಿಯಲ್ಲಿ ನೀರಿನ ಸೌಕರ್ಯ ಇರುವ 3 ಬೆಡ್ ರೂಂ ಮನೆ ಬಾಡಿಗೆಗಿದೆ. ಸಂಪರ್ಕಿಸಿ
94480-47506

ಸೈಟುಗಳು ಮಾರಾಟಕ್ಕಿವೆ
ವಿನಾಯಕ ಬಡಾವಣೆ ದಕ್ಷಿಣ 30×50 ಅಕ್ಕ ಪಕ್ಕ, ಉತ್ತರ 30×70, ಬನಶಂಕರಿ ಬಡಾವಣೆ ಪೂರ್ವ 40×60, ಪಶ್ಚಿಮ 30×65 ಅಕ್ಕ ಪಕ್ಕ, ಪಕ್ಕ 40×65 ದಕ್ಷಿಣ-ಪಶ್ಚಿಮ ಕಾರ್ನರ್, ಉತ್ತರ 50×100
ಐಗೂರು ವಿಜಯಕುಮಾರ್
99457 02495

ಬೇಕಾಗಿದ್ದಾರೆ
Marketing Executives
Edu : Degree / Master Degree
Exp : Minimum 3 Years.
Send resume us :
mail id :
Sree.hari2253@gmail.com
(Interview on monday)

ಸೈಟು ಮಾರಾಟಕ್ಕೆ ಇದೆ
ಎಸ್.ಎ ರಾಘವೇಂದ್ರ ನಗರ, ಸರ್.ಎಂ.ವಿ ಪಿಯು ಕಾಲೇಜು ರೋಡ್, ಲೋಕಿಕೆರೆ, ಇಂಡಸ್ಟ್ರೀಯಲ್ ಏರಿಯಾ ರಸ್ತೆ. 40x60 ಖಾಲಿ ಸೈಟು ಉತ್ತರ ದಿಕ್ಕಿಗೆ ಮಾರಾಟಕ್ಕೆ ಇದೆ.
90663 71746, 63610 73895

ಬೇಕಾಗಿದ್ದಾರೆ
ಫೀಲ್ಡ್ ಸರ್ವೀಸ್ ಟೆಕ್ನೀಷಿಯನ್ ವಿದ್ಯಾರ್ಹತೆ : ಐಟಿಐ ಫಿಟ್ಟರ್, ಡಿಪ್ಲೋಮಾ ಇನ್ ಮೆಕ್ಯಾನಿಕಲ್, ಸ್ಯಾಲರಿ ನೆಗೋಸಿಯೇಬಲ್
ಸಂಪರ್ಕಿಸಿ : ಅನು ಏಜೆನ್ಸೀಸ್
ಕಾವೇರಿ ಫಾರ್ಮಾ ಎದುರು, ವಾಸವಿ ರೋಡ್, ಪ್ರಜಾವಾಣಿ, ಆಫೀಸ್ ಕೆಳಗೆ, ದಾವಣಗೆರೆ.
ಫೋ. : 98442 47494

ಸಂಸ್ಥೆಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ
1) ಆಪ್ತ ಸಮಾಲೋಚಕರು - 2 (MSW)
2) ಕ್ಷೇತ್ರ ಕಾರ್ಯಕರ್ತರು-2 (BA)
3) ಅಡುಗೆಯವರು-1
(ಪುರುಷ-ಮಹಿಳೆಯರು ಬೇಕಾಗಿದ್ದಾರೆ)
ಮೊ. : 79751 99825
ಈ ನಂಬರ್‌ಗೆ ರೆಸ್ಯೂಂ ವ್ಯಾಟ್ಸಾಪ್‌ಗೆ ಕಳುಹಿಸಿ.

Wanted
Room boys / receptionist
98861 58644

ಗೋಡೌನ್ ಬಾಡಿಗೆಗೆ ಇದೆ
ಎಪಿಎಂಸಿ ದಾವಣಗೆರೆ, ಡಿ ಬ್ಲಾಕ್, 137, ಗೋಡೌನ್ 5280 ಅಡಿ, ಅಳತೆಯ ಗೋಡೌನ್ ಬಾಡಿಗೆಗೆ ಇದೆ. ಚೌಡೇಶ್ವರಿ ದೇವಸ್ಥಾನ ಎದುರಿಗೆ
95350 61255, 79751 91291

ಬೇಕಾಗಿದ್ದಾರೆ
Data Operator
Operator - 3,
ಪಾಂಪ್ಲೆಟ್ ಹಂಚಲು ಹುಡುಗರು - 2.
Conatct :
74835 71646

ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ
ಮಹಿಳೆಯರು, ಪುರುಷರು
ಸಂಪರ್ಕಿಸಿ
ಮೋಹನ್ ಕಾಫೀ ಬಾರ್
ದಾವಣಗೆರೆ
98446 30046

ಬೇಕಾಗಿದ್ದಾರೆ
B.Sc - 2, CP.Ed / BP.Ed -1
B.Sc, BEd (CBZ) - 2
ಮೌಂಟ್ ಎವರೆಸ್ಟ್ ವಿದ್ಯಾಲಯ
ನಿಟುವಳ್ಳಿ, ಜಯನಗರ ಸಿ ಬ್ಲಾಕ್, ದಾವಣಗೆರೆ.
97439 24203, 91136 10789

KHB ಸೈಟುಗಳು ಮಾರಾಟಕ್ಕೆ
ಕರ್ನಾಟಕ ಹೌಸಿಂಗ್ ಬೋರ್ಡ್ (ತುಂಗಭದ್ರಾ ಬಡಾವಣೆ) ದಾವಣಗೆರೆಯಲ್ಲಿ 30X40 ಅಳತೆಯ ದಕ್ಷಿಣ ದಿಕ್ಕಿನ ಸೈಟುಗಳು ಫಲಾನುಭವಿಗಳಿಂದ ನೇರ ಮಾರಾಟ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
ಫೋ. : 63605 67975

ಬೇಕಾಗಿದ್ದಾರೆ
ದಾವಣಗೆರೆ ಸುತ್ತ-ಮುತ್ತಲು ಕೆಲಸ ಮಾಡಲು ಸೆಕ್ಯೂರಿಟಿ, ರೂಂ ಬಾಯ್, ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ ಮತ್ತು ಮಾಸೂರಿನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಕೆಲವು ಕಡೆ ಊಟ ಮತ್ತು ವಸತಿ ವ್ಯವಸ್ಥೆಯಿರುತ್ತದೆ. ಕೂಡಲೇ ಸಂಪರ್ಕಿಸಿ.
74113 07071, 63624 79957
82177 93007

ಬೇಕಾಗಿದ್ದಾರೆ (ಹರಿಹರ)
ಕಂಪ್ಯೂಟರ್ ಟೀಚರ್ ಇಂಗ್ಲೀಷ್ ಟೀಚರ್
(ಮಹಿಳಾ ಅಭ್ಯರ್ಥಿ ಮಾತ್ರ)
ಅನುಭವವಿರುವ/ಫ್ರೆಷರ್ ಬೇಕಾಗಿದ್ದಾರೆ.
ಫೋ. : 93802 29199

ಬೇಕಾಗಿದ್ದಾರೆ
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. PUC or Any Degree. ವಿಳಾಸ : ಕಾವೇರಿ ಮೆಡಿಹೌಸ್ ಪ್ರೈ. ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 577 002.

ಮನೆ ಬಾಡಿಗೆಗೆ ಇದೆ
ದಾವಣಗೆರೆ ಬಿಐಇಟಿ ಹತ್ತಿರ, ಸ್ವಾಮಿ ವಿವೇಕಾನಂದ ಬಡಾವಣೆ, 3ನೇ ಮೇನ್, 1ನೇ ಕ್ರಾಸ್, ನಂ. 1854/2ರಲ್ಲಿ 2 BHK ಮನೆ ಬಾಡಿಗೆಗೆ ಇದೆ.
ಮೊ. : 9742090943

4 BHK DUPLEX VILLA HOUSE FOR SALE
60x50 sqft 3000 ft Spacious hall, Dinning , Italian kitchen , Drawing room, Balcony Sitout , 4 Toilet Room, Pooja Room , 24x7 Water, Solar Facility, 2 Car parking Spacious hall @ Swami Vivekananda Badavane, Davanagere no brokers allowed. Contact :
98804 36414

ಸೈಟುಗಳು ಮತ್ತು ಮನೆ ಮಾರಾಟಕ್ಕಿವೆ
ಸಿದ್ದವೀರಪ್ಪ ಬಡಾವಣೆ 33×50 ಪೂರ್ವ, ಮಹಾಲಕ್ಷ್ಮಿ ಬಡಾವಣೆ 30×40 ಪೂರ್ವ, ಜಯನಗರ 27+30×50 ಪಶ್ಚಿಮ, ರಶ್ಮಿ ಹಾಸ್ಟೆಲ್ ಹತ್ತಿರ 30×60 ಪೂರ್ವ
ಏಜೆಂಟರು
ಮೊ. : 9741811694

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

WANTED
B.Sc B.Ed Teacher for High School. Science subject Ladies Only.
95358 85997, 90359 16750

ಬಿಲ್ಡಿಂಗ್ ಬಾಡಿಗೆಗಿದೆ
ಹದಡಿ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಉದಯ ಸೂಪರ್ ಮಾರ್ಟ್ ಎದುರಿಗೆ ಸೆಲ್ಲರ್ 3000 ಅಡಿ, ಗ್ರೌಂಡ್ ಫ್ಲೋರ್ 3800 ಅಡಿ, ಮೊದಲನೇ ಮಹಡಿ 1500 ಅಡಿ ಇರುವ ವಾಣಿಜ್ಯ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ.
96205 95579

WANTED
Banking Sector tele caller (Female Only)
Qualification : Any Degree.
No. 2257/5 2nd Floor, MCC `A' Block Beside Toagataveera Kalyana Mantapa
81237 63199
Interview time : 11AM

KHIMA & 2 CHAPATI ONLY 65/-
Parcel Only
Book Advance
Mobi. : 82177 01552

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಸಂಬಳ 12000/- ಊಟ, ರೂಂ ಉಚಿತ ವಯಸ್ಸು 18 ರಿಂದ 25
ಸಂಪರ್ಕಿಸಿ : 97400 98064
97400 98047

Change of Name
I B.S. Kotresh S/o Belludi Shekarappa 34 years resident @ Belludi Village, Harihara Tq. My name is B.S Kotresh in my present Aadhar card and pan card I am also called as Kotreshi B.S Accordingly in my salary Account and old Aadhar card. I am state that the above two name are me only and to none-else. and I am the same person. In future I shall continue my name as B.S Kotresh before notary Davanagere on 17.1.2023.
B.S.Kotresh

ಸೈಟಿನ ಮೂಲ ಪತ್ರ ಕಳೆದಿದೆ
ಪ್ರವೀಣ್ ಕುಮಾರ್ ಮತ್ತು ಹಿತೇಶ್‌ಕುಮಾರ್ ಹೆಸರಿನಲ್ಲಿರುವ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿದ, ಯರಗುಂಟೆ ವಿಭಾಗದಲ್ಲಿ ಸೇರ್ಪಡೆಯಾಗಿರುವ ಸೈಟ್ ನಂ. 65, ಸರ್ವೆ ನಂ. 21/2w/2 ಇವರ ಚಾಲ್ತಿ ಡೋರ್ ನಂ. 365/64, ಮತ್ತು 365/65ರ ಪತ್ರವು ದಿನಾಂಕ : 1.10.2022 ರಂದು ಮನೆಯನ್ನು ಸ್ವಚ್ಛ ಮಾಡುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನ್‌ಗೆ ತಿಳಿಸಲು ಕೋರಿದೆ.
ಫೋ. : 94495 78904

ಪ್ರವೇಶ ಪ್ರಕಟಣೆ
SSLC, PUC -(Arts/Com/Sci)
NURSERY TEACHER TRAINING (NTC)
BA , B.COM, BBA, MBA (ALL)
ಶ್ರೀ ಗಂಗೋತ್ರಿ ಕರೆಸ್ಪಾಂಡೆನ್ಸ್ ಕಾಲೇಜ್
ಲಾಯರ್ ರೋಡ್, ದಾವಣಗೆರೆ.
86602 35013

ಉಚಿತ
ಮನೆ ಪ್ಲಾನ್ & ಫ್ರಂಟ್ ಎಲಿವೇಷನ್
ಪ್ರತಿ ಚದುರಡಿಗೆ 1850 ರಿಂದ 1950/- ರೂನಂತೆ ಕಟ್ಟಡ ನಿರ್ಮಿಸಿ ಕೊಡಲಾಗುವುದು. ಅವರಿಗೆ ಮನೆ ಪ್ಲಾನ್ ಹಾಗೂ ಫ್ರಂಟ್ ಎಲಿವೇಷನ್ ಉಚಿತ (T&C apply)
ಮರುತ್ ಕನ್‌ಸ್ಟ್ರಕ್ಷನ್
YMC ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
ಫೋ. : 98868 96574

ತಕ್ಷಣ ಬೇಕಾಗಿದ್ದಾರೆ
ಕೊರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಡ್ರೈವರ್ ಬೇಕಾಗಿದ್ದಾರೆ. ಇಂಗ್ಲಿಷ್ ಓದಲು, ಬರೆಯಲು ಬರಬೇಕು. ಆಸಕ್ತ ಇದ್ದಲ್ಲಿ ಮೂಲ ದಾಖಲಾತಿಯೊಂದಿಗೆ ಸಂಪರ್ಕಿಸಿ.
98800 42597, 89711 19130
Whatsapp no. 7019983025

ಮನೆಯಿಂದಲೇ ಕೆಲಸ
ಕನ್ನಡ ಮತ್ತು ಇಂಗ್ಲಿಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ ಗೃಹಿಣಿಯರಿಗೆ, ವಿದ್ಯಾರ್ಥಿಗಳಿಗೆ, ನಿವೃತ್ತರಾದವರಿಗೆ ಎಲ್ಲರಿಗೂ ಸದಾವಕಾಶ. ದಿನದ ಬಿಡುವಿನ ಸಮಯದಲ್ಲಿ ಕೆಲಸ ಮಾಡಿ ತಿಂಗಳಿಗೆ 14,000/- ರಿಂದ 20,000/- ವರೆಗೆ ಗಳಿಸಿ. ಮಾಹಿತಿಗಾಗಿ ಸಂಪರ್ಕಿಸಿ.
91487 33213

ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ
ನಂ.1 ವಶೀಕರಣ ಸ್ಪೆಷಲಿಸ್ಟ್
ನೀವು ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ನಿಮ್ಮ ಯಾವುದೇ ಸಮಸ್ಯೆಗಳನ್ನು 100% ಪರಿಹಾರ ಮಾಡುತ್ತಾರೆ. ಗಾಂಧಿ ಸರ್ಕಲ್, ಆಹಾರ 2000, ದಾವಣಗೆರೆ.
89716 99826

ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡಿಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

ಪಠ್ಯೇತರ ಚಟುವಟಿಕೆಗಳ ಜೊತೆ ಸಾಮಾನ್ಯ ಜ್ಞಾನಕ್ಕೂ ಆದ್ಯತೆ ನೀಡಬೇಕು: ಶಾರದ ಹಾವೇರಿ

ದಾವಣಗೆರೆ, ಜ. 17- ಪಠ್ಯ, ಪಠ್ಯೇತರ ಚಟುವಟಿಕೆಗಳ ಜೊತೆಗೆ ಸಾಮಾನ್ಯ ಜ್ಞಾನಕ್ಕೂ ಹೆಚ್ಚಿನ ಆದ್ಯತೆ ನೀಡುವ ಮೂಲಕ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಕಾರಣೀಭೂತವಾಗಿದೆ ಎಂದು ಹಳೆಯ ವಿದ್ಯಾರ್ಥಿ, ಕುಡಿತಿನಿ ಕೆಪಿಟಿ ಸಿಎಲ್ ಕಾರ್ಯನಿರ್ವಾಹಕ ಇಂಜಿನಿಯರ್ ಶಾರದ ಹಾವೇರಿ ಮಠ ಪ್ರಶಂಸೆ ವ್ಯಕ್ತಪಡಿಸಿದರು.

ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಆವರಣದಲ್ಲಿ ಇಂದು ಆಯೋಜಿಸಿದ್ದ ಶ್ರೀ ವಿದ್ಯಾಸಂಸ್ಥೆಯ 53 ನೇ ವಾರ್ಷಿಕೋತ್ಸವದ ಮೂರನೇ ದಿನದ ಸಿದ್ಧಗಂಗಾ ಪ್ರಶಸ್ತಿ ಪ್ರದಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಿದ್ಧಗಂಗಾ ವಿದ್ಯಾಸಂಸ್ಥೆಯು ಜ್ಞಾನ ದೇಗುಲವೇ ಸರಿ, ಇಲ್ಲಿ ವಿದ್ಯಾರ್ಥಿಗಳ ಬಗ್ಗೆ ವೈಯಕ್ತಿಕ ಕಾಳಜಿ ವಹಿಸುವುದಲ್ಲದೆ, ಸಮಯಕ್ಕೆ ಹೆಚ್ಚು ಮಹತ್ವ ಕೊಡಲಾಗುತ್ತದೆ. ಪರೀಕ್ಷೆ ಪೂರ್ವ ತಯಾರಿಯನ್ನು ಶಿಸ್ತುಬದ್ಧವಾಗಿ ನಡೆಸಲಾಗುತ್ತದೆ. ಸಾಮೂಹಿಕ ಅಧ್ಯಯನವನ್ನು ಸಹ ವ್ಯವಸ್ಥಿವಾಗಿ ಮಾಡಿಸಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳು ಅತಿ ಹೆಚ್ಚು ಅಂಕ ಪಡೆಯಲು ಸಹಕಾರಿಯಾಗುತ್ತದೆ ಎಂದರು.

ಶ್ರೀಮತಿ ರೇಖಾ ಮಹಂತೇಶ್ ಬೀಳಗಿ ಅವರು, ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ 'ಸಿದ್ಧಗಂಗಾ' ಪ್ರಶಸ್ತಿ ಪ್ರದಾನ ಮಾಡಿದರು. ಸಿದ್ಧಗಂಗಾ ಸ್ಕೂಲ್ (ಸಿಬಿಎಸ್‌ಇ) ಪ್ರಾಚಾರ್ಯರಾದ ಗಾಯತ್ರಿ ಚಿಮ್ಮಡ್ ಅಧ್ಯಕ್ಷತೆ ವಹಿಸಿದ್ದರು.

ಹಿರಿಯ ಉಪನ್ಯಾಸಕರಾದ ಡಾ.ಡಿ.ಆರ್. ಉಷಾ, ಯು.ಡಿ. ಲಕ್ಷ್ಮಿನಾರಾಯಣ, ಸಿದ್ಧಗಂಗಾ ಶಾಲೆ (ಸಿಬಿಎಸ್‌ಇ) ಉಪ ಪ್ರಾಂಶುಪಾಲರಾದ ಮಂಜುಳಾ ಹಂಪಾಳಿ, ಸಹ ಶಿಕ್ಷಕಿ ಆರ್. ವಸಂತ ಉಪಸ್ಥಿತರಿದ್ದರು. ಶಾಲಾ ಗೀತೆ ನಂತರ ಶಿಕ್ಷಕಿ ರೇಖಾರಾಣಿ ಸ್ವಾಗತಿಸಿದರು.

ಶಿವಯೋಗಿ ಸಿದ್ದರಾಮೇಶ್ವರರ ಜೀವನದ ಮೌಲ್ಯಗಳು ಇಂದಿನ ಪೀಳಿಗೆಗೆ ಆದರ್ಶ : ಡಿಸಿ ಶಿವಾನಂದ ಕಾಪಶಿ

ದಾವಣಗೆರೆ, ಜ.17- ಶಿವಯೋಗಿ ಸಿದ್ದರಾಮರು ಬಸವಣ್ಣ, ಅಲ್ಲಮಪ್ರಭುಗಳ ಕಾಲದ ಮಹಾನ್ ಪವಾಡ ಪುರುಷರು. 12ನೇ ಶತಮಾನದಲ್ಲೇ ಕಾಯಕದ ಮೂಲಕ ಅಧ್ಯಾತ್ಮ ಕಂಡುಕೊಂಡವರು. ಇವರ ಆದರ್ಶಗಳನ್ನು ಇಂದಿನ ಪೀಳಿಗೆಗೆ ಆದರ್ಶವಾಗಬೇಕು ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದರು.

ಭಾನುವಾರ ಜಿಲ್ಲಾಡಳಿತ ಭವನ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಭೋವಿ ಸಮಾಜ ಇವರ ಸಂಯುಕ್ತಾಶ್ರಯದಲ್ಲಿ, ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಮೊನ್ನೆ ನಡೆದ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತ್ಯೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಲೌಕಿಕತೆಯಿಂದ ಅಲೌಕಿಕತೆಯ ಕಡೆಗೆ, ಮುಗ್ಧತೆಯಿಂದ ಲೋಕಕಲ್ಯಾಣಕ್ಕಾಗಿ ಜೀವ ತೆತ್ತವರು ಸಿದ್ದರಾಮರು ಎಂದು ಹೇಳಿದರು. ಫ.ಗು ಹಳಕಟ್ಟಿಯವರು ಸಿದ್ದರಾಮೇಶ್ವರ ವಚನಗಳನ್ನು ಸೇರಿ, ಶರಣರ ವಚನಗಳನ್ನು ಸಂಗ್ರಹಿಸಿದ್ದಾರೆ. ಇವರನ್ನು ಸೊನ್ನಲ್ಲಿಗೆ ಸಿದ್ದರಾಮೇಶ್ವರರು ಎಂತಲೂ ಕೂಡ ಕರೆಯುತ್ತಾರೆ. ಆ ಶತಮಾನದಲ್ಲೇ ಸಾವಿರಾರು ಕೆರೆ, ಕಟ್ಟೆಗಳನ್ನು ನಿರ್ಮಿಸಿದ್ದಾರೆ. ಅವರ ವಚನ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎ. ಚನ್ನಪ್ಪ, ಮಹಾನಗರ ಪಾಲಿಕೆ ಮಹಾಪೌರರಾದ ಜಯಮ್ಮ ಆರ್ ಗೋಪಿನಾಯ್ಕ್, ಹೆಚ್ಚುವರಿ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ಮತ್ತು ಭೋವಿ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಜಿ.ಎಂ.ಐ.ಟಿ. ಕಾಲೇಜು, ದೇವರಾಜ ಅರಸು ಬಡಾವಣೆ, ಪೂಜಾ ಹೋಟೆಲ್, ಸಾಯಿ ಹೋಟೆಲ್, ಶಂಕರ ವಿಹಾರ ಬಡಾವಣೆ, ವಿನಾಯಕ ನಗರ, ಸಬ್‌ರಿಜಿಸ್ಟರ್ ಆಫೀಸ್, ಬಿ.ಎಸ್.ಎನ್.ಎಲ್ ಆಫೀಸ್, ಕೋರ್ಟ್ ಸುತ್ತ ಮುತ್ತ, ಗಿರಿಯಪ್ಪ ಲೇಔಟ್, ಪಿ.ಬಿ. ರಸ್ತೆ, ಸಂಗೊಳ್ಳಿ ರಾಯಣ್ಣ ಸರ್ಕಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ವಿದ್ಯಾನಗರ ಫೀಡರ್ ವ್ಯಾಪ್ತಿಯ ಶಿವಕುಮಾರಸ್ವಾಮಿ ಬಡಾವಣೆ 1 ಮತ್ತು 2ನೇ ಹಂತ, ಹದಡಿ ರಸ್ತೆ, ಸೇಂಟ್‌ಜಾನ್ ಸ್ಕೂಲ್, ಐ.ಟಿ.ಐ. ಕಾಲೇಜು, ರಿಂಗ್ ರಸ್ತೆ, ಶ್ರೀನಿವಾಸ ನಗರ, ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ವಿದ್ಯಾರ್ಥಿಗಳು ಬದುಕು ಕಟ್ಟಿಕೊಳ್ಳುವ ಕನಸು ಕಾಣಬೇಕು

ವಿದ್ಯಾನಿಕೇತನ ಪಬ್ಲಿಕ್ ಶಾಲಾ ವಾರ್ಷಿಕೋತ್ಸವದಲ್ಲಿ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ

ದಾವಣಗೆರೆ, ಜ.17- ಆಸಕ್ತಿ ಮತ್ತು ಕಠಿಣ ಶ್ರಮದಿಂದ ವಿದ್ಯಾರ್ಥಿಗಳು ತಮ್ಮ ಮುಂದಿನ ಬದುಕನ್ನು ಕಟ್ಟಿಕೊಳ್ಳುವ ಕನಸು ಕಾಣಬೇಕು ಎಂದು ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಜಯನಗರದ ವಿದ್ಯಾನಿಕೇತನ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲಾ ವಾರ್ಷಿಕೋತ್ಸವ ಸಮಾರಂಭದ ದಿವ್ಯ ಸಾನಿಧ್ಯವಹಿಸಿ ಅವರು ಮಾತನಾಡಿದರು. ಮುಂದುವರೆದು ವಾಣಿಜ್ಯ ನಗರಿಯಾಗಿದ್ದ ದಾವಣಗೆರೆ ಇಂದು ಶಿಕ್ಷಣ ನಗರಿಯಾಗಿದೆ. ವ್ಯಾಪಾರೀಕರಣವಾಗುತ್ತಿರುವ ಶಿಕ್ಷಣದ ಬದಲಿಗೆ ನೈತಿಕ, ವೈಚಾರಿಕ, ಸಾಂಸ್ಕೃತಿಕ ಅಂಶಗಳನ್ನು ಬಿಂಬಿಸುವ ಮತ್ತು ಹಿಂದುಳಿದ ಹಾಗು ಮಧ್ಯಮ ವರ್ಗದ ಪೋಷಕರ ಆಶಾಕಿರಣವಾಗಿ ವಿದ್ಯಾನಿಕೇತನ ಶಾಲೆ ದಶಮಾನೋತ್ಸವ ಆಚರಿಸುತ್ತಿರುವುದು ಗಮನಾರ್ಹ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಪ್ರಾಧ್ಯಾಪಕ ಡಾ.ಎ.ಬಿ.ರಾಮಚಂದ್ರಪ್ಪ ಮಾತನಾಡಿ, ಯಾರು ಚಿಕ್ಕಂದಿನಲ್ಲಿ ಕಷ್ಟ,

ನೋವು, ಹಸಿವು ಮತ್ತು ಸಂಕಟವನ್ನು ಅನುಭವಿಸಿ, ಅಪಮಾನಗಳಲ್ಲಿ ಬಳಲಿ ಬೆಂದಿರುವರೋ ಅವರು ಮುಂದೆ ದೇಶವನ್ನು ನಿರ್ಮಿಸಬಲ್ಲರು. ಅಕ್ಷರಸ್ಥರು ಹೆಚ್ಚಾದಂತೆ ಧರ್ಮಾಂಧತೆ, ಕೋಮುವಾದಿ ಧೋರಣೆ ಹೆಚ್ಚುತ್ತಲಿದೆ, ಧನದಾಹಿ ಮನಸ್ಸುಗಳು ಪೋಷಕರಲ್ಲಿ ಕಂಡುಬರುತ್ತಿವೆ. ಮೌಲ್ಯ ಹಾಗು ಗುಣಮಟ್ಟದ ಶಿಕ್ಷಣ ನೀಡಬೇಕಾಗಿದೆ. ಈ ದಿಸೆಯಲ್ಲಿ ವಿದ್ಯಾನಿಕೇತನ ಶಾಲೆ ಶಿಕ್ಷಣ ನೀಡುತ್ತಿರುವುದು ಸಂತಸದ ವಿಚಾರ ಎಂದರು.

ಮತ್ತೋರ್ವ ಮುಖ್ಯ ಅತಿಥಿ ಹಡಗಲಿ ವಿದ್ಯಾಂಜಲಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಎಂ.ಎಂ.ಬಸವರಾಜ ಮಾತನಾಡಿ, ಬುನಾದಿ ಭದ್ರವಾಗಿಲ್ಲದಿದ್ದರೆ ಕಟ್ಟಡ ಸುಭದ್ರವಾಗಿರುವುದಿಲ್ಲ. ಹಾಗೆಯೇ ಪ್ರಾಥಮಿಕ ಹಂತದ ಶಿಕ್ಷಣವೂ ಮುಖ್ಯ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾಸಂಸ್ಥೆಯ ಸಂಸ್ಥಾಪಕರೂ, ಪದವಿ ಪೂರ್ವ ಶಿಕ್ಷಣ ಇಲಾಖೆ ವಿಶ್ರಾಂತ ಉಪ ನಿರ್ದೇಶಕರೂ ಆದ ರುದ್ರಮುನಿ ಮಾತನಾಡಿ, ಯಾವುದೇ ಪ್ರವೇಶ ಪರೀಕ್ಷೆ ಇಲ್ಲದೇ ಇಲ್ಲಿ ಎಲ್ಲ ಮಕ್ಕಳಿಗೂ ದಾಖಲಾತಿ ಅವಕಾಶ ಕಲ್ಪಿಸಿ, ಆದರ್ಶಮಯ ಮತ್ತು ಸಂಸ್ಕಾರಯುತ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಆದ್ದರಿಂದ ಹೆಚ್ಚಿನ ಮಟ್ಟದಲ್ಲಿ ಶಿಕ್ಷಣ ನೀಡುವ ನಮ್ಮ ಶಾಲೆಗೆ ಮಕ್ಕಳನ್ನು ಸೇರಿಸುವಂತೆ ಮನವಿ ಮಾಡಿದರು.

ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪದವಿ ಶಿಕ್ಷಣ ಇಲಾಖೆ ನಿವೃತ್ತ ಉಪನಿರ್ದೇಶಕ ಎ. ವೀರಭದ್ರಪ್ಪ ಬಹುಮಾನ ವಿತರಿಸಿದರು.

ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಆರ್.ಮೀನಾಕ್ಷಿ, ಕಾರ್ಯದರ್ಶಿ ಆರ್. ಮಂಜುನಾಥ ಹೆಗಡೆ, ಆಡಳಿತಾಧಿಕಾರಿ ಕೆ.ಬಿ. ಆನಂದ್ ಉಪಸ್ಥಿತರಿದ್ದರು.

ಶಿಕ್ಷಕಿ ಶ್ರೀಮತಿ ಶಾರದ ಕುಲಕರ್ಣಿ ಪ್ರಾರ್ಥಿಸಿದರು.ಮುಖ್ಯೋಪಾಧ್ಯಾಯಿನಿ ಜಿ. ಶಕುಂತಲಾ ಸ್ವಾಗತಿಸಿದರು. ಮುಖ್ಯೋಪಾಧ್ಯಾಯ ಬಿ.ಸಿ.ರೇಣುಕಾರಾಧ್ಯ ವರದಿ ವಾಚಿಸಿದರು. ಶಿಕ್ಷಕಿ ವನಿತಾ ನಿರೂಪಿಸಿದರು.

ನರ್ಸಿಂಗ್‌ಗೆ ಮರು ಪರೀಕ್ಷೆ ನಡೆಸದೇ ರದ್ದುಪಡಿಸಲು ಆಗ್ರಹ

ಎಬಿವಿಪಿ ನೇತೃತ್ವದಲ್ಲಿ ವಿದ್ಯಾರ್ಥಿಗಳ ರ್‍ಯಾಲಿ

ದಾವಣಗೆರೆ, ಜ.17- ನರ್ಸಿಂಗ್‌ಗೆ ಮರು ಪರೀಕ್ಷೆ ನಡೆಸುವುದನ್ನು ರದ್ದುಪಡಿಸುವಂತೆ ಒತ್ತಾಯಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನೇತೃತ್ವದಲ್ಲಿ ನರ್ಸಿಂಗ್ ವಿದ್ಯಾರ್ಥಿಗಳು ನಗರದಲ್ಲಿ ಇಂದು ಪ್ರತಿಭಟನೆ ನಡೆಸಿದರು. ಜಯದೇವ ವೃತ್ತದಲ್ಲಿ ಜಮಾಯಿಸಿದ್ದ ಪ್ರತಿಭಟನಾ ನಿರತ ವಿದ್ಯಾರ್ಥಿಗಳು, ನರ್ಸಿಂಗ್‌ಗೆ ಮರು ಪರೀಕ್ಷೆ ನಡೆಸುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. ನಂತರ ಪ್ರತಿಭಟನಾ ಮೆರವಣಿಗೆ ಮೂಲಕ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

ಡಿ.22 ರಂದು ನರ್ಸಿಂಗ್ ಪರೀಕ್ಷೆಗಳು ಪ್ರಾರಂಭವಾಗಿ ಡಿ. 25ರವರೆಗೆ ಮುಕ್ತಾಯವಾಗಿವೆ. 88 ಸಾವಿರ ವಿದ್ಯಾರ್ಥಿಗಳು ಶ್ರಮಪಟ್ಟು ಓದಿ ಪರೀಕ್ಷೆಗಳನ್ನು ಬರೆದಿದ್ದಾರೆ. ಆದರೆ ಬೆಂಗಳೂರಿನ ಬಾಣಸವಾಡಿಯಲ್ಲಿರುವ ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ನಕಲು ನಡೆದಿದೆ ಎಂದು ಇಡೀ ರಾಜ್ಯಾದ್ಯಂತ ಮರು ಪರೀಕ್ಷೆ ನಡೆಸಲಾಗುತ್ತಿದೆ. ಈಗಾಗಲೇ ವಿದ್ಯಾರ್ಥಿಗಳು ತುಂಬಾ ಶ್ರಮಪಟ್ಟು, ನಿದ್ದೆಗೆಟ್ಟು ಪರೀಕ್ಷೆಗಳನ್ನು ಬರೆದಿದ್ದಾರೆ. ಏಕಾಏಕಿ ಮರುಪರೀಕ್ಷೆ ಮಾಡುವುದರಿಂದ ಇಂಥ ವಿದ್ಯಾರ್ಥಿಗಳಿಗೆ ಕಷ್ಟವಾಗುತ್ತದೆ ಎಂದು ಪ್ರತಿಭಟನಾ ನಿರತ ವಿದ್ಯಾರ್ಥಿಗಳು ಅಳಲಿಟ್ಟರು.

ಜನವರಿ 21 ಕ್ಕೆ ಮರು ಪರೀಕ್ಷೆಗೆ ದಿನಾಂಕ ನಿಗದಿಪಡಿಸಲಾಗಿದೆ. ಕೋರ್ಟ್ ಕೂಡ ಇದಕ್ಕೆ ಸಮ್ಮತಿ ಕೊಟ್ಟಿಲ್ಲ. ಮಕ್ಕಳ ಆಸಕ್ತಿ ಮೇರೆಗೆ ಮರು ಪರೀಕ್ಷೆ ನಡೆಸುವಂತೆ ಆದೇಶ ನೀಡಿದೆ. ಈ ವೇಳೆ ಬೋರ್ಡ್‌ನವರು ವಿದ್ಯಾರ್ಥಿಗಳಿಗೆ ಯಾವುದೇ ಮಾಹಿತಿ ನೀಡದೇ, ಸಲಹೆ ಪಡೆಯದೇ ಏಕಾಏಕಿ ಕೆಎಸ್‌ಡಿಎನ್ ಬೋರ್ಡಿನವರು ಈ ರೀತಿ ದಿಢೀರನೇ ದಿನಾಂಕ ಗೊತ್ತು ಮಾಡಿ ಮರುಪರೀಕ್ಷೆ ನಡೆಸಲು ಮುಂದಾಗಿದ್ದು, ಇದರಿಂದಾಗಿ ವಿದ್ಯಾರ್ಥಿಗಳು ಮಾನಸಿಕವಾಗಿ ಕುಗ್ಗಿಹೋಗಿದ್ದಾರೆ ಎಂದು ಆಕ್ಷೇಪಿಸಿದರು.

ಪ್ರಾಮಾಣಿಕವಾಗಿ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಅನ್ಯಾಯ ಆಗುತ್ತಿದೆ. ಕಾರಣ ಮರುಪರೀಕ್ಷೆ ಬೇಡ. ಯಾವ ಪರೀಕ್ಷಾ ಕೇಂದ್ರದಲ್ಲಿ ನಕಲು ನಡೆದಿದೆಯೋ ಆ ಪರೀಕ್ಷಾ ಕೇಂದ್ರಗಳ ವಿದ್ಯಾರ್ಥಿಗಳಿಗೆ ಮಾತ್ರ ಮರುಪರೀಕ್ಷೆ ನಡೆಸಲಿ ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಮಂಜುನಾಥ ಕೊಳ್ಳೇರ, ವರುಣ್, ಶಶಾಂಕ್, ಶಿವಕುಮಾರ್, ರಘು, ಸಿದ್ದೇಶ್, ಅನುಷಾ ಸೇರಿದಂತೆ, ಇತರರು ಭಾಗವಹಿಸಿದ್ದರು.

ಬಿಐಇಟಿಯಲ್ಲಿ ಬಿಟ್ಸ್ ಎನ್ ಬೈಟ್ಸ್ ಸ್ಪರ್ಧೆ

ದಾವಣಗೆರೆ, ಜ. 17- ನಗರದ ಬಾಪೂಜಿ ಇಂಜಿನಿಯರಿಂಗ್ ಕಾಲೇಜಿನ ಮಾಹಿತಿ ತಂತ್ರಜ್ಞಾನ ವತಿಯಿಂದ ಕಂಪ್ಯೂಟರ್ ತಂತ್ರಜ್ಞಾನದಲ್ಲಿ ಕೋಡಿಂಗ್ ಮಾಡುವ ಬಿಟ್ಸ್ ಎನ್ ಬೈಟ್ಸ್ ಸ್ಪರ್ಧೆ ಏರ್ಪಡಿಸಲಾಗಿತ್ತು.

ಕಾಲೇಜಿನ ಹಳೆ ವಿದ್ಯಾರ್ಥಿ, ಸಾಫ್ಟ್‌ವೇರ್ ಇಂಜಿನಿಯರ್ ಹಾಗೂ ಕೆನಡಾ ದೇಶವನ್ನು ಪ್ರತಿನಿಧಿಸುತ್ತಿರುವ ಕ್ರಿಕೆಟರ್ ಶ್ರೇಯಸ್ ವಾಸುದೇವರೆಡ್ಡಿ ಮೊಪ್ಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಅವರು ಕಂಪ್ಯೂಟರ್ ಪ್ರೋಗ್ರಾಮಿಂಗ್‌ನ ವಿವಿಧ ಭಾಷೆಗಳ ಉದ್ದೇಶ ಮತ್ತು ಪರಿಣಾಮಗಳ ಬಗ್ಗೆ ಮಾತನಾಡಿದರು.

ಸ್ಪರ್ಧೆಯಲ್ಲಿ ಯು.ಬಿ.ಡಿ.ಟಿ, ಜಿ.ಎಂ.ಐ.ಟಿ, ಜೈನ್ ಮತ್ತು ವಿವಿಧ ಕಾಲೇಜುಗಳಿಂದ 205 ಟೀಮ್‌ಗಳು ಭಾಗವಹಿಸಿದ್ದವು, ಪ್ರಥಮ ಬಹುಮಾನವನ್ನು ಯು.ಬಿ.ಡಿ.ಟಿ ಕಾಲೇಜಿನ ಸಂಕೇತ್‌ಕುಮಾರ್, ಎಂ. ಶಾರದ ಪಡೆದುಕೊಂಡರೆ ಎರಡನೇ ಬಹುಮಾನವನ್ನು ಬಿ.ಐ.ಇ.ಟಿ.ಯ ತರುಣ, ಸೈಯದ್ ಮಾಥೇನ್ ಸಾಬ್ ಪಡೆದುಕೊಂಡರು.

ಮಾಹಿತಿ ತಂತ್ರಜ್ಞಾನದ ಮುಖ್ಯಸ್ಥರಾದ ಡಾ|| ಪೂರ್ಣಿಮಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲ ಡಾ|| ಹೆಚ್.ಬಿ. ಅರವಿಂದ್, ಡಾ|| ವಿನುತ ಕಾರ್ಯಕ್ರಮದ ಸಂಯೋಜಕರಾದ ಭುವನೇಶ್ವರಿ, ಡಾ|| ವರ್ಷಾ, ಡಾ|| ಶ್ರೀನಿವಾಸ್ ಮತ್ತು ವಿನಯ್ ಎಂ.ಟಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಬಾಕಿ ಇರುವ ಪಿಂಚಣಿ ಪರಿಷ್ಕರಿಸಲು ಆಗ್ರಹ

ದಾವಣಗೆರೆ, ಜ.17- ಬಾಕಿ ಇರುವ ಪಿಂಚಣಿ ಪರಿಷ್ಕರಣೆಯನ್ನು ತ್ವರಿತವಾಗಿ ಕೈಗೊಳ್ಳುವಂತೆ ಒತ್ತಾಯಿಸಿ, ಅಖಿಲ ಭಾರತ ಬಿ.ಎಸ್.ಎನ್.ಎಲ್ ಪಿಂಚಣಿದಾರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕದ ನೇತೃತ್ವದಲ್ಲಿ ನಗರದ ಪಿ.ಬಿ. ರಸ್ತೆಯಲ್ಲಿನ ಬಿ.ಎಸ್.ಎನ್.ಎಲ್ ಕಚೇರಿ ಆವರಣದಲ್ಲಿ ಇಂದಿನಿಂದ ಎರಡು ದಿನಗಳ ಧರಣಿ ಮುಷ್ಕರವನ್ನು ಬಿ.ಎಸ್.ಎನ್.ಎಲ್ ಪಿಂಚಣಿದಾರರು ಆರಂಭಿಸಿದ್ದಾರೆ.

ಕೇಂದ್ರ ಸರ್ಕಾರವೇ ನಡೆಸುತ್ತಿದ್ದ ಟೆಲಿಫೋನ್ ಇಲಾಖೆ ಡಿಒಟಿ 1-10-2000 ರಿಂದ ಕೇಂದ್ರ ಸರ್ಕಾರದ ಅಧೀನಕ್ಕೊಳಪಟ್ಟ ಸಾರ್ವಜನಿಕ ಸ್ವಾಮ್ಯದ ಉದ್ಯಮವಾಗಿ ಪರಿವರ್ತನೆಯಾಗಿದೆ.

ಪರಿವರ್ತನೆಯ ಸಮಯದಲ್ಲಾದ ಕಾನೂನಿನ ಪ್ರಕಾರ ದೂರ ಸಂಪರ್ಕ ಇಲಾಖೆಯಿಂದ ಕೇಂದ್ರ ಸರ್ಕಾರವೇ ಬಿ.ಎಸ್.ಎನ್.ಎಲ್ ನಿವೃತ್ತದಾರರಿಗೆ ಪಿಂಚಣಿ ಕೊಡಮಾಡುವ ವ್ಯವಸ್ಥೆ ಜಾರಿಯಲ್ಲಿದೆ. ಬಿ.ಎಸ್.ಎನ್.ಎಲ್ ನಿವೃತ್ತಿದಾರರ ಪಿಂಚಣಿ ವಿತರಣೆ ಮತ್ತು ಪರಿಷ್ಕರಣೆ ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಪ್ರತಿಭಟನಾಕಾರರು ಹೇಳಿದ್ದಾರೆ.

ಈಗಲಾದರು ಬಿ.ಎಸ್.ಎನ್.ಎಲ್ ನಿವೃತ್ತದಾರರ ಪಿಂಚಣಿ ಪರಿಷ್ಕರಣೆಯನ್ನು ಮಾಡಬೇಕಾಗಿ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಆರ್. ಆನಂದ, ಪಿಂಚಣಿದಾರರಾದ ಸಿ. ಬೋರಯ್ಯ, ಎಂ.ಕೆ. ಕಲ್ಲೂರ್, ಎಂ.ವಿ. ಸ್ವಾಮಿ, ಡಿ. ರೇವಣಪ್ಪ, ಬಿ. ಶಿವಲಿಂಗಪ್ಪ, ಕೆ. ನಂದ ಗೋಪಾಲ್, ಟಿ. ಷಣ್ಮುಖ, ಎಸ್.ಟಿ. ಕುಲಕರ್ಣಿ, ಜಯಪ್ಪ ನಾಯ್ಕ್, ಎಸ್.ಬಿ. ಬಡಿಗೇರ್, ಕೆ.ಬಿ. ತಿಪ್ಪೇಸ್ವಾಮಿ ಸೇರಿದಂತೆ ಇತರರು ಭಾಗವಹಿಸಿದ್ದರು.

ಜಗಳೂರು : ರೋಟರಿ ಕ್ಲಬ್‌ನಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ

ಜಗಳೂರು, ಜ.17- ರೋಟರಿ ಕ್ಲಬ್ ದಾವಣಗೆರೆ ಮತ್ತು ಜಗಳೂರು ತಾಲ್ಲೂಕು ಅರೋಗ್ಯ ಇಲಾಖೆ ಸಹಯೋಗದಲ್ಲಿ ಜಗಳೂರು ತಾಲ್ಲೂಕಿನ ಮಹಿಳೆಯರಿಗಾಗಿ 'ಉಚಿತ ಆರೋಗ್ಯ' ತಪಾಸಣಾ ಶಿಬಿರಗಳನ್ನು ಎಲ್ಲಾ ಹೋಬಳಿ ಕೇಂದ್ರಗಳಲ್ಲಿ ಏರ್ಪಡಿಸಲು ಉದ್ದೇಶಿಸಲಾಗಿದ್ದು, ಆಶಾ ಕಾರ್ಯಕರ್ತರಿಗೆ ಶಿಬಿರಗಳ ಬಗ್ಗೆ ಪರಿಚಯ ಮತ್ತು ಮಾಹಿತಿ ನೀಡುವ ಕಾರ್ಯಕ್ರಮವನ್ನು ಕೆ.ಎಂ. ವಿಶ್ವನಾಥ್ ಅವರ ಪ್ರಥಮ ಪುಣ್ಯ ಸ್ಮರಣೆಯ ದಿನವಾದ ಗೌರವಿ ಆರ್ಕೆಡ್ ನ ನೀಲ್ ಕಲಾ ಫಂಕ್ಷನ್ ಹಾಲ್‌ನಲ್ಲಿ ಇಂದು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ನಾಗರಾಜ್ ಮತ್ತು ಫಿಜಿಷಿಯನ್ ಡಾ. ಶಂಕರಪ್ಪ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಡಾ. ಜಯಸಿಂಹ ಮತ್ತು ಡಾ. ಸುನಿಲ್ ಬ್ಯಾಡಿಗಿ ಅವರು ಶಿಬಿರಗಳ ಬಗ್ಗೆ ಮಾಹಿತಿ ನೀಡಿದರು. ರೋಟರಿ ಕ್ಲಬ್ ದಾವಣಗೆರೆಯ ನಯನ್ ಪಾಟೀಲ್, ಪ್ರಕಾಶ್, ಬಸವರಾಜ್, ರೋಷನ್, ರಂಗಪ್ಪ, ಡಾ.ಹಾಲಸ್ವಾಮಿ ಕಂಬಾಳಿಮಠ್, ಉಪಸ್ಥಿತರಿದ್ದರು.

ಆರೋಗ್ಯಕರ ಸಮಾಜ ನಿರ್ಮಾಣ ಎಲ್ಲರ ಕರ್ತವ್ಯ

ಶಿಕ್ಷಣದಲ್ಲಿ ಮಾದಕ ವಸ್ತುಗಳ ದುಷ್ಪರಿಣಾಮ, ಅವುಗಳನ್ನು ತಡೆಗಟ್ಟುವ ಕುರಿತು ಅರಿವು ಮೂಡಿಸಿದಲ್ಲಿ ಭವಿಷ್ಯದಲ್ಲಿ ಉಂಟಾಗುವ ಹಾನಿಯನ್ನು ತಡೆಗಟ್ಟಬಹುದು. ಸಂಘ-ಸಂಸ್ಥೆಗಳು, ಸರ್ಕಾರಿ ಇಲಾಖೆಗಳು ಮಾದಕ ವಸ್ತುಗಳನ್ನು ತಡೆಗಟ್ಟುವಲ್ಲಿ ಹೆಚ್ಚಿನ ಪಾತ್ರ ವಹಿಸಬೇಕು.

- ಎಲ್.ಹೆಚ್. ಅರುಣ್‌ಕುಮಾರ್, ಹಿರಿಯ ನ್ಯಾಯವಾದಿ

ದಾವಣಗೆರೆ, ಜ.17- ಜನಸಾಮಾನ್ಯರಲ್ಲಿ ಅದರಲ್ಲೂ ಯುವಕರಲ್ಲಿ ಮಾದಕ ವಸ್ತುಗಳ ಸೇವನೆ ದುಷ್ಪರಿಣಾಮಗಳ ಬಗ್ಗೆ ತಿಳುವಳಿಕೆ ನೀಡಿ, ಮಾದಕ, ವ್ಯಸನ ರಹಿತ, ನಶಾ ಮುಕ್ತ, ಆರೋಗ್ಯಕರ ಸಮಾಜವನ್ನು ನಿರ್ಮಾಣ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹಿರಿಯ ನ್ಯಾಯವಾದಿ ಎಲ್. ಹೆಚ್. ಅರುಣ್‌ಕುಮಾರ್ ಅಭಿಪ್ರಾಯಪಟ್ಟರು.

ನಗರದ ಅಖ್ತರ್ ರಜಾ ವೃತ್ತದಲ್ಲಿ ಸಂಜರ್ ವೆಲ್‌ಫೇರ್ ಅಸೋಸಿಯೇಷನ್ ವತಿಯಿಂದ ಹಮ್ಮಿಕೊಂಡಿದ್ದ ನಶಾ ಮುಕ್ತ ದಾವಣಗೆರೆ ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಲವಾರು ದೇಶಗಳು ಮಾದಕ ವಸ್ತುಗಳ ಉತ್ಪಾದನೆ, ಶೇಖರಣೆಯನ್ನು ಶಿಕ್ಷಾರ್ಹ ಅಪರಾಧವೆಂದು ಕಾನೂನು ಜಾರಿಗೆ ತಂದಿದ್ದರೂ ಸಹ, ಮಾದಕ ವಸ್ತುಗಳ ಉಪಯೋಗ ಪೆಡಂಭೂತವಾಗಿ ಬೆಳೆದು ಸಮಾಜವನ್ನು ಕಾಡುತ್ತಿದೆ. ಸಂಜರ್ ವೆಲ್‌ಫೇರ್ ಅಸೋಸಿಯೇಷನ್ ಸಮಾಜದಲ್ಲಿ ಉತ್ತಮ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದು, ಅನಾಥ ಆಶ್ರಮ ಮತ್ತು ಬಡವರಿಗೆ ಸಹಾಯ ಮಾಡುವುದು. ಸಮಾಜ ಸೇವಕರನ್ನು ಗುರುತಿಸಿ ಸನ್ಮಾನ ಮಾಡುವುದು, ಬಡ ಕುಟುಂಬದ ಮಕ್ಕಳಿಗೆ ಶಾಲಾ ಬ್ಯಾಗ್, ಪುಸ್ತಕ ವಿತರಣೆ ಮಾಡುವುದು, ಕ್ರೀಡಾ ಪಟುಗಳನ್ನು ಗುರುತಿಸಿ, ಪ್ರೋತ್ಸಾಹಿಸಲು ಹಲವಾರು ಕಾರ್ಯಕ್ರಮ ಮಾಡುವ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಶ್ಲಾಘನೀಯ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಂಜರ್ ವೆಲ್‌ಫೇರ್ ಅಸೋಸಿಯೇಷನ್ ಗೌರವ ಅಧ್ಯಕ್ಷ, ನ್ಯಾಯವಾದಿ ರಜ್ವಿ ಖಾನ್ ಮಾತನಾಡಿ, ದೇಶದಲ್ಲಿ ಶೇ. 50ರಷ್ಟು ಯುವಕರಿದ್ದು, ಉತ್ತಮ ಶಿಕ್ಷಣ ಮತ್ತು ಸಂಸ್ಕಾರ ನೀಡುವ ಮೂಲಕ ಯುವಕರನ್ನು ಸತ್ಪ್ರಜೆಗಳನ್ನಾಗಿ ಮಾಡುವ ಹೊಣೆಗಾರಿಕೆ ಪೋಷಕರ ಮೇಲಿದೆ. ಎಲ್ಲಾ ಮಕ್ಕಳಲ್ಲಿ ಕೌಶಲ್ಯ ಇದ್ದು, ಪ್ರತಿಭೆಗಳಿಗೆ ಅವಕಾಶ ದೊರೆತಲ್ಲಿ ಅವರು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ವಕ್ಫ್ ಬೋರ್ಡ್ ಚೇರ್ಮನ್ ಶಾಫಿ ಸಹದಿ, ಮೌಲಾನ ಹನೀಫ್ ರಜಾ, ಸಾಧಿಕ್ ಪೈಲ್ವಾನ್, ಸೈಯದ್ ಸೈಫುಲ್ಲಾ, ಯಾಸೀನ್ ಪೀರ್, ಜೆ.ಅಮಾನುಲ್ಲಾ ಖಾನ್ ಮಾತನಾಡಿದರು.

ವೇದಿಕೆಯಲ್ಲಿ ಹೆಚ್.ಜೆ.ಮೈನುದ್ದಿನ್, ನಿಖಿಲ್ ಕೊಂಡಜ್ಜಿ, ಎಲ್.ಹೆಚ್.ಸಾಗರ್, ಸಂಜರ್ ವೆಲ್‌ಫೇರ್ ಅಸೋಸಿಯೇಷನ್‌ನ ಪದಾಧಿಕಾರಿಗಳು ಸೇರಿದಂತೆ, ಇತರರು ಉಪಸ್ಥಿತರಿದ್ದರು.

ಸಕ್ಕರೆ ಕಾರ್ಖಾನೆಯಿಂದ ಹಾನಿ: ಕುಕ್ಕುವಾಡದಲ್ಲಿ ನಾಳೆ ಪ್ರತಿಭಟನೆ

ದಾವಣಗೆರೆ, ಜ.17- ಕುಕ್ಕುವಾಡದ ಸಕ್ಕರೆ ಕಾರ್ಖಾನೆ ಚಿಮಣಿಯಿಂದ ಹೊರ ಬರುವ ಬೂದಿ ಹಾಗೂ ತ್ಯಾಜ್ಯ ನೀರಿನಿಂದ ಸುತ್ತ ಮುತ್ತಲಿನ ಹಳ್ಳಿಗಳ ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದ್ದು, ಬೆಳೆಗಳೂ ಹಾಳಾಗುತ್ತಿವೆ. ಈ ಹಿನ್ನೆಲೆಯಲ್ಲಿ ಕಾರ್ಖಾನೆ ಮಾಲೀಕರ ನಿರ್ಲಕ್ಷ್ಯ ಖಂಡಿಸಿ ನಾಡಿದ್ದು ದಿನಾಂಕ 19ರಂದು ಬೆಳಿಗ್ಗೆ 11 ಗಂಟೆಗೆ ದಾವಣಗೆರೆ-ಚನ್ನಗಿರಿ ರಸ್ತೆ ಬಂದ್ ಮಾಡಿ ಕುಕ್ಕುವಾಡದಲ್ಲಿ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗಿದೆ.

ಕೊಳೇನಹಳ್ಳಿ, ಕನಗೊಂಡನಹಳ್ಳಿ, ಬಲ್ಲೂರು, ಶಿರಗಾನಹಳ್ಳಿ, ಜಡಗನಹಳ್ಳಿ, ನಾಗರಸನಹಳ್ಳಿ, ಕುಕ್ಕುವಾಡ, ವಡೇರಹಳ್ಳಿ, ಮುದಹದಡಿ, ಬಟ್ಲಕಟ್ಟೆ, ಹದಡಿ ಗ್ರಾಮಗಳ ಗ್ರಾಮಸ್ಥರ ಒಕ್ಕೂಟದಿಂದ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಎಸ್. ಸತೀಶ್ ಈ ವಿಷಯ ತಿಳಿಸಿದರು.

ಈ ಕಾರ್ಖಾನೆಯಿಂದ ನಿತ್ಯ ಹೊರ ಬರುವ ಬೂದಿ, ಗಾಳಿ ಮೂಲಕ ಹರಡಿ ಊಟದ ತಟ್ಟೆಯಲ್ಲೂ ಬೀಳುತ್ತಿದೆ. ಇದರಿಂದ ಜನರು ರೋಗ ರುಜಿನಗಳಿಂದ ಬಳಲುತ್ತಿದ್ದಾರೆ. ಹುಲ್ಲು, ಗಿಡ-ಗಂಟಿಗಳ ಮೇಲೆ ಬೂದಿ ಬಿದ್ದು, ಈ ಹುಲ್ಲನ್ನು ತಿನ್ನುವ ದನ-ಕರುಗಳು, ಕುರಿ-ಮೇಕೆಗಳು ರೋಗಗ್ರಸ್ಥವಾಗಿವೆ. ಹೈನುಗಾರಿಕೆ ಮಾಡುವ ರೈತರು ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಭತ್ತದ ಬೆಳೆ ಮೇಲೂ ಬೀಳುವ ಬೂದಿಯಿಂದ ಭತ್ತ ಕಪ್ಪಾಗಿ ಮಾರುಕಟ್ಟೆಯಲ್ಲಿ ಕಡಿಮೆ ದರಕ್ಕೆ ಮಾರಾಟವಾಗುತ್ತಿದೆ ಎಂದು ಅವರು ಆರೋಪಿಸಿದರು.

ಕಾರ್ಖಾನೆಯಿಂದ ಹೊರ ಬರುವ ರಾಸಾಯನಿಕ ಯುಕ್ತ ತ್ಯಾಜ್ಯ ನೀರನ್ನು ಹಳ್ಳಕ್ಕೆ ಬಿಡಲಾಗುತ್ತಿದ್ದು, ಅಪಾಯಕಾರಿ ಆಸಿಡ್ ಇರುವ ಈ ನೀರಿನಿಂದ ಮೀನುಗಳು ಸಾಯುತ್ತಿವೆ. ಅಲ್ಲದೇ ಇದೇ ನೀರನ್ನು ರೈತರು ಜಮೀನುಗಳಿಗೆ ಪೂರೈಕೆ ಮಾಡುತ್ತಿರುವುದರಿಂದ ಬೆಳೆಗಳು ವಿಷಯುಕ್ತವಾಗುತ್ತಿವೆ ಎಂದರು.

ಈ ಕುರಿತು ಶಾಮನೂರು ಶಿವಶಂಕರಪ್ಪ ಹಾಗೂ ಅವರ ಪುತ್ರ ಎಸ್.ಎಸ್. ಗಣೇಶ್ ಅವರ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕನಗೊಂಡನಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಗಂಗಮ್ಮ ರಾಜಪ್ಪ, ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಹದಡಿ ಎಂ.ಬಿ. ಹಾಲಪ್ಪ, ಬಲ್ಲೂರು ಬಸವರಾಜಪ್ಪ, ಗ್ರಾ.ಪಂ. ಸದಸ್ಯರಾದ ನಾಗರಾಜ್ ಅಮಟಿ, ವೈ.ಎನ್. ತಿಪ್ಪೇಸ್ವಾಮಿ, ಬಲ್ಲೂರು ಬಕ್ಕೇಶಯ್ಯ ಸೇರಿದಂತೆ ಜಡಗನಹಳ್ಳಿ ಎಂ.ಬಿ. ಮುತ್ತಪ್ಪ, ಕನಗೊಂಡನಹಳ್ಳಿ ಚನ್ನಪ್ಪ, ಬಸವರಾಜಪ್ಪ, ಜ್ಯೋತಿಕಾರ ಅಂಜಿನಪ್ಪ, ಬಸವರಾಜಪ್ಪ ಉಪಸ್ಥಿತರಿದ್ದರು.

ತಂದೆ ಸಾಲಕ್ಕೆ ಚೆಕ್ ನೀಡಿದರೆ ಮಗ ಹೊಣೆ : ಹೈಕೋರ್ಟ್

ಬೆಂಗಳೂರು, ಜ. 17 – ತಂದೆಯ ಸಾಲವನ್ನು ತೀರಿಸುವುದಾಗಿ ಮಗ ಚೆಕ್ ನೀಡಿದ್ದರೆ, ಆ ಚೆಕ್‌ಗೆ ಹಣ ಪಾವತಿಸುವ ಹೊಣೆಗಾರಿಕೆ ಮಗನಿಗೆ ಇರುತ್ತದೆ ಎಂದು ಕರ್ನಾಟಕ ಹೈಕೋರ್ಟ್ ತಿಳಿಸಿದೆ.

ದಾವಣಗೆರೆಯ ಪ್ರಸಾದ್ ರಾಯ್ಕರ್ ಎಂಬುವವರು ದಾಖಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ. ನಟರಾಜನ್ ಅವರು, ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ ಕಾಯ್ದೆಯ ಅನ್ವಯ ಚೆಕ್ ನೀಡಿದಾಗ ಹೊಣೆಗಾರಿಕೆ ಇರುತ್ತದೆ ಎಂದಿದ್ದಾರೆ.

ಬಿ.ಟಿ. ದಿನೇಶ್ ಅವರ ತಂದೆ ಭರಮಪ್ಪ ಅವರು ಮಾರ್ಚ್ 7, 2003ರಲ್ಲಿ ರಾಯ್ಕರ್ ಅವರಿಂದ 2.6 ಲಕ್ಷ ರೂ.ಗಳ ಸಾಲ ಪಡೆದಿದ್ದರು. ಇದಕ್ಕಾಗಿ ಶೇ.2ರ ಬಡ್ಡಿ ಪಾವತಿಸುವುದಾಗಿ ಪ್ರಾಮಿಸರಿ ನೋಟ್‌ನಲ್ಲಿ ಬರೆದು ಕೊಟ್ಟಿದ್ದರು.

ಭರಮಪ್ಪ ನಿಧನರಾದ ನಂತರ ಮಗ ಜೂನ್ 10, 2005ರಲ್ಲಿ 10 ಸಾವಿರ ರೂ.ಗಳನ್ನು ಪಾವತಿಸಿದ್ದರು. ಬಡ್ಡಿ ಸೇರಿ ಉಳಿದ 4.5 ಲಕ್ಷ ರೂ.ಗಳನ್ನು ಪಾವತಿಸಬೇಕಿತ್ತು. ಇದಕ್ಕಾಗಿ ಅವರು 2.25 ಲಕ್ಷ ರೂ.ಗಳ ಎರಡು ಚೆಕ್ ನೀಡಿದ್ದರು. ಆದರೆ, ಈ ಚೆಕ್‌ಗಳು ಅಮಾನ್ಯವಾಗಿದ್ದವು. ಈ ಪ್ರಕರಣ ನಂತರದಲ್ಲಿ ಹೈಕೋರ್ಟ್ ಮೆಟ್ಟಿಲೇರಿತ್ತು.

ನಗರಕ್ಕೆ ಇಂದು ಭಾವಕವಿ ಲಕ್ಷ್ಮಣರಾವ್

ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಆವರಣದಲ್ಲಿ ವಾರ್ಷಿಕೋತ್ಸವದ ವಿವಿಧ ಕಾರ್ಯಕ್ರಮಗಳು ನಡೆಯುತ್ತಿದ್ದು, ಇಂದು ಸಂಜೆ 5.30 ಕ್ಕೆ ನಡೆಯುವ ಸಿದ್ಧಗಂಗಾ ಪ್ರಶಸ್ತಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ನಾಡಿನ ಹೆಸರಾಂತ ಭಾವಕವಿ ಬಿ.ಆರ್. ಲಕ್ಷ್ಮಣರಾವ್ ಆಗಮಿಸಲಿದ್ದಾರೆ.

ಭಾವನಾತ್ಮಕ ಸಂಬಂಧಗಳು ಗಟ್ಟಿಯಾದಾಗ ಮಾತ್ರ ನೆಮ್ಮದಿ ಜೀವನ

ದಿ. ಎಸ್.ಎಂ. ರಾಜಶೇಖರಪ್ಪ ಅವರ ಕೈಲಾಸ ಶಿವಗಣಾರಾಧನೆ ಕಾರ್ಯಕ್ರಮದಲ್ಲಿ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹಿತನುಡಿ

ದಾವಣಗೆರೆ, ಜ. 17 - ಭಾವನಾತ್ಮಕ ಸಂಬಂಧಗಳು ಗಟ್ಟಿಯಾದಾಗ ಮಾತ್ರ ನೆಮ್ಮದಿ, ಸಾರ್ಥಕ ಜೀವನ ಸಾಧ್ಯವಾಗುತ್ತದೆ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ನುಡಿದರು.

ನಗರದ ಶಾಮನೂರು ಪಾರ್ವತಮ್ಮ ಶಿವಶಂಕರಪ್ಪ ಕಲ್ಯಾಣ ಮಂಟಪದ ಆವರಣದಲ್ಲಿರುವ ತರಳಬಾಳು ಸಭಾಭವನದಲ್ಲಿ ಇಂದು ಹಮ್ಮಿಕೊಂಡಿದ್ದ ನೀರಾವರಿ ಇಲಾಖೆಯ ನಿವೃತ್ತ ಡೆಪ್ಯೂಟಿ ಸೆಕ್ರೆಟರಿ ದಿ. ಎಸ್.ಎಂ. ರಾಜಶೇಖರಪ್ಪ ಅವರ ಕೈಲಾಸ ಶಿವಗಣಾರಾಧನೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸಂಪತ್ತಿಗಿಂತ ಭಾವನಾತ್ಮಕ ಜೀವನ ಮುಖ್ಯ. ಭಾವನಾತ್ಮಕ ಸಂಬಂಧಗಳು ಗಟ್ಟಿಗೊಂಡರೆ, ಎಷ್ಟೇ ಆರ್ಥಿಕವಾಗಿ ದುರ್ಬಲವಾಗಿದ್ದರೂ ಸಹ ನೆಮ್ಮದಿ, ಸಂತೋಷದಿಂದ ಬಾಳಲು ಸಾಧ್ಯವಾಗುತ್ತದೆ ಎಂದರು.

ನಮ್ಮ ಪೂರ್ವಾಶ್ರಮದಲ್ಲಿ ರಾಜಶೇಖರಪ್ಪ ಅವರ ಕುಟುಂಬದವರ ಜೊತೆಗೆ ತುಂಬಾ ಒಡನಾಟವಿತ್ತು. ರಾಜಣ್ಣ ಮತ್ತು ನಮ್ಮ ನಡುವೆ ತುಂಬಾ ಆತ್ಮೀಯತೆ ಇತ್ತು. ಅವರ ಅಗಲಿಕೆ ಎಲ್ಲರನ್ನೂ ದುಃಖಿತರನ್ನಾಗಿ ಮಾಡಿದೆ ಎಂದು ಹೇಳಿದರು.

ರಾಜಶೇಖರಪ್ಪ ಲಿಂ. ಜಗದ್ಗುರು ಶಿವಕುಮಾರ ಸ್ವಾಮೀಜಿಯವರ ಆಪ್ತ ಒಡನಾಡಿಯಾಗಿದ್ದು, ತರಳಬಾಳು ವಿದ್ಯಾಸಂಸ್ಥೆಗೆ ಸಲ್ಲಿಸಿದ ಸೇವೆ ಅವಿಸ್ಮರಣೀಯ ಎಂದರು.

ರಾಜಶೇಖರಪ್ಪನವರದು ವಿದ್ಯಾವಂತ ಮತ್ತು ಆದರ್ಶ ಕುಟುಂಬ ಜೀವನ. ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವುದಲ್ಲದೇ ಉನ್ನತ ಹುದ್ದೆಗಳನ್ನು ಕೊಡಿಸಿ, ಸಂಸ್ಕಾರವಂತರನ್ನಾಗಿ ಮಾಡಿದ್ದಾರೆ ಎಂದು ತಿಳಿಸಿದರು.

ರಾಜಶೇಖರಪ್ಪ ಅವರ ಆಪ್ತಮಿತ್ರ ನಿವೃತ್ತ ಪ್ರಾಧ್ಯಾಪಕ ಪ್ರೊ. ಬಿ. ಸಿದ್ಧಲಿಂಗಯ್ಯ ಇವರೀರ್ವರು ಜೊಡೆತ್ತುಗಳಿದ್ದಂತೆ. ಹಿರಿಯ ಶ್ರೀಗಳ ಶಿಕ್ಷಣ ಕ್ರಾಂತಿಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದರು. ಶಿಕ್ಷಣ ಸಂಸ್ಥೆಗಳ ಸ್ಥಾಪನೆಯಲ್ಲಿ ರಾಜಶೇಖರಪ್ಪ ಅವರ ಶ್ರಮ ಅಪಾರ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಶ್ರೀಮತಿ ಮಲ್ಲಮ್ಮ, ರತ್ನಮ್ಮ, ರಾಜು, ಶಶಿರೇಖ ಮತ್ತಿತರರು ರಾಜಶೇಖರಪ್ಪ ಅವರಿಗೆ ನುಡಿ ನಮನ ಸಲ್ಲಿಸಿದರು.

ಶ್ರೀಮತಿ ಸುಶೀಲ ರಾಜಶೇಖರಪ್ಪ ಮತ್ತವರ ಕುಟುಂಬ ವರ್ಗದವರು ಸೇರಿದಂತೆ ರಾಜಶೇಖರಪ್ಪ ಅವರ ಒಡನಾಡಿಗಳು, ಸ್ನೇಹಿತರು, ಹಿತೈಷಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ತರಳಬಾಳು ಹುಣ್ಣಿಮೆ ಮಹೋತ್ಸವದ ಪ್ಲೆಕ್ಸ್ ಹಾಕದಿರಲು ಸೂಚನೆ

ಕೊಟ್ಟೂರು ಪಟ್ಟಣದಲ್ಲಿ ನಡೆಯುವ ತರಳಬಾಳು ಹುಣ್ಣಿಮೆ ಮಹೋತ್ಸವದ ಪ್ರಯುಕ್ತ ಶುಭ ಕೋರಿ ಪ್ಲೆಕ್ಸ್ ಹಾಕದಿರುವಂತೆ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಭಕ್ತರಿಗೆ ಸೂಚನೆ ನೀಡಿದರು.

ವಿನಾಕಾರಣ ದುಂದುವೆಚ್ಚ ಮಾಡಿ ಪ್ಲೆಕ್ಸ್‌ಗಳನ್ನು ಹಾಕಬೇಡಿ. ಕಾರ್ಯಕ್ರಮ ಇರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಅದಕ್ಕಾಗಿ ಹಣ ವ್ಯಯಿಸಿ, ಪ್ಲೆಕ್ಸ್ ಹಾಕುವ ಬದಲು ಆ ಹಣವನ್ನು ಸದ್ವಿನಿಯೋಗ ಮಾಡಿಕೊಳ್ಳುವಂತೆ ಕರೆ ನೀಡಿದರು.

ನಿಷ್ಕ್ರಿಯ ಆಡಳಿತ, ಪರ್ಸೆಂಟೇಜ್ ಭ್ರಷ್ಟಾಚಾರ: ಜೆಡಿಎಸ್‌ಗೆ ಸಹಕಾರಿ

ಪಂಚರತ್ನ ರಥಯಾತ್ರೆಯ ಪೂರ್ವಭಾವಿ ಸಭೆಯಲ್ಲಿ ಹೆಚ್.ಎಸ್. ಶಿವಶಂಕರ್

ಹರಿಹರ, ಜ. 17 - ಶಾಸಕ ಎಸ್. ರಾಮಪ್ಪ ಅವರ ನಿಷ್ಕ್ರಿಯ ಆಡಳಿತ, ಬಿಜೆಪಿ ಸರ್ಕಾರದ 40 ಪರ್ಸೆಂಟ್ ಭ್ರಷ್ಟಾಚಾರದ ದುರಾಡಳಿತ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಜೆಡಿಎಸ್ ಗೆಲುವಿಗೆ ಸಹಕಾರಿಯಾಗಲಿದೆ ಎಂದು ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಹೆಚ್. ಕೆ. ವೀರಪ್ಪ ಸಮುದಾಯ ಭವನದಲ್ಲಿ ಜೆಡಿಎಸ್ ಪಕ್ಷದಿಂದ ಆಯೋಜಿಸಿರುವ ಜ.22ರ ಅಲ್ಪಸಂಖ್ಯಾತರ ಸಮಾವೇಶ ಹಾಗೂ ಫೆ.2ರ ಪಂಚರತ್ನ ರಥಯಾತ್ರೆಯ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಾನು ತಿನ್ನುವುದಿಲ್ಲ, ತಿನ್ನುವವರನ್ನು ಬಿಡುವುದಿಲ್ಲ ಎನ್ನುತ್ತಾರೆ. ಆದರೆ, ಬಿಜೆಪಿ ಸರ್ಕಾರ 40 ಪರ್ಸೆಂಟ್ ಕಮೀಷನ್ ಭ್ರಷ್ಟ ಆಡಳಿತ ನಡೆಸುತ್ತಿದೆ ಎಂದು ಗುತ್ತಿಗೆದಾರರೇ ಆರೋಪಿಸುತ್ತಿದ್ದಾರೆ ಎಂದರು. ಕಾಂಗ್ರೆಸ್ ಪಕ್ಷದ ಭಾರತ್ ಜೋಡೋ ಯಾತ್ರೆಗೆ ಜನ ಬೆಂಬಲವಿಲ್ಲ. ಬಿಜೆಪಿ ಪಕ್ಷದ ಜನ ಸಂಕಲ್ಪ ಯಾತ್ರೆಗೆ ಹಣ ಕೊಟ್ಟು ಜನರನ್ನು ಕರೆ ತರುವ ಪರಿಸ್ಥಿತಿ ನಿರ್ಮಾಣವಾಗಿದೆ. ಅದೇ ಜೆಡಿಎಸ್ ಪಕ್ಷದ ಜನತಾ ಜಲಧಾರೆ ಸಮಾವೇಶಕ್ಕೆ 25,000ಕ್ಕೂ ಹೆಚ್ಚು ಜನರು ಸೇರಿ ಸ್ವಾಗತ ಮಾಡಿದ್ದರು ಎಂದವರು ಹೇಳಿದರು.

ಜಿಲ್ಲಾ ಜೆಡಿಎಸ್ ಪಕ್ಷದ ಅಧ್ಯಕ್ಷ ಮಲೇಬೆನ್ನೂರು ಚಿದಾನಂದಪ್ಪ ಮಾತನಾಡಿ, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಕೊಟ್ಟಂತಹ ಕೊಡುಗೆಗಳನ್ನು ಜನರು ಇಂದಿಗೂ ಸ್ಮರಿಸುತ್ತಾರೆ ಎಂದರು.

ನಗರಸಭೆ ಸದಸ್ಯ ಆರ್.ಸಿ. ಜಾವೇದ್ ಮಾತನಾಡಿ, ತಾಲ್ಲೂಕಿನಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ತಮ್ಮ ಐದು ವರ್ಷಗಳ ಅವಧಿಯಲ್ಲಿ ಒಂದು ರಸ್ತೆಯನ್ನು ದುರಸ್ತಿ ಪಡಿಸಲು ಆಗಲಿಲ್ಲ. ತಮ್ಮದೇ ಜಾತಿಯವರನ್ನು ಮಾತ್ರ ಬೆಳೆಸುವುದಕ್ಕೆ ಮುಂದಾದರು ಎಂದು ಆರೋಪಿಸಿದರು.

ಈ ವೇಳೆ ಪಕ್ಷದ ಮಿಟ್ಲಕಟ್ಟಿ ಚಂದ್ರಪ್ಪ, ಎಳಹೊಳೆ ರಾಮು, ಅಮಾನುಲ್ಲಾ ಖಾನ್, ಮಹಮ್ಮದ್ ಜುಬೇರ್, ಅಬ್ದುಲ್ ಬಾಷಿದ್, ಕುರುಬತ್ ಉಲ್ಲಾ, ಮಲೇಬೆನ್ನೂರು ಯೂಸುಫ್ ಇತರರು ಮಾತನಾಡಿದರು.

ಈ ಸಂದರ್ಭದಲ್ಲಿ ಜೆಡಿಸ್ ಗ್ರಾಮಾಂತರ ಘಟಕದ ಅಧ್ಯಕ್ಷ ಪರಮೇಶ್ವರಪ್ಪ, ನಗರ ಘಟಕದ ಅಧ್ಯಕ್ಷ ಹಬೀಬ್ ಉಲ್ಲಾ, ದೀಟೂರು ಶೇಖರಪ್ಪ, ನಗರಸಭೆ ಸದಸ್ಯರಾದ ಉಷ ಮಂಜುನಾಥ್, ನಿಂಬಕ್ಕ ಚಂದಾಪೂರ್, ಜಂಬಣ್ಣ ಗುತ್ತೂರು, ಹೊನ್ನಾಳಿ ಶಿವಮೂರ್ತಿ, ಬಸವನಗೌಡ ವಾಸನ, ಪರಮೇಶ್ವರ ಗೌಡ್ರು, ಫೌಂಡ್ರಿ ಷರೀಫ್ ಸಾಬ್, ಲಕ್ಷ್ಮಿ ರಾಜಾಚಾರ್, ಶೀಲಾ ಕುಮಾರ್, ಹುಗ್ಗಿ ಆಡಿವೇಶ್, ಸುರೇಶ್ ಚಂದಾಪೂರ್, ಅಡಕಿ ಕುಮಾರ್, ಅಮರಾವತಿ ನಾಗರಾಜ್, ಆಸೀಫ್, ಮಾರುತಿ, ಜಾಕೀರ್, ಬನ್ನಿಕೋಡು ಮಹೇಶ್, ಹಾಗೂ ಸಾರಥಿ ಮಂಜುನಾಥ್, ಕೆ. ಶಿವರಾಮ, ರಾಜು ರಾಮತೀರ್ಥ, ದೊಗ್ಗಳ್ಳಿ ಮಹೇಶ್ ಇತರರು ಹಾಜರಿದ್ದರು.

ಹರಿಹರ ನಗರಸಭೆಯಿಂದ ಇ-ಆಸ್ತಿ ಉತಾರ : ದಾಖಲೆಗಳನ್ನು ನೀಡಲು ಕರೆ

ಹರಿಹರ, ಜ.17- ನಗರಸಭೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಆಸ್ತಿಗಳನ್ನು ಗಣಕೀಕರಣಗೊಳಿಸಿ, ಇ-ಆಸ್ತಿ ಉತಾರಗಳನ್ನು ನೀಡಲು ನಗರಸಭೆ ವತಿಯಿಂದ ಕ್ರಮ ಕೈಗೊಳ್ಳಲಾಗಿದೆ ಎಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

ಕರ ವಸೂಲಿಗಾರರು ಹಾಗೂ ಎನ್.ಜಿ.ಓ. ಸಿಬ್ಬಂದಿಗಳು ಸ್ವತ್ತಿನ ಪರಿವೀಕ್ಷಣೆ ನಡೆಸುತ್ತಿದ್ದು, ಪರಿವೀಕ್ಷಣೆದಾರರು ಬಂದಾಗ ಆಸ್ತಿ ಇ-ಉತಾರ, ನಿವೇಶನ/ಕಟ್ಟಡದ ಭಾವಚಿತ್ರ, ಆಸ್ತಿ ಮಾಲೀಕರ ಭಾವಚಿತ್ರ ಮತ್ತು ಗುರುತಿನ ಚೀಟಿ (ವೋಟರ್ ಐಡಿ/ಪ್ಯಾನ್ ಕಾರ್ಡ್/ಪಡಿತರ ಚೀಟಿ/ಡ್ರೈವಿಂಗ್ ಲೈಸನ್ಸ್), ಆಸ್ತಿ ಮಾಲೀಕತ್ವ ದೃಢೀಕರಿಸುವ ಕ್ರಯ ಪತ್ರಗಳು (ಖರೀದಿ ಪತ್ರ/ಪಾಲು ವಿಭಾಗ/ಹಕ್ಕು ಪತ್ರ/ದಾನ ಪತ್ರ/ಸೇಲ್ ಸರ್ಟಿಫಿಕೇಟ್ ಇತ್ಯಾದಿ), ಆಸ್ತಿ ತೆರಿಗೆ ಪಾವತಿಸಿ ಚಲನ್‌ಗಳು ಮತ್ತು ವಿವರ ಪಟ್ಟಿಕೆಗಳು (2002-03 ರಿಂದ 2022-23 ರ ವರೆಗೆ), ಆಸ್ತಿಗೆ ನೀಡಲಾದ ನೀರಿನ ಮತ್ತು ಒಳ ಚರಂಡಿ ಸಂಪರ್ಕದ ತೆರಿಗೆ ಪಾವತಿಸಿದ ರಶೀದಿಗಳು, ವಿದ್ಯುತ್ ಬಿಲ್ ಕಟ್ಟಡ ಆಗಿದ್ದಲ್ಲಿ ಕಟ್ಟಡ ಪರವಾನಗಿ ಪ್ರತಿ ಹಾಗೂ 24x7 ನೀರಿನ ಸಂಪರ್ಕದ ಬಿಲ್, ಋಣಭಾರ ರಾಹಿತ್ಯ ಪತ್ರ (ಇಸಿ ನಮೂನೆ 15) ದಾಖಲೆಗಳನ್ನು ನೀಡಿ ಸಹಕರಿಸಬೇಕೆಂದು ಅವರು ಕೋರಿದ್ದಾರೆ.

ಕ್ರೀಡಾ ಪಟುಗಳಿಗೆ ಆನ್‌ಲೈನ್ ಅರ್ಜಿ ಆಹ್ವಾನ

ದಾವಣಗೆರೆ, ಜ. 17 - ರಾಜ್ಯ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಜಿಲ್ಲಾ ಮಟ್ಟದಿಂದ ಆಯ್ಕೆಯಾದ ಕ್ರೀಡಾ ಪಟುಗಳು ಹೆಸರು ನೋಂದಾಯಿಸಿಕೊಳ್ಳಲು ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲಾ ಮಟ್ಟದ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ, ದ್ವಿತೀಯ ಸ್ಥಾನ ಮತ್ತು ಗುಂಪು ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದವರು ರಾಜ್ಯ ಮಟ್ಟದಲ್ಲಿ ಭಾಗವಹಿಸಲು ಅರ್ಹರಾಗಿದ್ದು, ಆನ್‌ಲೈನ್ ಲಿಂಕ್ https://bit.ly/ks-geasls22-23 ಮೂಲಕ ನೋಂದಾಯಿಸಿಕೊಳ್ಳಲು ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ ತಿಳಿದ್ದಾರೆ.

ಸ್ನೇಹ ಮಹಿಳಾ ಬಳಗದ ವತಿಯಿಂದ ನಗರದಲ್ಲಿ ವಸ್ತು ಪ್ರದರ್ಶನ

ದಾವಣಗೆರೆ, ಜ. 17 – ನಗರದ ಎಂ.ಸಿ.ಸಿ. ಬ್ಲಾಕ್‌ನ ಸ್ನೇಹ ಮಹಿಳಾ ಬಳಗದ ವತಿಯಿಂದ ಬಳಗದ ದಶಮಾನೋತ್ಸವ ಹಾಗೂ ಮಹಿಳೆಯರಿಂದ ತಯಾರಿಸಲ್ಪಟ್ಟ ವಸ್ತುಗಳ ಪ್ರದರ್ಶನವನ್ನು ಆಯೋಜಿಸಲಾಗಿತ್ತು.

ಡಾ. ಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿಯವರ ಹಿರೇಮಠದಲ್ಲಿ ಇಂದು ನಡೆದ ಒಂದು ದಿನದ ಕಾರ್ಯಕ್ರಮದ ಉದ್ಘಾಟನೆಯನ್ನು ದಾವಣಗೆರೆ ವಿ.ವಿ. ಉಪನ್ಯಾಸಕರಾದ ಡಾ. ಗಾಯತ್ರಿ ದೇವರಾಜ್ ನೆರವೇರಿಸಿದರು.

25ಕ್ಕೂ ಹೆಚ್ಚು ಮಹಿಳೆಯರು ತಾವು ತಯಾರಿಸಿದ ಉತ್ಪನ್ನಗಳು ಹಾಗೂ ಆಹಾರಗಳನ್ನು ವಸ್ತು ಪ್ರದರ್ಶನದಲ್ಲಿ ಮಾರಾಟಕ್ಕೆ ಇರಿಸಿದ್ದರು.

ಅಂತರರಾಷ್ಟ್ರೀಯ ಸಿರಿ ಧಾನ್ಯ ದಿನಾಚರಣೆಯ ಹಿನ್ನೆಲೆಯಲ್ಲಿ ಹಲವಾರು ಸಿರಿಧಾನ್ಯ ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಇದರ ಜೊತೆಗೆ ಕರಕುಶಲ ವಸ್ತುಗಳು, ಕೈಗಾರಿಕಾ ಉತ್ಪನ್ನಗಳು ಹಾಗೂ ಆಹಾರ ವಸ್ತುಗಳನ್ನು ಮಹಿಳೆಯರು ಮಾರಾಟಕ್ಕೆ ಇರಿಸಿದ್ದರು.

ಈ ಸಂದರ್ಭದಲ್ಲಿ ಬಳಗದ ಗೌರವಾಧ್ಯಕ್ಷೆ ಮಂಜುಳಾ ಬಸವಲಿಂಗಪ್ಪ, ಅಧ್ಯಕ್ಷೆ ಮಂಜುಳ ನಿಂಗಪ್ಪ, ಬಳಗದ ಸುವರ್ಣ ದೊಗ್ಗಳ್ಳಿ, ಚೇತನ ಲಿಂಗರಾಜ್, ರೇಖ ಸುದರ್ಶನ್, ಕವಿತ, ರಾಜೇಶ್ವರಿ, ಅನ್ನಪೂರ್ಣ ಮತ್ತಿತರರು ಉಪಸ್ಥಿತರಿದ್ದರು.

ಸಾಂಪ್ರದಾಯಿಕ ತೊಡುಗೆಯಲ್ಲಿ ವಿದ್ಯಾರ್ಥಿಗಳು

ದಾವಣಗೆರೆಯ ತರಳಬಾಳು ಶಾಲೆಯಲ್ಲಿ ಸೋಮವಾರ ಏರ್ಪಾಡಾಗಿದ್ದ ಕಲಾ ಮತ್ತು ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಸಾಂಪ್ರದಾಯಿಕ ಉಡುಗೆ ತೊಟ್ಟು, ಸಂಪ್ರದಾಯಿಕ ಅಡುಗೆ ತಯಾರಿಯಲ್ಲಿ ನಿರತರಾದ ವಿದ್ಯಾರ್ಥಿನಿಯರು.

22ಕ್ಕೆ ಜಿಲ್ಲಾ ಬಣಜಾರ ನೌಕರರ ಸಭೆ

ದಾವಣಗೆರೆ, ಜ.17- ಜಿಲ್ಲಾ ಬಣಜಾರ (ಲಂಬಾಣಿ) ನೌಕರರ ಕಲ್ಯಾಣ ಅಭಿವೃದ್ಧಿ ಸಂಸ್ಥೆಯ ಸಾಮಾನ್ಯ ಸಭೆಯನ್ನು ಇದೇ ದಿನಾಂಕ 22 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಸಂಸ್ಥೆಯ ಕಚೇರಿಯಲ್ಲಿ ಕರೆಯಲಾಗಿದೆ ಎಂದು ಸಂಸ್ಥೆ ಕಾರ್ಯದರ್ಶಿ ಸಿ. ಸಣ್ಣರೆಡ್ಡಿ ನಾಯ್ಕ ತಿಳಿಸಿದ್ದಾರೆ.

ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ

ಶಾಂತಲಾ ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ.
9686195327

ಸಾಧನೆಯ ಹಾದಿಗೆ ಪ್ರೇರೇಪಿಸುವ ಶಿಕ್ಷಣ ಅಗತ್ಯವಾಗಿದೆ

ಬಾಪೂಜಿ ವಿದ್ಯಾಸಂಸ್ಥೆ ಖಜಾಂಚಿ ಎ.ಎಸ್. ನಿರಂಜನ

ದಾವಣಗೆರೆ, ಜ.17- ಸಾಧನೆಯ ಹಾದಿಗೆ ಪ್ರೇರೇಪಿಸುವಂತಹ ಶಿಕ್ಷಣವು ಇಂದಿನ ಅವಶ್ಯವಾಗಿದ್ದು, ಪ್ರತಿ ವಿದ್ಯಾರ್ಥಿಯ ವೈಯಕ್ತಿಕ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ಕಾರ್ಯವು ಶಿಕ್ಷಣ ಸಂಸ್ಥೆಗಳಿಂದ ಆಗಬೇಕಾಗಿದೆ ಎಂದು ಬಾಪೂಜಿ ವಿದ್ಯಾಸಂಸ್ಥೆಯ ಖಜಾಂಚಿ ಎ.ಎಸ್. ನಿರಂಜನ ಅಭಿಪ್ರಾಯಪಟ್ಟರು.

ನಗರದ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ವೇದಿಕೆ, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ನಾಯಕತ್ವ ಗುಣ, ಸೋದರತ್ವ ಭಾವವನ್ನು ಶಿಕ್ಷಣದೊಂದಿಗೆ ಬೆಳೆಸಿಕೊಳ್ಳಬೇಕು. ವ್ಯಕ್ತಿತ್ವ ರೂಪಣೆಗೆ ಶಿಕ್ಷಣ ಒಂದೇ ಸಾಲದು, ಪಠ್ಯೇತರ ಚಟುವಟಿಕೆಗಳಲ್ಲಿನ ಅನುಭವವೂ ಪೂರಕವಾಗಿಬೇಕು. ಶಿಕ್ಷಕರ ಮಾರ್ಗದರ್ಶನವನ್ನು ವಿದ್ಯಾರ್ಥಿಗಳು ಸಹಾ ನಿರ್ಲಕ್ಷಿಸದೆ ಸ್ವೀಕರಿಸಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಪದವೀಧರರಾದರೂ ಕೃಷಿ ಕ್ಷೇತ್ರವನ್ನು ಪ್ರವೇಶಿಸಿ ರೈತರಾಗಲು ಹಿಂಜರಿಕೆ ಬೇಡ. ಸ್ಪರ್ಧಾತ್ಮಕ ಪರೀಕ್ಷೆಗಳ ಮಾಹಿತಿ ಪಡೆದು ಭಾಗವಹಿಸಿ ಅವಕಾಶಗಳನ್ನು ಗಿಟ್ಟಿಸಿಕೊಳ್ಳಬೇಕು. ಇದಕ್ಕಾಗಿ ಮೊಬೈಲ್ ಚಟದಿಂದ ದೂರವಿದ್ದು, ವಿದ್ಯಾರ್ಜನೆಯ ಕಡೆಗೆ ಗಮನ ನೀಡಿರಿ ಎಂದು ಕರೆ ಕೊಟ್ಟರು. ಪ್ರಸ್ತುತ ದೇಶದ ರಾಷ್ಟ್ರಪತಿ ಹಾಗೂ ಹಣಕಾಸು ಸಚಿವರಾಗಿ ಮಹಿಳೆಯರು ಉತ್ತಮ ಕಾರ್ಯ ನಿರ್ವಹಿಸುತ್ತಿದ್ದು, ಇದು ವಿದ್ಯಾರ್ಥಿನಿಯರಿಗೆ ಸ್ಫೂರ್ತಿದಾಯಕ ಅಂಶವಾಗಿದೆ ಎಂದರು.

ಸಮಾರೋಪ ಮಾತುಗಳನ್ನಾಡಿದ ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಅನಿತಾ ಹೆಚ್. ದೊಡ್ಡಗೌಡರ್, ಸಾಧನೆ ಎಂದರೆ ಪರೀಕ್ಷೆಯಲ್ಲಿ ನೂರಕ್ಕೆ ನೂರು ಅಂಕ ಗಳಿಸುವುದು ಅಷ್ಟೇ ಅಲ್ಲ, ನಿಮ್ಮಲ್ಲಿನ ವಿಶೇಷತೆಯನ್ನು ನೀವೇ ಗುರುತಿಸಿಕೊಂಡು ಅದನ್ನು ಪ್ರತಿಭೆಯಾಗಿ ಮಾರ್ಪಡಿಸಿಕೊಂಡು ಬೆಳೆಯುವುದೇ ಸಾಧನೆ ಎಂದರಲ್ಲದೇ ಸ್ನೇಹ, ವಾಹನ ಹಾಗೂ ಮೊಬೈಲ್ ಮೋಹದ ಬಗ್ಗೆ ಜಾಗ್ರತರಾಗಿರಬೇಕು. ಇದು ಅತಿಯಾದರೆ ಹಾದಿ ತಪ್ಪುವ ಸಂಭವವಿದೆ ಎಂದರು. ಅಭ್ಯಾಸಕ್ಕೆ ಸಮಯ ನಿಗದಿಪಡಿಸಿಕೊಂಡು ವೇಳಾಪಟ್ಟಿಯಂತೆ ಶಿಸ್ತು ಬದ್ಧವಾಗಿ ವ್ಯಾಸಂಗ ಮಾಡಬೇಕು. ಓದನ್ನು ತಪಸ್ಸು ಎಂದು ತಿಳಿಯಬೇಕೇ ಹೊರತು ಭಯಪಡಬಾರದು ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಪ್ರೊ. ಎಂ. ಪಿ. ರುದ್ರಪ್ಪ ಅವರು ಮಾತನಾಡಿ, ಪ್ರಯತ್ನವಿಲ್ಲದೆ ಹೋದರೆ ಪ್ರತಿಭೆ ಪ್ರಕಟವಾಗುವುದಿಲ್ಲ. ಕ್ರೀಡಾ, ಸಾಂಸ್ಕೃತಿಕ ಚಟುವಟಿಕೆಗಳು ಜೀವನ ಪರೀಕ್ಷೆಗೆ ಅವಶ್ಯ. ಓದು ಶಾಲಾ ಪರೀಕ್ಷೆಗೆ ಅವಶ್ಯ ಎಂದರು.

ವಿವಿಧ ಸ್ಪರ್ಧೆಗಳ ವಿಜೇತರಿಗೆ ಯುವ ನಟ ಪೃಥ್ವಿ ಶಾಮನೂರು ಬಹುಮಾನ ವಿತರಿಸಿ, ಮಾತನಾಡಿದರು. ಕೀರ್ತಿ ಮತ್ತು ಸಹನಾ ನಿರೂಪಿಸಿದ ಕಾರ್ಯಕ್ರಮದಲ್ಲಿ ಪ್ರಾರ್ಥನೆಯನ್ನು ಜಯಶೀಲ ಹಾಡಿದರು. ಭಾವನಾ ಸ್ವಾಗತ ಕೋರಿದರೆ, ಆಯಿಷಾ ಸಿದ್ಧಿಕ, ಅರ್ಪಿತ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು.

ವಾರ್ಷಿಕ ವರದಿ ವಾಚನವನ್ನು ಜೀವಶಾಸ್ತ್ರ ಉಪನ್ಯಾಸಕಿ ಎಲ್.ಎಸ್. ಶರ್ಮಿಳ ಮಾಡಿದರು. ಬಹುಮಾನಿತರ ಹೆಸರುಗಳನ್ನು ರಸಾಯನ ಶಾಸ್ತ್ರ ಉಪನ್ಯಾಸಕ ಬಿ.ಎಂ. ಶಿವಕುಮಾರ್ ಘೋಷಿಸಿದರೆ, ಸಾಂಸ್ಕೃತಿಕ ಕಾರ್ಯಕ್ರಮಗಳ ನಿರೂಪಣೆಯನ್ನು ಭುವನೇಶ್ವರಿ, ಯಶೋಧ, ಸಂಜನಾ ನಿರ್ವಹಿಸಿದರು. ವಿದ್ಯಾರ್ಥಿ ವೇದಿಕೆ ಪದಾಧಿಕಾರಿಗಳಾದ ಶ್ರೀದೇವಿ, ಗೌತಮ್, ಸಚಿನ್, ಕೀರ್ತಿ, ದರ್ಶನ್ ಪಾಟೀಲ್, ಅಂಜಿನಿ, ಸಿಂಧು, ದೀಪಿಕಾ, ಅರುಣ್, ಪ್ರೀತಿ, ಬೀರೇಶ್ ಉಪಸ್ಥಿತರಿದ್ದರು. ಮಹಮ್ಮದ್ ಹುಜೇಫಾ ವಂದನೆ ಸಲ್ಲಿಸಿದರು.

ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ

ಈ ಕೆಳಗಿನ ಪರಿಸ್ಥಿತಿಗಳಿಂದ ಬಳಲುತ್ತಿದ್ದರೆ, ನೀವು ಅಪಾಯದಲ್ಲಿರಬಹುದು!

- ಕೊಬ್ಬಿನ ಯಕೃತ್ತು
- ದೀರ್ಘಕಾಲದ ಮದ್ಯ ಸೇವನೆ
- ಬೊಜ್ಜು
- ಮಧುಮೇಹ
- ಹೆಪಟೈಟಿಸ್ ಬಿ ಮತ್ತು ಸಿ ಸೋಂಕು

~~₹5000~~ ಮೌಲ್ಯದ ಲಿವರ್ ಫೈಬ್ರೋಸಿಸ್ ಸ್ಕ್ಯಾನ್ ಈಗ ಕೇವಲ ₹500 ಕ್ಕೆ



ಲಿವರ್ ಫೈಬ್ರೋಸಿಸ್ ಸ್ಕ್ಯಾನ್ ಮಾಡಿಸುವುದು ಉತ್ತಮ
ಗ್ಯಾಸ್ಟ್ರೋಎಂಟರಾಲಜಿಸ್ಟ್ ರೊಂದಿಗೆ ಉಚಿತ ಸಮಾಲೋಚನೆ ಹಾಗೂ ಸ್ಕ್ಯಾನ್‌ಗಾಗಿ ನೋಂದಾಯಿಸಲು
08192-260111/7022260111 ಗೆ ಕರೆ ಮಾಡಿ

ಸ್ಕ್ಯಾನ್ ದಿನಾಂಕ: 19ನೇ ಜನವರಿ 2023
ಈ ಸ್ಕ್ಯಾನ್ ಶಿಬಿರವು ಪ್ರತಿ ತಿಂಗಳ 3ನೇ ಗುರುವಾರ ಇರುತ್ತದೆ*

ಮಾಗನೂರು ಬಸಪ್ಪ ರಸ್ತೆ (ಹದಡಿ ರಸ್ತೆ), ತರಳಬಾಳು ಬಡಾವಣೆ, ದಾವಣಗೆರೆ

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte